ರಂಜನೆ ಬೋಧನೆ ಪ್ರಚೋದನೆ

# ಲಂಕೇಶ್


ಅಕ್ಟೋಬರ್ 10, 2007 ರೂ.10/-




# CM ಯಾರು?



## ಸುನೀಲನ ಸ್ಕೋಡಾ ಕಾರು ರಬ್ಬರ್ ಎಸ್ಟೇಟ್!



## ಕಟ್ಟಾ : 3644 ಎಕರೆ ಗುಳುಂ!



## ವಿಷ ನೀಡಿ ಶಿವಪುರಿ ಸ್ವಾಮಿ ಕೊಲೆ?



## ಗುಲ್ಬರ್ಗಾ: 'ಡಾನ್' ಸ್ವಾಮಿಗಳು



# ಕ್ರೀಡೆ, ಧರ್ಮಾಂಧತೆ ಮತ್ತು ಶೋಯಬ್ ಮಲ್ಲಿಕ್ ಎಂಬ ಮುಠ್ಠಾಳ!

ಚಾರ್ವಾಕ

- ಶಿವಸುಂದರ್-

ಪಾಕಿಸ್ತಾನ ಮತ್ತು ಭಾರತದ ನಡುವಿನ ಕ್ರಿಕೆಟ್ ಮ್ಯಾಚುಗಳನ್ನು ಭಾರತದ ಹಿಂದೂತ್ವವಾದಿ ಶಕ್ತಿಗಳು ಮುಸ್ಲಿಮರ ವಿರುದ್ಧ ಜನಾಭಿಪ್ರಾಯ ರೂಪಿಸಲು ಬಳಸಿಕೊಂಡಿದ್ದಾರೆ. ಈಗಲೂ ಪ್ರಯತ್ನ ಮುಂದುವರೆಸಿದ್ದಾರೆ. ಆದರೆ ಭಾರತದಲ್ಲಿರುವ ಮುಸ್ಲಿಮರಲ್ಲಿ ಬಹುಸಂಖ್ಯಾತರ ಜೀವನ ಹೊಟ್ಟೆಪಾಡನ್ನು ನೋಡಿಕೊಳ್ಳುವುದರಲ್ಲಿಯೇ ಕಳೆದುಹೋಗುತ್ತಿದ್ದು ಕ್ರಿಕೆಟ್ ಆಟದಲ್ಲಾಗಲೀ ಕ್ರಿಕೆಟ್ ರಾಜಕಾರಣದಲ್ಲಾಗಲೀ ಅವರು ಪಾಲುದಾರರಾಗುವುದು ಅಪರೂಪ. ಆದರೂ ಅಲ್ಲಲ್ಲಿ ಹಿಂದೂತ್ವವಾದಿಗಳ ಅಪಪ್ರಚಾರದ ವಿರುದ್ಧ ಪ್ರತ್ಯುತ್ತರವಾಗಿ ಮುಸ್ಲಿಮ್ ಯುವ ಸಮುದಾಯ ಸಹ ಧ್ವನಿ ಎತ್ತುತ್ತಿದ್ದಾರೆ. ಅಲ್ಲಲ್ಲಿ ಯಾರಾದರೂ ಕೆಲವರು ಪಾಕಿಸ್ತಾನದ ಪರವಾಗಿ ಧ್ವನಿ ಎತ್ತಿದರೆ ಅದನ್ನು ಇಡೀ ಸಮುದಾಯಕ್ಕೆ ಹೇಗೆ ಅನ್ವಯಿಸಲು ಸಾಧ್ಯ ಎಂದು ಪ್ರಶ್ನಿಸುತ್ತಿದ್ದಾರೆ.

ಪರಿಸ್ಥಿತಿ ಹೀಗಿರುವಾಗ ಮೊನ್ನೆ ಟ್ವೆಂಟಿ-20 ವಿಶ್ವಕಪ್ ಪಂದ್ಯದಲ್ಲಿ ಭಾರತ-ಪಾಕಿಸ್ತಾನದ ನಡುವೆ ಫೈನಲ್ಸ್ ನಡೆದು ಭಾರತ ವಿಶ್ವಕಪ್ ಗೆದ್ದಿತಷ್ಟೆ. ಪಂದ್ಯದ ಬಹುಮಾನ ವಿತರಣಾ ಸಂದರ್ಭದಲ್ಲಿ ಪಾಕಿಸ್ತಾನದ ನಾಯಕ ಶೋಯಬ್ ಮಲ್ಲಿಕ್ ತಮ್ಮ ತಂಡ ಸಂಪೂರ್ಣ ಸಾಮರ್ಥ್ಯದಿಂದ ಆಡಿದೆಯೆಂದೂ, ತಮ್ಮನ್ನು ಪಾಕಿಸ್ತಾನದ ಜನತೆ ಮತ್ತು ವಿಶ್ವದ ಮುಸ್ಲಿಮರೆಲ್ಲಾ ಕ್ಷಮಿಸಬೇಕೆಂದೂ ಮನವಿ ಮಾಡಿದರು. ಇದು ಅತ್ಯಂತ ಮುಠಾಳತನದ ಹೇಳಿಕೆಯೇ ಹೊರತು ಬೇರೇನಲ್ಲ, ಏಕೆಂದರೆ ಪಾಕಿಸ್ತಾನದ ಕ್ರಿಕೆಟ್ ತಂಡ ಪ್ರತಿನಿಧಿಸಿದ್ದು ಪಾಕಿಸ್ತಾನವನ್ನೇ ವಿನಃ ಇಡೀ ಪ್ರಪಂಚದ ಮುಸ್ಲಿಮರನ್ನಲ್ಲ ಹಾಗೂ ಭಾರತ ಮತ್ತು ಪಾಕಿಸ್ತಾನದ ನಡುವಿನ ಕ್ರಿಕೆಟ್ ಪೈಪೋಟಿ ಹಿಂದೂ-ಮುಸ್ಲಿಂ ಧರ್ಮೀಯರ ಪೈಪೋಟಿಯೂ ಅಲ್ಲ, ಮತ್ತು ಕ್ರಿಕೆಟ್ ಆಟದಲ್ಲಿನ ಸೋಲು ಒಂದು ಧರ್ಮೀಯರ ಸೋಲೂ ಅಲ್ಲ. ಆಟವನ್ನು ಕೇವಲ ಆಟವನ್ನಾಗಿ ಮಾತ್ರವಲ್ಲದೆ ಒಂದು ಧರ್ಮದ ಲಾಂಛನವನ್ನಾಗಿ ನೋಡುವ ಮನೋಭಾವ ಮತ್ತೊಂದು ರೀತಿಯ ಕೋಮುವಾದವೇ ಆಗುತ್ತದೆ. ಏಕೆಂದರೆ ಆಗ ಆಟದ ಮೈದಾನದಲ್ಲಿ ನಡೆಯುವುದು ಆಟವಲ್ಲ, ಪರಧರ್ಮ ದ್ವೇಷ. ಅನ್ಯಾಕ್ರಮಣ.

ಆದರೆ ಹಿಂದೂತ್ವವಾದಿಗಳು ನಿರಾಶೆಗೊಳ್ಳುವಂತೆ ಶೋಯಬ್ ಮಲ್ಲಿಕ್‌ನ ಈ ಬೇಜವಾಬ್ದಾರಿ ಮತ್ತು ಮುಠ್ಠಾಳುತನದ ಹೇಳಿಕೆಯನ್ನು ಭಾರತದ ಹಲವಾರು ಮುಸ್ಲಿಂ ಬುದ್ಧಿಜೀವಿಗಳು ಮತ್ತು ಮುಸ್ಲಿಂ ಸಂಘಟನೆಗಳು ಖಂಡಿಸಿವೆ. ಶೋಯಬ್ ಮಲ್ಲಿಕ್‌ರ ಹೇಳಿಕೆ ಮುಸ್ಲಿಮರ ಅಥವಾ ಪಾಕಿಸ್ತಾನದ ಪ್ರಾತಿನಿಧಿಕ ಹೇಳಿಕೆಯಲ್ಲವೆಂದು ಈ ಪ್ರತಿಕ್ರಿಯೆಗಳು ಸ್ಪಷ್ಟಪಡಿಸಿವೆ.

ಆದರೂ ಬೆಂದ ಮನೆಯಲ್ಲಿ ಗಳ ಹಿರಿಯುವ ಪ್ರವೃತ್ತಿಯವರಾದ ಸಂಘ ಪರಿವಾರ ಶೋಯಬ್ ಮಲ್ಲಿಕ್‌ನ ಹೇಳಿಕೆಯನ್ನು ತಮ್ಮ ಮುಸ್ಲಿಂ ವಿರೋಧಿ ಅಪಪ್ರಚಾರದ ಶಸ್ತ್ರಾಗಾರಕ್ಕೆ ಸೇರಿಸಿಕೊಂಡಿದ್ದಾರೆ. ಅದನ್ನು ಬಳಸಿಕೊಂಡು ಮತ್ತೆ ಭಾರತದ ಮುಸ್ಲಿಮರ ಮೇಲೆ ವಿಫಲ ದಾಳಿ ನಡೆಸುವ ಪ್ರಯತ್ನವನ್ನು ನಡೆಸಿದ್ದಾರೆ. ಉತ್ತರ ಭಾರತದಲ್ಲಿ ಹಲವಾರು ಕಡೆ ಇದನ್ನು ಬಳಸಿಕೊಂಡು ಗಲಭೆ ಎಬ್ಬಿಸಲು ಪ್ರಾರಂಭಿಸಿದರೂ ಪ್ರಜ್ಞಾವಂತ ಹಿಂದೂಗಳು ಮತ್ತು ಎಚ್ಚೆತ್ತ ಮುಸ್ಲಿಂ ಜನತೆ ಹಿಂದೂತ್ವವಾದಿಗಳ ಹುನ್ನಾರವನ್ನು ಸೋಲಿಸಿದ್ದಾರೆ.

ಆದರೆ ಶೋಯಬ್ ಮಲ್ಲಿಕ್‌ನಂಥವರ ಆ ಬಗೆಯ ಹೇಳಿಕೆ ಪಾಕಿಸ್ತಾನದಲ್ಲಿನ ಇಂದಿನ ರಾಜಕಾರಣ ಮತ್ತು ಅಲ್ಲಿನ ಸಮಾಜದ ಪರಿಸ್ಥಿತಿಗೆ ಸಾಂಕೇತಿಕವಾಗಿದೆ ಹಾಗೂ ಭಾರತ ಏನಾಗಬಾರದೆಂಬುದಕ್ಕೂ ಒಂದು ಎಚ್ಚರಿಕೆಯಾಗಿದೆ.



ಮೊದಲನೆಯದಾಗಿ ಸ್ಥಾವರ ಮತ್ತು ಕರ್ಮಠ ಧರ್ಮದ ಆಧಾರದಲ್ಲಿ ಇಂದಿನ ಸಮಾಜವನ್ನು ನಿಯಂತ್ರಿಸುವ ವ್ಯವಸ್ಥೆ ಮನುಷ್ಯನ ಮೂಲಭೂತ ಸಾಮಾಜಿಕ ಜೀವನವನ್ನು ಮತ್ತು ಆಧ್ಯಾತ್ಮಿಕ ವಿಕಸನವನ್ನು ತಡೆಗಟ್ಟುತ್ತದೆ ಮತ್ತು ಆ ಬಗೆಯ ಸರ್ವಾಧಿಕಾರಕ್ಕೇರಿದ ಧರ್ಮ ತನ್ನ ನಿರಂಕುಶತ್ವದಲ್ಲಿ ಏಕರೂಪಿ ಸಮಾಜವನ್ನೇ ನಿರ್ಮಿಸಿ ಬಹುರೂಪತೆಯನ್ನು ನಾಶಮಾಡುತ್ತದೆ ಮತ್ತು ಮನುಷ್ಯನ ಮಾನಸಿಕ ಲೋಕದ ವಿಕಸನ ಪ್ರಕ್ರಿಯೆಯನ್ನೂ ತಡೆಗಟ್ಟುತ್ತದೆ. ಅದನ್ನು ಆಧರಿಸಿದ ರಾಜಕಾರಣ ಜನತೆಯನ್ನು ಶಾಶ್ವತವಾಗಿ ಧರ್ಮಾಂಧತೆಯಲ್ಲೇ ಇಟ್ಟುಕೊಳ್ಳುತ್ತದೆ. ಅದರ ದುರ್ಲಾಭವನ್ನು ಸಮಾಜವನ್ನು ಶಾಶ್ವತವಾಗಿ ಶೋಷಿಸುತ್ತಾ ಬಂದ ವರ್ಗಗಳೇ ಪಡೆದುಕೊಂಡು ತಮ್ಮ ಶೋಷಣೆಯನ್ನು ಮುಂದುವರೆಸುತ್ತವೆ.

ಪಾಕಿಸ್ತಾನದಲ್ಲಿ ಆಗುತ್ತಿರುವುದು ಇದೇ. ಧರ್ಮಾಂಧತೆಯನ್ನು ಪೋಷಿಸುವುದೇ ಆ ದೇಶದ ಆಳುವ ವರ್ಗಗಳು ಆಧುನಿಕ ಯುಗದಲ್ಲಿ ಕಂಡುಕೊಂಡಿರುವ ತಂತ್ರ. ಹೀಗಾಗಿ ಬಹುಸಂಸ್ಕೃತಿ ಸಮಾಜ ವೊಂದರಲ್ಲಿ ಅರಳುವ ಆರೋಗ್ಯ ಮನಸ್ಥಿತಿಯನ್ನು ತನ್ನ ಹುಟ್ಟಿನಲ್ಲೇ ಕಳೆದುಕೊಂಡಿರುವ ಆ ದೇಶಕ್ಕೆ ವಕ್ಕರಿಸುವವರೆಲ್ಲಾ ನಮ್ಮ ದೇಶದ ಹಿಂದೂತ್ವವಾದಿಗಳಂತಹ ಮತಾಂಧತೆಯನ್ನು ಮತ್ತು ಧರ್ಮಾಂಧತೆಯನ್ನು ಪೋಷಿಸುವ ರಾಜಕಾರಣಿಗಳೇ. ಹೀಗಾಗಿ ಅದು ಕ್ರಿಕೆಟ್ ಫೀಲ್ಡಿನಲ್ಲೂ ಮತ್ತು ಡ್ರೆಸಿಂಗ್ ರೂಮಿನಲ್ಲೂ ಬೆನ್ನತ್ತುತ್ತದೆ.

ಅದ್ದಬೀಳುವುದನ್ನು ಎಲ್ಲಾ ತಂಡಗಳು ಮಾಡುತ್ತವೆ. ಹೆಚ್ಚುಕಮ್ಮಿ ಎಲ್ಲಾ ಆಟಗಾರರೂ ಮಾಡುತ್ತಾರೆ. ಸಚಿನ್ ತೆಂಡೂಲ್ಕರ್‌ನಂಥವರು ಫಾರಮ್ ಕಳೆದುಕೊಂಡಾಗ ಕುಕ್ಕೆ ಸುಬ್ರಹ್ಮಣ್ಯ ಯಾತ್ರೆಯನ್ನು ಮಾಡಿ ತಮ್ಮ ಮೌಢ್ಯವನ್ನು ಪ್ರದರ್ಶಿಸುತ್ತಾರೆ. ಅದು ಸಹ ನಮ್ಮ ದೇಶದ ಆಧುನಿಕ ಮಧ್ಯಮ ವರ್ಗದ ವ್ಯಕ್ತಿತ್ವದಲ್ಲಿನ ಬಿಕ್ಕಟ್ಟಿಗೆ ಮತ್ತು ಈ ದೇಶದ ಅಪರಿಪೂರ್ಣ ಆಧುನಿಕತೆಗೆ ಸಂಕೇತವಾಗಿದೆ. ಅದು ಬೇರೆ ವಿಷಯ.

ಆದರೆ ಕ್ರಮೇಣವಾಗಿ ಈ ಧಾರ್ಮಿಕತೆಯೇ ಸಮಾಜದಲ್ಲಿ ಬೆಳೆಯುತ್ತಿರುವ ಕೋಮುವಾದದ ಹಿನ್ನೆಲೆಯಲ್ಲಿ ಪರದೇಶ ದ್ವೇಷ ಮತ್ತು ಪರಮತ ದ್ವೇಷವಾಗಿ ಬದಲಾಗುತ್ತಿದೆ. ಇಲ್ಲೂ ಪಾಕಿಸ್ತಾನದ ವಿರುದ್ಧದ ಮ್ಯಾಚನ್ನು ಕೇವಲ ಮ್ಯಾಚೆಂದು ಪರಿಗಣಿಸದೆ ಸಮಾಜದಲ್ಲಿ ಹಿಂದೂತ್ವವಾದಿಗಳು ಹುಟ್ಟಿಹಾಕಿರುವ ಪಾಕಿಸ್ತಾನ ವಿರೋಧಿ ಭಾವನೆಗಳೊಂದಿಗೆ ಮತ್ತು ಅಂತರ್ಯದಲ್ಲಿ ಮುಸ್ಲಿಂ ವಿರೋಧಿ ಭಾವನೆಗಳೊಂದಿಗೆ ಆಡುವ ಆಟಗಾರರು ಇಲ್ಲವೇ ಇಲ್ಲ ಎಂದೇನೂ ಅಲ್ಲ. ಆದರೆ ಭಾರತದ ತಂಡದಲ್ಲಿ ಐತಿಹಾಸಿಕ ಕಾರಣಗಳಿಗಾಗಿ ಕೇವಲ ಹಿಂದೂ ಬ್ರಾಹ್ಮಣ ಆಟಗಾರರಲ್ಲದೆ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಮತ್ತು ಸಿಖ್ಖರು ಹಾಗೂ ಅಪರೂಪಕ್ಕೊಮ್ಮೆ ಒಬ್ಬ ಅಮರನಾಥ್ ಅಥವಾ ವಿನೋದ್ ಕಾಂಬ್ಳಿಯಂಥ ದಲಿತರು ಸೇರ್ಪಡೆಯಾಗುತ್ತಾರಾದ್ದರಿಂದ ಫೀಲ್ಡಿನಲ್ಲಿ ಮತ್ತು ಡ್ರೆಸಿಂಗ್ ರೂಮಿನಲ್ಲಿ ವಿವಿಧ ಧ್ವನಿಗಳ ಪ್ರತಿಭೆಗಳ ಅನಿವಾರ್ಯ ಸಂಗಮವಿರುತ್ತದೆ. ಹೀಗಾಗಿ ಪಾಕಿಸ್ತಾನದಲ್ಲಿ ಕಂಡುಬರುವಷ್ಟು ಹಸಿಹಸಿಯಾಗಿ ಇಲ್ಲಿನ ಧರ್ಮಾಂಧತೆ ಈ ಸದ್ಯಕ್ಕೆ ಇಲ್ಲ. ಒಬ್ಬ ಇರ್ಫಾನ್ ಪಠಾಣ್, ಒಬ್ಬ ಜಹೀರ್ ಖಾನ್ ಇನ್ನೂ ಈ ದೇಶದಲ್ಲಿ ಸ್ಥಾನ ಪಡೆಯುತ್ತಿದ್ದಾರೆ. ಶೋಯಬ್ ಮಲ್ಲಿಕ್ ಮೇಲಿನ ಹೇಳಿಕೆ ನೀಡಿದ ಮರುಕ್ಷಣವೇ ಮ್ಯಾನ್ ಆಫ್ ದಿ ಮ್ಯಾಚ್ ಪ್ರಶಸ್ತಿ ಪಡೆದದ್ದೂ ಸಹ ಇರ್ಫಾನ್ ಪಠಾಣರೇ. ಈ ಸಂಸ್ಕೃತಿ ಸಂಗಮ ಇನ್ನೂ ಸಾಧ್ಯವಾಗಿರುವುದು ಈ ದೇಶದ ಬಹುಸ್ವರೂಪಿ ಸಮಾಜ ಮತ್ತು ಇಲ್ಲಿ ಶೂದ್ರ-ದಲಿತ ಸಮುದಾಯದಲ್ಲಿ ಆಳವಾಗಿ ಬೇರೂರಿರುವ ಸ್ವಾಭಿಮಾನಿ ಪ್ರಜ್ಞೆ ಮತ್ತು ಅದು ತಂದಿರುವ ಪ್ರಜಾತಾಂತ್ರಿಕ ಪ್ರಜ್ಞೆಯಿಂದಾಗಿ. ಸಮಾಜದಲ್ಲಿ ಬೇರು ಬಿಟ್ಟಿರುವ ಈ ಪ್ರಜಾತಾಂತ್ರಿಕ ಪ್ರಜ್ಞೆಯಿಂದಾಗಿಯೇ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಹಿಟ್ಲರ್ ನಡೆಸಿದಂತಹ ನರಮೇಧಗಳನ್ನೂ ಮಾಡಲು ಸಾಧ್ಯವಾಗುತ್ತಿಲ್ಲ ಮತ್ತು ಹಿಂದೂತ್ವವಾದಿಗಳು ಸಂಪೂರ್ಣ ಜಯಭೇರಿ ಬಾರಿಸಲಾಗಿಲ್ಲ. ಆದ್ದರಿಂದಲೇ ಇನ್ನೂ ಸಮಾಜದಲ್ಲಿ ಮತ್ತು ಕ್ರಿಕೆಟ್ ಫೀಲ್ಡ್ ಮತ್ತು ಡ್ರೆಸಿಂಗ್ ರೂಮಿನಲ್ಲಿ ಸಹ ಪ್ರಜಾತಂತ್ರ ಮತ್ತು ಬಹು ಸಂಸ್ಕೃತಿಗಳು ಉಸಿರಾಡುತ್ತಿವೆ. ಒಮ್ಮೆ ಸಮಾಜದಲ್ಲಿ ಧರ್ಮಾಂಧರ ಜಯಭೇರಿ ಹೆಚ್ಚಾಗತೊಡಗಿದೊಡನೆ ಅದು ಕ್ರಿಕೆಟ್ ಫೀಲ್ಡಿಗೆ ವಿಸ್ತರಿಸುವುದು ದೂರದ ಮಾತಲ್ಲ.





ಭಾರತ ತಂಡದ ಪರಿಸ್ಥಿತಿ ಹೀಗಿಲ್ಲ ಎಂಬುದೇನೋ ನಿಜವೇ. ಪಾಕಿಸ್ತಾನದ ಬಹು ಪಾಲು ಕ್ರಿಕೆಟಿಗರೂ ಉತ್ತಮ ಇಂಗ್ಲಿಷ್ ಮಾತನಾಡುವುದಿಲ್ಲ ಎಂಬುದು ಪಾಕಿಸ್ತಾನದಲ್ಲಿ ಆಧುನಿಕ ಇಂಗ್ಲಿಷ್ ಶಿಕ್ಷಣ ಎಲ್ಲರಿಗೂ ಲಭ್ಯವಿಲ್ಲ ಎಂಬುದಕ್ಕೆ ಮತ್ತು ದೊರೆಯುತ್ತಿರುವುದು ಧಾರ್ಮಿಕ ಶಿಕ್ಷಣ ಎಂಬುದನ್ನು ಸೂಚಿಸುತ್ತದೆ.
ಅದೇ ರೀತಿ ಭಾರತದ ತಂಡದ ಎಲ್ಲಾ ಧರ್ಮೀಯ ಕ್ರಿಕೆಟಿಗರೂ ಉತ್ತಮ ಇಂಗ್ಲಿಷ್ ಮಾತನಾಡುತ್ತಾರೆಂಬುದು ಅವರೆಲ್ಲರೂ ನಗರದ ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗದವರಿಗೆ ಸೇರಿದವರೆಂದೂ ಮತ್ತು ಖಾಸಗಿ ಬದುಕಿನ ಕೆಲವು ಆಯಾಮಗಳಲ್ಲಾದರೂ ಕರ್ಮಠ ಚೌಕಟ್ಟನ್ನು ಮೀರಿರುತ್ತಾರೆಂಬುದನ್ನೂ ಸೂಚಿಸುತ್ತದೆ.

ಆದರೆ ಭಾರತದ ರಾಜಕಾರಣ ಮತ್ತು ಸಮಾಜ 90ರ ದಶಕದಿಂದಾಚೆಗೆ ಸಾಮಾಜಿಕವಾಗಿ ಪ್ರತಿಗಾಮಿ ಮೌಲ್ಯಗಳ ತೆಕ್ಕೆಗೂ ಮತ್ತು ಆರ್ಥಿಕವಾಗಿ ಕತ್ತುಕೊಯ್ಯುವ ಸ್ವಾರ್ಥದೆಡೆಗೂ ಮತ್ತು ರಾಜಕಾರಣದಲ್ಲಿ ಅನ್ಯಾಕ್ರಮಣಶೀಲ ಕೋಮುವಾದದೆಡೆಗೂ ಚಲಿಸುತ್ತಿರುವುದು ಕ್ರಿಕೆಟ್ ಫೀಲ್ಡನ್ನೂ ಬಿಟ್ಟಿಲ್ಲ, ಡ್ರೆಸ್ಸಿಂಗ್ ರೂಮನ್ನೂ ಬಿಟ್ಟಿಲ್ಲ. ಹಾಗೆ ನೋಡಿದರೆ ಕ್ರಿಕೆಟ್ ಫೀಲ್ಡಿನಲ್ಲೂ ಪ್ರತಿಯೊಬ್ಬ ಆಟಗಾರನೂ ಕಷ್ಟಕಾಲದಲ್ಲಿ ದೇವರನ್ನು ಪ್ರಾರ್ಥಿಸುವುದು ಅಥವಾ ಸೆಂಚುರಿ ಹೊಡೆದರೆ, ಕಷ್ಟದ ವಿಕೆಟ್ ತೆಗೆದರೆ ಅಥವಾ ಆಟದಲ್ಲಿ ಗೆದ್ದರೆ ಆಕಾಶದ ಕಡೆ ಮುಖಮಾಡಿ



ಪಾಕಿಸ್ತಾನದಲ್ಲಿ ಆದಾಗಿದೆ. ಭಾರತದಲ್ಲಿ ಹಿಂದೂತ್ವವಾದಿಗಳು ಆ ಪ್ರಯತ್ನವನ್ನು ಮಾಡುತ್ತಿದ್ದಾರೆ. ಆದಾಗದಂತೆ ತಡೆಯುವ ಜವಾಬ್ದಾರಿ ಕ್ರಿಕೆಟ್ ಪ್ರೇಮಿಗಳ ಮೇಲೂ ಇದೆ. ಏಕೆಂದರೆ ಆಗ ಮಾತ್ರ ಕ್ರಿಕೆಟ್ ಒಂದು ಆಟವಾಗಿರುತ್ತದೆ. ಇಲ್ಲವಾದರೆ ರಾಜಕೀಯದ ಚದುರಂಗದಾಟದ ದಾಳವಾಗಿರುತ್ತದೆ ಅಷ್ಟೆ. ●

## No Comments

"ಭಿಕ್ಷಾಟನೆಯಲ್ಲಿ ವೃತ್ತಿನಿರತರು ಭಾಗಿಯಾಗಿರುವುದು ಕಂಡುಬಂದರೆ ಅವರಿಗೆ ಒಂದರಿಂದ ಮೂರು ವರ್ಷಗ[...] ಕಾಲ ಶಿಕ್ಷೆ ವಿಧಿಸಲಾಗುವುದು ಮತ್ತು ಭಿಕ್ಷುಕರ[...] ಮುಖ್ಯವಾಹಿನಿಗೆ ಕರೆತರುವ ಪ್ರಯತ್ನವನ್ನು ಮಾಡಲಾಗುವುದು."

-ಚಿದಾನಂದ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾ ಅಧಿಕಾ[...]



"ಮುಖ್ಯಮಂತ್ರಿ ಆಗಾಕೆ ಅನುಭವ ಇಲ್ಲ, ಬುದ್ಧಿವಂತಿಕೆ ಇಲ್ಲ, ಸದ್ಯಕ್ಕೆ ಇಲ್ಲೇ ಮಂತ್ರಿ ಹುದ್ದೆಯಲ್ಲೇ ಇರಾಕೆ ಬಿಟ್ಟುಬಿಡಿ."

-ಎಚ್.ಡಿ.ರೇವಣ್ಣ



"ಒಬ್ಬ ಮುಖ್ಯಮಂತ್ರಿಯ ಮೇಲೆಯೇ ಕೊಲೆ ಮೊಕದ್ದಮೆ ದಾಖಲಿಸುವ ಇವರ ಕೈಗೆ ಇನ್ನು ಅಧಿಕಾರ[...] ಬಂದರೆ ಏನು ಮಾಡಬಹುದು? ಆಗ ಜನಸಾಮಾನ್ಯರ ರಕ್ಷಣೆ ಎಷ್ಟ[...] ಮಟ್ಟಿಗೆ ಸಾಧ್ಯ?"

-ಎಚ್.ಡಿ.ದೇವೇಗೌ[...]

"ಈ ಸರ್ಕಾರದಲ್ಲಿ ಯಾರಿಗೆ ಯಾರೂ ಜವಾಬ್ದಾ[...]ರಲ್ಲ, ಸಚಿವರಿಂದ ಶಾಸಕರವರೆಗೆ ಎಲ್ಲರದ್ದೂ ಸ್ವೇಚ್ಛಾಚಾರ!"

-ವೀರಪ್ಪ ಮೊಯಿ[...]



"ಅಧಿಕಾರ ಹಸ್ತಾಂತರದ ಬಗ್ಗೆ ಸೆಪ್ಟೆಂಬರ್ 30ರವರೆಗೆ ಮಾತನಾಡಬಾರದೆಂದು ಹಿರಿಯರು ಮತ್ತು ಮಠಾಧೀಶರು ಹೇಳಿದ್ದರಿಂದ ಸುಮ್ಮನಾಗಿದ್ದೇನೆ."

-ಯಡಿಯೂರಪ್ಪ

### ನಂಬಿದ್ರೆನಂಬಿ ಬಿಟ್ರೆಬಿಡಿ

"ನೈಸ್ ಕಂಪನಿ ಕರ್ನಾಟಕದಲ್ಲಿ ಇನ್ನೊಂದು ನಂ[...] ಗ್ರಾಮವನ್ನು ಸೃಷ್ಟಿ ಮಾಡುವುದು ನಮಗೆ ಬೇಕಿ[...] ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡ[...] ಹೊಸ ಟೆಂಡರ್ ಕರೆಯುವ ನಿರ್ಧಾರವನ್ನು ಕೈಗೊಳ್ಳ[...]ಗಿದೆ."

-ಸುಪ್ರೀಂಕೋರ್ಟಿನಲ್ಲಿ ಕರ್ನಾಟ[...] ಸರ್ಕಾರದ ವಾ[...]



"ಚುನಾವಣೆಯಲ್ಲಿ ಸಿಗುವ ಆಮ್ಲಜನಕವೇ ನಮ್ಮ ಪ್ರಾಣವಾಯು."

-ವೀರಪ್ಪ ಮೊಯಿ[...]

"ಸ್ವಭಾವತಃ ನಾನೊ[...] ಪ್ರಜಾಪ್ರಭುತ್ವವಾದಿ."

-ಮುಷರ[...]

"ಕುಮಾರಸ್ವಾಮಿ ನನ್ನ ತಂದೆ ಸಮಾನ. ಮಕ[...] ತಪ್ಪನ್ನು ಮನ್ನಿಸಿ ತಿದ್ದುವುದು ತಂದೆಯ ಕೆಲಸ."

-ಶ್ರೀರಾಮುಲ[...]

### ಮಿದುಳು ಕೆಲಸ ಮಾಡುವುದು[...] ನಿಲ್ಲಿಸಿದಾಗ


"ಒಂದು ಸಾವಿರ ಕೋಟಿ ವಾನರರಿಗಾಗಿ 60[...] ಮೈಲಿ ಉದ್ದದ ಮತ್ತು 80 ಮೈಲಿ ಅಗಲದ ಮಹಾ[...] ಸೇತುವೆಯನ್ನು ರಾಮ ಕೇವಲ ಐದು ದಿನದಲ್ಲಿ ಕಟ್ಟ[...]ನೆಂದು ವಾಲ್ಮೀಕಿ ಬರೆದಿದ್ದಾನೆ. ಮತ್ತದಕ್ಕೆ ಪುರಾವೆ ಇದೆ[...]"

-ಡಾ. ವಿಜಯಲಕ್ಷ್ಮಿ ಬಾಳೆಕುಂ[...] ಪ್ರಜಾವಾ[...] ಅಂಕಣ ಬರಹದ[...]

### ಸರಳೀಕರಣದ ಸಮಸ್ಯೆಗಳು...

"ವಿಷ್ಯಾ ಖಂಡವೊಂದರಲ್ಲೇ ಕೀಟನಾಶಕ ಬ[...] ಮೂರು ಲಕ್ಷ ಜನ ಆತ್ಮಹತ್ಯೆ ಮಾಡಿಕೊಂಡಿದ್ದಾ[...] ಆದ್ದರಿಂದ ಸರ್ಕಾರ ಕೀಟನಾಶಕವನ್ನೇ ನಿಷೇಧಿಸಬೇಕು[...]"

-ವಾಚಕರವಾಣಿಯ[...] ಡಾ.ಎಸ್.ಡಿ.ನಾಯ್ಕ ಎ[...] ಓದುಗರ ಪ[...]



# ಪ್ರಜಾತಂತ್ರಕ್ಕಾಗಿ ಬೀದಿಗಿಳಿದ ಧರ್ಮ



## ಕಂಡಹಾಗೆ

ಈ ವಿಪರ್ಯಾಸವನ್ನು ಗಮನಿಸಿ. ನಮ್ಮ ಭವ್ಯವಾದ, ಐತಿಹಾಸಿಕ, ಪ್ರಾಚೀನ ಪರಂಪರೆಯ, ಇಂತಹದ್ದೇ ಹಲವಾರು ಕಲ್ಪಿತ ವಿಶೇಷ ಗುಣಗಳನ್ನು ಹೊಂದಿರುವ ಭಾರತದಲ್ಲಿ ಕಾಲ್ಪನಿಕ ರಾಮ ಎಂಬಾತನೊಬ್ಬ ಲಕ್ಷಾಂತರ ವರ್ಷಗಳ ಹಿಂದೆ ಸೇತುವೆಯೊಂದನ್ನು ನಿರ್ಮಿಸಿದ್ದ ಎಂದು ಭ್ರಮಿಸಿ ಅದನ್ನು ರಕ್ಷಿಸಬೇಕೆಂದು ದೈವಭಕ್ತರೂ, ದೇಶಭಕ್ತರೂ ಹಾದಿರಂಪ ಬೀದಿರಂಪ ಮಾಡುತ್ತಿದ್ದಾರೆ. ಹಾಗೆ ರಂಪಾಟ ಮಾಡುವ ಮೂಲಕ ಹೇಗೆ ಮತ್ತೆ ಅಧಿಕಾರವನ್ನು ಪಡೆಯಬಹುದು ಎಂಬ ಲೆಕ್ಕಾಚಾರದಲ್ಲಿದ್ದಾರೆ. ಇವರಿಗೆ ದೈವಭಕ್ತಿ ಎಂಬುದೂ ಅಧಿಕಾರವನ್ನು ಹಿಡಿಯುವುದಕ್ಕಾಗಿ ಒಂದು ಬಂಡವಾಳವಷ್ಟೇ.

ಆದರೆ ಇದೇ ಹೊತ್ತಿಗೆ ನೆರೆಯ ಮ್ಯಾನ್ಮಾರ್ (ಬರ್ಮಾ) ದೇಶದಲ್ಲಿ ಯಾವುದೇ ಅಧಿಕಾರದ ದಾಹವಿಲ್ಲದೆ, ಲಾಭ-ಲೋಭದ ಆಶಯವಿಲ್ಲದೆ, ಕಿಂಚಿತ್ತೂ ಸ್ವಾರ್ಥವಿಲ್ಲದೆ ಲಕ್ಷಾಂತರ ಬೌದ್ಧ ಬಿಕ್ಕುಗಳು ಜನಪರವಾಗಿ ಪ್ರತಿಭಟಿಸುತ್ತಿದ್ದಾರೆ. ತಮ್ಮ ದೇಶದ ಜನರ ಆರ್ಥಿಕ ಬಿಕ್ಕಟ್ಟಿಗೆ, ಪ್ರಜಾತಂತ್ರ ದಮನಕ್ಕೆ ಕಾರಣವಾಗಿರುವ 'ಜನವೈರಿ' ಮಿಲಿಟರಿ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸುವವರೆಗೂ ತಮ್ಮ ಹೋರಾಟವನ್ನು ಕೈಬಿಡುವುದಿಲ್ಲ ಎಂದು ಪಣ ತೊಟ್ಟಿದ್ದಾರೆ. ಅಷ್ಟೇ ಅಲ್ಲ, ಹೀಗೆ ಜನಪರವಾಗಿ ನಿಲ್ಲುವುದು ತಮ್ಮ ಧಾರ್ಮಿಕ ಕರ್ತವ್ಯ ಎಂದು ಭಾವಿಸಿದ್ದಾರೆ.

ನಮ್ಮ ದೇಶದಲ್ಲಿನ ರಾಮಭಕ್ತರಿಗೂ, ಮ್ಯಾನ್ಮಾರ್‌ನಲ್ಲಿನ ಬೌದ್ಧ ಧರ್ಮದ ಬಿಕ್ಕುಗಳಿಗೂ ಎಷ್ಟು ವ್ಯತ್ಯಾಸವಿದೆಯಲ್ಲವೆ? ಇಲ್ಲಿ ಸ್ವಾರ್ಥಕ್ಕಾಗಿ ರಾಮ, ಅಲ್ಲಿ ಜನರಿಗಾಗಿ ಧರ್ಮ. ಇದಕ್ಕೆ ಕಾರಣವಿದೆ. ಬಹಳಷ್ಟು ಧರ್ಮಗಳಲ್ಲಿ ಅನುಷ್ಠಾನದಲ್ಲಿಲ್ಲದಿದ್ದರೂ ಆಶಯದಲ್ಲಾದರೂ ಮಾನವೀಯತೆಗೆ ಪ್ರಧಾನ ಸ್ಥಾನ. ಆದರೆ 'ಹಿಂದೂ' ಎಂಬುದು ಒಂದು ಧರ್ಮವೇ ಅಲ್ಲದಿರುವುದರಿಂದ, ತಾರತಮ್ಯ ವ್ಯವಸ್ಥೆ ಅದಾಗಿರುವುದರಿಂದ ಅದರಿಂದ ಜನ ಪರವಾದ ನಿಲುವನ್ನಾಗಲಿ, ಮಾನವೀಯ ಕಾಳಜಿಯನ್ನಾಗಲೀ ನಿರೀಕ್ಷಿಸುವುದೇ ತಪ್ಪು.

ಜನರ ಹಿತಕ್ಕಾಗಿಯೇ ಧಾರ್ಮಿಕ ಗುರುಗಳು ಆಡಳಿತಾರೂಢ ಸರಕಾರಗಳ ವಿರುದ್ಧ ಪ್ರತಿಭಟನೆಗಿಳಿದಿರುವುದು ಇದೇ ಮೊದಲಲ್ಲ. ದಕ್ಷಿಣ ಆಫ್ರಿಕಾದಲ್ಲಿ ಧಾರ್ಮಿಕ ಗುರು ಡೆಸ್ಮೆಂಡ್ ಟುಟು, ಥೈಲ್ಯಾಂಡ್‌ನಲ್ಲಿ ಕಾರ್ಡಿನಲ್ ಸಿನ್, ದಕ್ಷಿಣ ಅಮೆರಿಕಾ ಖಂಡದಲ್ಲಿ ಹಲವಾರು ಹೋರಾಟಗಳಲ್ಲಿ ಫಾದರ್‌ಗಳು ಭಾಗವಹಿಸಿದ್ದಾರೆ. ಈಗ ಮ್ಯಾನ್ಮಾರ್‌ನ ಬೌದ್ಧ ಬಿಕ್ಕುಗಳ ಸರದಿಯಷ್ಟೇ. ಅಂದಹಾಗೆ ಅಲ್ಲಿ ಪ್ರಸ್ತುತ ಹೋರಾಟಕ್ಕೆ ಕಾರಣವಾಗಿದ್ದು ಯಾವ ಹೊಸ ಕಾನೂನೂ ಅಲ್ಲ, ಅಧಿಕಾರ ಹಿಡಿದಿರುವ ಸೈನ್ಯಾಧಿಕಾರಗಳ ಕೂಟದ ದೌರ್ಜನ್ಯವೂ ಅಲ್ಲ, ಬದಲಾಗಿ ಅಲ್ಲಿನ ಸರಕಾರ ಪೆಟ್ರೋಲ್ ಮತ್ತು ಡೀಸಲ್ ಬೆಲೆಗಳನ್ನು ಹೆಚ್ಚಿಸಿದ್ದು ಮತ್ತು ಈ ಕ್ರಿಯೆಯಿಂದಾಗಿ ಬಸ್ ದರಗಳಿಂದ ಹಿಡಿದು ಎಲ್ಲಾ ಅಗತ್ಯವಸ್ತುಗಳ ಬೆಲೆಗಳು ಗಗನಕ್ಕೇರಿದ್ದು.

ಆಗಲೇ ಬಡತನದಲ್ಲಿ ಬೆಂದು ಬಸವಳಿದಿರುವ ಜನ ಈ ಬೆಲೆ ಏರಿಕೆಯಿಂದ ಕಂಗಾಲಾದರು. ಸೈನ್ಯಾಧಿಕಾರಿಗಳ ದಮನಕಾರಿ ಧೋರಣೆ ಗೊತ್ತಿದ್ದರೂ ಹಲವರು ಧೈರ್ಯ ಮಾಡಿ ಪ್ರತಿಭಟಿಸಿದರು. ಅವರೊಂದಿಗೆ ಕೆಲ ಬಿಕ್ಕುಗಳೂ ಕೈಜೋಡಿಸಿದರು. ಆದರೆ ಕಳೆದ 17 ವರ್ಷಗಳಿಂದ ಜನಸಾಮಾನ್ಯರು ತುಟಿಪಿಟಿಕ್ ಎನ್ನದಂತೆ ನೋಡಿಕೊಂಡಿರುವ ಸೈನ್ಯಾಧಿಕಾರಿಗಳಿಗೆ ಇದನ್ನು ಸಹಿಸಲಾಗಲಿಲ್ಲ, ಕೂಡಲೇ ಪ್ರತಿಭಟನಾಕಾರರನ್ನು ಮಟ್ಟ ಹಾಕಿದರಲ್ಲದೆ ಅವರೊಂದಿಗೆ ದನಿಗೂಡಿಸಿದ್ದ ಬಿಕ್ಕುಗಳನ್ನು ರಸ್ತೆ ಬದಿಯ ಕಂಬಗಳಿಗೆ ನಾಯಿಗಳನ್ನು ಕಟ್ಟಿಹಾಕುವಂತೆ ಬಿಗಿದು ಥಳಿಸಿದರು.

ಸೈನ್ಯದ ಈ ಕ್ರಮವನ್ನು ವಿರೋಧಿಸಲೆಂದು ಹಲವು ಬಿಕ್ಕುಗಳು ಕೆಲ ಸರಕಾರಿ ನೌಕರರನ್ನು ತಮ್ಮ ಮಠದಲ್ಲಿ ಬಂಧಿಸಿಟ್ಟರು; ಸರಕಾರ ಕ್ಷಮೆ ಕೇಳಿದರೆ ಮಾತ್ರ ಅವರನ್ನು ಬಿಡುಗಡೆಗೊಳಿಸುವುದಾಗಿ ಹೇಳಿದರು. ಬಿಕ್ಕುಗಳು ಸರಕಾರಕ್ಕೆ ನೀಡಿದ್ದ ಕಾಲಾವಧಿ ಅಂತ್ಯಗೊಂಡರೂ ಸರಕಾರ ಕ್ಷಮೆ ಯಾಚಿಸಲಿಲ್ಲ, ತಮ್ಮ ತೋಳ್ಬಲದ ಮುಂದೆ ಕೆಲ ಬಿಕ್ಕುಗಳದ್ದೇನೂ ನಡೆಯುವುದಿಲ್ಲ ಎಂಬ ಧೋರಣೆ ಅಧಿಕಾರದಲ್ಲಿರುವವರದ್ದಾಗಿತ್ತು, ಕೊನೆಗೆ ಅಪಹರಣಕ್ಕೊಳಗಾಗಿದ್ದವರನ್ನು ಬಿಕ್ಕುಗಳು ಬಿಡುಗಡೆ ಮಾಡಿದರು. ಆದರೆ ಜನಪರವಾದ ಹೋರಾಟವನ್ನು ಮುಂದುವರಿಸಬೇಕೆಂಬ ಅವರ ನಿರ್ಧಾರ ಇನ್ನೂ ಗಟ್ಟಿಯಾಗಿತ್ತು.

ಮಾರನೆ ದಿನದಿಂದ ನೂರಾರು, ಸಾವಿರಾರು ಬಿಕ್ಕುಗಳು ಬೀದಿಗಿಳಿದು ಪ್ರತಿಭಟಿಸಲಾರಂಭಿಸಿದರಲ್ಲದೆ, ಸೈನ್ಯದಲ್ಲಿರುವವರಿಗೆ ಮತ್ತು ಅವರ ಕುಟುಂಬಗಳಿಗೆ ಧಾರ್ಮಿಕ ಸಂಸ್ಕಾರಗಳನ್ನು ನಿರಾಕರಿಸಿದರು, ಅವರೆಲ್ಲರಿಂದ ಭಿಕ್ಷೆಯನ್ನು ಸ್ವೀಕರಿಸುವುದಿಲ್ಲ ಎಂದು ಘೋಷಿಸಿದರು. ಬೌದ್ಧ ಧರ್ಮೀಯರೆ ಹೆಚ್ಚಿನ ಸಂಖ್ಯೆಯಲ್ಲಿರುವ ಮ್ಯಾನ್ಮಾರ್‌ನಲ್ಲಿ ಬಿಕ್ಕುಗಳಿಗೆ ಭಿಕ್ಷೆ ನೀಡುವುದು ಒಂದು ಶ್ರದ್ಧೆ ಮತ್ತು ದೈನಂದಿನ ಕರ್ತವ್ಯ. ಅಂತಹ ಸನ್ನಿವೇಶದಲ್ಲಿ ಸೈನ್ಯದಲ್ಲಿರುವವರಿಂದ ಭಿಕ್ಷೆ ಸ್ವೀಕರಿಸುವುದಿಲ್ಲ, ಅವರಿಗೆ ಧಾರ್ಮಿಕ ಸಂಸ್ಕಾರಗಳನ್ನು ನೀಡುವುದಿಲ್ಲ ಎಂದು ಹೇಳುವುದೆಂದರೆ ಅದು ಸಾಮಾಜಿಕ ಬಹಿಷ್ಕಾರಕ್ಕೆ ಸಮ.





ಈ ಸೂಕ್ಷ್ಮತೆಯನ್ನರಿತ ಜನಸಾಮಾನ್ಯರು ಬಿಕ್ಕುಗಳ ಹೋರಾಟದೊಂದಿಗೆ ಸ್ಪಂದಿಸಲಾರಂಭಿಸಿದರು. ಮೊದಮೊದಲು ಮೆರವಣಿಗೆಯಲ್ಲಿ ಸಾಗುತ್ತಿದ್ದ ಬಿಕ್ಕುಗಳ ಮೇಲೆ ಪೊಲೀಸರಾಗಲಿ, ಸೈನ್ಯದವರಾಗಲಿ ದಾಳಿ ನಡೆಸದಂತೆ ಮಾನವ ಸರಪಳಿಯನ್ನು ನಿರ್ಮಿಸಿದ ಜನರು ದಿನಗಳು ಕಳೆದಂತೆ ಅಪಾರ ಸಂಖ್ಯೆಯಲ್ಲಿ ಬಿಕ್ಕುಗಳ ಪ್ರತಿಭಟನೆಗಳಲ್ಲಿ ಭಾಗವಹಿಸಲಾರಂಭಿಸಿದರು.

ಕಳೆದ ವಾರ ಬಿಕ್ಕುಗಳ ಹೋರಾಟಕ್ಕೆ ಒಂದು ರಾಜಕೀಯ ತಿರುವೂ ಸಿಕ್ಕಿತು. ಕಳೆದ ಎರಡು ದಶಕಗಳಿಂದ ಮ್ಯಾನ್ಮಾರ್‌ನಲ್ಲಿ ಪ್ರಜಾತಂತ್ರ ವ್ಯವಸ್ಥೆ ಬರಲೆಂದು ಹೋರಾಡುತ್ತಿರುವ; ಆದ್ದರಿಂದಲೇ 12 ವರ್ಷಗಳಿಂದ ಗೃಹಬಂಧನದಲ್ಲಿರುವ ಆಂಗ್ ಸ್ಯಾನ್ ಸೂಕಿಯವರ ಮನೆ ಮುಂದೆ ವಿಧಿಸಿರುವ ನಿರ್ಬಂಧಗಳನ್ನು ಮುರಿದು ಪ್ರತಿಭಟನಾ ನಿರತ ಹಲವರು ಮೆರವಣಿಗೆಯಲ್ಲಿ ಸಾಗಿದರು. ಅವರನ್ನು ಕಂಡು ಹೊರಬಂದ ಸೂಕಿಯವರು ಕೆಲಕ್ಷಣ ಗೇಟ್ ಹತ್ತಿರ ನಿಂತರು. ಬೌದ್ಧ ಧರ್ಮದ ವಾಕ್ಯಗಳನ್ನು ಪಠಿಸುತ್ತಾ ಸಾಗುತ್ತಿದ್ದ ಜನರನ್ನು ಕಂಡು ಸೂಕಿ ಕಣ್ಣೀರಿಟ್ಟರು.

ಆಕೆಯ ಕಣ್ಣೀರಿನಲ್ಲಿ ಮ್ಯಾನ್ಮಾರ್ ಜನರ ಸಂಕಷ್ಟಗಳು, ಹೋರಾಟದ ಛಲ, ಎಲ್ಲವೂ ಬೆರೆತಿದ್ದವು.


ಈಗಾಗಲೇ ಪ್ರಸ್ತುತ ಹೋರಾಟದಲ್ಲಿ ಹಲವಾರು ಜನ ಸತ್ತಿದ್ದಾರೆ, ಸಾವಿರಾರು ಜನ ಜೈಲು ಪಾಲಾಗಿದ್ದಾರೆ, ಹತ್ತಿಪ್ಪತ್ತು ಬೌದ್ಧ ಮಠಗಳ ಮೇಲೆ ಸೈನಿಕರು ದಾಳಿಗಳನ್ನು ನಡೆಸಿದ್ದಾರೆ. ಆದರೂ ಜನ ಸೈನ್ಯಾಧಿಕಾರ, ಅನ್ಯಾಯ, ಆರ್ಥಿಕ ಸಮಸ್ಯೆ ಎಲ್ಲದರ ವಿರುದ್ಧ ತಮ್ಮ ಹೋರಾಟವನ್ನು ಮುಂದುವರೆಸಿದ್ದಾರೆ.

ಸರ್ವಾಧಿಕಾರದ ವಿರುದ್ಧ ಮತ್ತು ಪ್ರಜಾತಂತ್ರದ ಪರವಾಗಿ ನಮ್ಮ ನೆರೆಯ ದೇಶವೊಂದರಲ್ಲಿ ಇಂತಹದ್ದೊಂದು ಬೃಹತ್ ಪ್ರತಿಭಟನೆ ನಡೆಯುತ್ತಿದ್ದರೆ, ಜಗತ್ತಿನಲ್ಲೇ ನಮ್ಮದು ಅತಿ ದೊಡ್ಡ ಪ್ರಜಾಪ್ರಭುತ್ವ ಎಂದು ಕರೆದುಕೊಳ್ಳುವ ಭಾರತ ಏನು ಮಾಡುತ್ತಿದೆ? ಅಲ್ಲಿನ ಜನ ದ್ರೋಹಿ ಸರಕಾರದೊಂದಿಗೆ ಕೈಜೋಡಿಸಿ, ಭ್ರಷ್ಟ ಸೈನ್ಯಾಧಿಕಾರಿಗಳಿಗೆ ಪರೋಕ್ಷವಾಗಿ ತನ್ನ ಬೆಂಬಲ ಸೂಚಿಸುತ್ತಿದೆ!



ಇದಕ್ಕೆ ಕಾರಣ ಚೈನಾ ಸೇರಿದಂತೆ ಭಾರತವೂ ಮ್ಯಾನ್ಮಾರ್ ದೇಶದ ನೈಸರ್ಗಿಕ ಸಂಪತ್ತಿನ ಲೂಟಿಯಲ್ಲಿ ತೊಡಗಿರುವುದು! ಅಷ್ಟೇ ಅಲ್ಲ ಮ್ಯಾನ್ಮಾರ್‌ನ ಅಧಿಕಾರಿಗಳು ಅಲ್ಲಿನ ತೇಗು, ವಜ್ರ ಸೇರಿದಂತೆ ಅಫೀಮು ಮತ್ತು ಮಾನವರ ಅಕ್ರಮ ಸಾಗಾಣಿಕೆಯಲ್ಲಿ ಅಪಾರ ಆಸ್ತಿಯನ್ನು ಸಂಗ್ರಹಿಸುತ್ತಿದ್ದರೆ ಅದೆಲ್ಲ ತಮಗೆ ಗೊತ್ತೇ ಇಲ್ಲ ಎಂಬಂತೆ ಭಾರತದ ನಾಯಕರು ಸುಮ್ಮನಿದ್ದಾರೆ. ಈ ಪ್ರವೃತ್ತಿ ಈಗಿನ ಪ್ರತಿಭಟನೆಯ ಸಮಯದಲ್ಲೂ ವ್ಯಕ್ತವಾಗಿದೆ.

ಮೊದಮೊದಲು ಪರಿಸ್ಥಿತಿ ಹೀಗಿರಲಿಲ್ಲ. ಭೌಗೋಳಿಕ ಕಾರಣದಿಂದಾಗಿ ಮತ್ತು ಪ್ರಜಾತಂತ್ರ ವ್ಯವಸ್ಥೆಗಿಂತಲೂ ಸೈನ್ಯಾಧಿಕಾರಿಗಳೊಂದಿಗೆ ವ್ಯವಹರಿಸುವುದು ಸುಲಭ ಎಂಬ ಕಾರಣಕ್ಕಾಗಿ ಚೈನಾ ದೇಶವು ಮ್ಯಾನ್ಮಾರ್‌ನ ಭ್ರಷ್ಟ ಆಡಳಿತವನ್ನು ಬೆಂಬಲಿಸುತ್ತಾ ಬಂದಿತ್ತು. ಆಗ ಭಾರತ ಅಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆಗಾಗಿ ಹೋರಾಡುತ್ತಿರುವವರಿಗೆ ನೈತಿಕ ಬೆಂಬಲ ಸೂಚಿಸಿತ್ತು. ಆದರೆ ಯಾವಾಗ ಅಲ್ಲಿ ಪ್ರಜಾಪ್ರಭುತ್ವ ಸದ್ಯದಲ್ಲೇ ಸಾಧ್ಯವಿಲ್ಲ ಎಂದು ಭಾರತಕ್ಕೆ ಗೊತ್ತಾಯಿತೋ ಆಗ ತಾನೂ ಅಲ್ಲಿನ ಸೈನ್ಯಾಧಿಕಾರದ ಪರ ನಿಂತಿತು. ಆ ನಿಲುವಿಗಾಗಿ ಮ್ಯಾನ್ಮಾರ್ ಸರ್ಕಾರವು ನೈಸರ್ಗಿಕ ತೈಲವನ್ನು ಪಡೆಯಲು ಭಾರತಕ್ಕೆ ಅನುಮತಿ ನೀಡಿತು. ಈಗಾಗಲೇ ಬಿಲಿಯನ್ ಗಟ್ಟಲೆ ಹಣವನ್ನು ಭಾರತ ಮ್ಯಾನ್ಮಾರ್‌ನಲ್ಲಿ ಹೂಡಿದೆಯಲ್ಲದೆ ಈಗ ONGC 150 ಮಿಲಿಯನ್ ಡಾಲರ್‌ಗಳನ್ನು ಹೂಡಲು ತುದಿಗಾಲ ಮೇಲೆ ನಿಂತಿದೆ. ಅಷ್ಟೇ ಅಲ್ಲ, ಕಳೆದ ವರ್ಷ ಮ್ಯಾನ್ಮಾರ್ ದೇಶವು ಭಾರತಕ್ಕೆ 527 ಮಿಲಿಯನ್ ಡಾಲರ್‌ಗಳಷ್ಟು ಕಚ್ಚಾವಸ್ತುವನ್ನು ರಫ್ತು ಮಾಡಿತ್ತು. ಈ ಎಲ್ಲಾ ಕಾರಣಗಳಿಂದಲೇ ಮೊನ್ನೆ ಮುರಳಿ ದಿಯೋರಾ ಎಂಬ ಕೇಂದ್ರ ಸಚಿವ "ಮ್ಯಾನ್ಮರ್ ಸರ್ಕಾರದೊಂದಿಗೆ ನಾವು ಅರ್ಥಪೂರ್ಣ ಸಂಬಂಧ ಹೊಂದಿದ್ದೇವೆ" ಎಂದು ಹೇಳಿದರು. ಇದರರ್ಥ ಇಷ್ಟೇ: ತೋರಿಕೆಗಾಗಿ ಸೂಕಿಗೆ ಬೆಂಬಲ, ಲಾಭಕ್ಕಾಗಿ ಭ್ರಷ್ಟರ ಸಖ್ಯ. ಇದು ಜಗತ್ತಿನಲ್ಲೇ ಅತಿ ದೊಡ್ಡ ಪ್ರಜಾಪ್ರಭುತ್ವವಾದ ಭಾರತದ ನೈತಿಕತೆ.



ಇವತ್ತು ಜಗತ್ತಿನಾದ್ಯಂತ ಎಲ್ಲ ಪ್ರಜಾತಂತ್ರವಾದಿಗಳ ಗಮನ ಮ್ಯಾನ್ಮಾರ್ ಮೇಲಿರುವಾಗ, ಆ ದೇಶದ ಸಾಕ್ಷಿಪ್ರಜ್ಞೆಯಂತಿರುವ ನಾಯಕಿ ಸೂಕಿ ಮಾತ್ರ ಇನ್ನೂ ಗೃಹಬಂಧನದಲ್ಲಿದ್ದಾರೆ. ಈಕೆಗೆ ನೊಬೆಲ್ ಶಾಂತಿ ಪ್ರಶಸ್ತಿ ದೊರಕಿದಾಗ ಅಪ್ಪ ಬರೆದಿದ್ದ ಲೇಖನವನ್ನು ಯಾರೂ ಮರೆತಿಲ್ಲ. ಆ ಲೇಖನಕ್ಕಿಂತಲೂ ಆಕೆಯ ವ್ಯಕ್ತಿತ್ವದ ಬಗ್ಗೆ ಆಕೆಯ ಹೋರಾಟದ ಬಗ್ಗೆ ಹೇಳಲು ಹೆಚ್ಚೇನಿಲ್ಲ. ಆದರೂ ಹಲವು ಅಂಶಗಳನ್ನು ಇಲ್ಲಿ ದಾಖಲಿಬಹುದು.

ಸೂಕಿ ತನ್ನ ಲೇಖನವೊಂದನ್ನು ಪ್ರಾರಂಭಿಸುವುದು ಈ ಮಾತುಗಳೊಂದಿಗೆ: "ಅಧಿಕಾರಕ್ಕಿಂತಲೂ ಜನರನ್ನು ಭ್ರಷ್ಟಗೊಳಿಸುವುದು ಭೀತಿ." ಈ ಮಾತುಗಳನ್ನು ಆಕೆ ಮ್ಯಾನ್ಮಾರ್‌ನ ಸರ್ವಾಧಿಕಾರಿಗಳನ್ನು ಉದ್ದೇಶಿಸಿ ಹೇಳಿದ್ದಾರಲ್ಲದೆ, ಜನರ ಬಗೆಗಿನ ಭೀತಿಯಿಂದಾಗಿಯೇ ಅವರು ಭ್ರಷ್ಟರಾಗಿದ್ದಾರೆ ಎಂದು ಸಾಬೀತುಪಡಿಸಿದ್ದಾರೆ. ಆಕೆಯ ಮಾತು ನೂರಕ್ಕೆ ನೂರು ನಿಜ. 1988 ರಲ್ಲಿ ಸೂಕಿ ನೇತೃತ್ವದಲ್ಲಿ ಭುಗಿಲೆದ್ದ ಜನಪ್ರತಿಭಟನೆಗಳನ್ನು ತನ್ನ ಸೈನ್ಯದ ಬಲದಿಂದಲೇ ಹತ್ತಿಕ್ಕಿದ ಸರ್ಕಾರ ಆನಂತರ ಜನರ ಆಕ್ರೋಶಕ್ಕೆ ಎಷ್ಟು ಹೆದರಿತೆಂದರೆ ರಾಜಧಾನಿ ರಂಗೂನ್‌ಅನ್ನೇ ತೊರೆದು ಅಲ್ಲಿಂದ ಮುನ್ನೂರು ಕಿಲೋಮೀಟರ್ ದೂರದಲ್ಲಿ ಹೊಸ ರಾಜಧಾನಿಯನ್ನೇ ನಿರ್ಮಿಸಿತು. ಬಂಜರು ಭೂಮಿಯಲ್ಲಿ ತಲೆ ಎತ್ತಿದ ಈ ನಗರಕ್ಕೆ 'ರಾಜಾಧಿರಾಜರ ಬೀಡು' ಎಂಬ ಅರ್ಥ ಬರುವ ಹೆಸರನ್ನಿಟ್ಟಿತು.

ರಾಜಾಧಿರಾಜರ ಈ ಬೀಡಿನಲ್ಲಿ ಸೈನ್ಯಾಧಿಕಾರಿಗಳು ಮತ್ತವರ ಕುಟುಂಬಗಳು ಮಾತ್ರ ವಾಸಿಸುತ್ತಿದ್ದು ದೇಶದ ಸಾಮಾನ್ಯ ಜನರಿಗೆ ಲಭ್ಯವಿರದ ಸವಲತ್ತುಗಳು ಅವರೆಲ್ಲರಿಗೆ ಕೈಗೆಟಕುವಂತೆ ಮಾಡಲಾಗಿದೆ. ವಿಶೇಷ ಶಾಲೆಗಳು ಮತ್ತು ಆಸ್ಪತ್ರೆಗಳನ್ನು ನಿರ್ಮಿಸಲಾಗಿದೆಯಲ್ಲದೆ ಟ್ರೈನ್ ಮತ್ತು ವಿಮಾನಗಳಲ್ಲಿ ಅವರಿಗೆಲ್ಲ ಮೊದಲು ಆದ್ಯತೆ ನೀಡಲಾಗುತ್ತದೆ. ಮನೆ ಬಾಡಿಗೆಯಿಂದ ಹಿಡಿದು ಪ್ರತಿಯೊಂದಕ್ಕೂ ಸಬ್ಸಿಡಿ ಪಡೆಯುವ ಸೈನ್ಯದ ಸದಸ್ಯರು ಮ್ಯಾನ್ಮಾರ್‌ನ ಇತರೆ ಜನರೊಂದಿಗೆ ಬೆರೆಯದೇ ಪ್ರತ್ಯೇಕ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಹೀಗೆ ದೇಶದ ಎಲ್ಲಾ ಸವಲತ್ತುಗಳನ್ನು ತಮ್ಮದಾಗಿಸಿಕೊಳ್ಳುತ್ತಲೇ ಏಷ್ಯಾ ಖಂಡದ ಇತರೆ ದೇಶಗಳಿಗೆ ಹೋಲಿಸಿದರೆ ಸಾರ್ವಜನಿಕ ವಿದ್ಯೆ ಮತ್ತು ಆರೋಗ್ಯ ಕ್ಷೇತ್ರಗಳಿಗೆ ಕನಿಷ್ಠ ವೆಚ್ಚವನ್ನು ಮಾಡಿರುವ ದಾಖಲೆ ಹೊಂದಿದ್ದಾರೆ ಅಲ್ಲಿನ ಸೈನ್ಯಾಧಿಕಾರಿಗಳು.

ಇದು ನಿನ್ನೆ ಮೊನ್ನೆಯಿಂದಿರುವ ಪರಿಸ್ಥಿತಿಯಲ್ಲ. ಬದಲಾಗಿ 1962 ರಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದ ಸೈನ್ಯಾಧಿಕಾರಿಗಳು ಖಾಸಗಿ ಆಸ್ತಿಗಳನ್ನು ಜಪ್ತಿ ಮಾಡಿ ಸೈನ್ಯಾಧಿಕಾರಿಗಳು ನಡೆಸುವ ಸಂಸ್ಥೆಗಳಿಗೆ ನೀಡಿದರು. ಅವರ ಯಾವುದೇ ಕ್ರಮವನ್ನು ಟೀಕಿಸಿದವರ ಮೇಲೆ ಹೇಗೆ ಮುಗಿಬಿದ್ದರೆಂದರೆ ಅದೆಷ್ಟೋ ಬುದ್ಧಿಜೀವಿಗಳು ಮ್ಯಾನ್ಮಾರ್ ಅನ್ನು ತೊರೆದು ಹೊರ ದೇಶಗಳಿಗೆ ವಲಸೆ ಹೋದರು. 1962 ಕ್ಕಿಂತ ಮುನ್ನ ಆಗ್ನೇಯ ಏಷ್ಯಾದಲ್ಲೇ ಅತಿಹೆಚ್ಚಿನ ಜೀವನ ಮಟ್ಟವನ್ನು, ಸಾಕ್ಷರತೆಯನ್ನು ಹೊಂದಿದ್ದ ಮ್ಯಾನ್ಮಾರ್ ಇವತ್ತು ಈ ಪ್ರದೇಶದಲ್ಲಿ ಅತಿ ಬಡತನವನ್ನು ಅನುಭವಿಸುತ್ತಿರುವ ದೇಶವಾಗಿ ಪರಿವರ್ತಿತವಾಗಿದೆ.

ಈ ಎಲ್ಲ ಬೆಳವಣಿಗೆಗಳ ನಡುವೆಯೂ ದಿಟ್ಟವಾಗಿ ನಿಂತಿರುವವರು ಸೂಕಿ. ಅಪ್ಪ ತನ್ನ ಲೇಖನದ ಅಂತ್ಯದಲ್ಲಿ ಹೇಳಿದ್ದಂತೆ "ದುರಂತಮಯ ಮನೋಹರ ಬರ್ಮಾ ದೇಶಕ್ಕೆ ಈಗ ಉಳಿದಿರುವುದು ಸೂಕಿಯ ಅನರ್ಘ್ಯ ವ್ಯಕ್ತಿಚಾರಿತ್ರ್ಯ ಮತ್ತು ಅಲೌಕಿಕ ಸೌಂದರ್ಯ ಮಾತ್ರ." ಆ ಮಾತು ಇವತ್ತಿಗೂ ಅನ್ವಯಿಸುತ್ತದೆ.

ಸೂಕಿ ತಮ್ಮ ಇನ್ನೊಂದು ಬರಹದಲ್ಲಿ ಹೀಗೆ ಹೇಳಿದ್ದಾರೆ: "ಇತಿಹಾಸ ಮುಖ್ಯ. ಆದರೆ ನೀವು ಯಾವ ಪರಂಪರೆಗೆ ಸೇರಿದವರು ಎಂದು ಆಯ್ಕೆ ಮಾಡುವಲ್ಲೇ ನಿಮ್ಮ ಇತಿಹಾಸವೂ ನಿರ್ಧರಿತವಾಗುತ್ತದೆ." ಇವತ್ತು ಮ್ಯಾನ್ಮಾರ್‌ನ ಬಿಕ್ಕುಗಳು, ಮತ್ತವರ ಜೊತೆ ನಿಂತಿರುವ ಸಾರ್ವಜನಿಕರು ತಮ್ಮ ಪರಂಪರೆಯ ಆಯ್ಕೆ ಮಾಡಿಕೊಳ್ಳುವ ಮೂಲಕ ತಮ್ಮ ದೇಶದ ಇತಿಹಾಸವನ್ನೇ ಬರೆಯಲು ಹೋರಾಟ ನಡೆಸುತ್ತಿದ್ದಾರೆ.

ಎಲ್ಲಾ ಪ್ರಜ್ಞಾವಂತರ ಬೆಂಬಲ ಅವರಿಗಿರಲಿ ಎಂಬ ಆಶಯ ನಮ್ಮದು...

■ ಗೌರಿ ಲಂಕೇಶ್



## ದಲಿತರ ವಿರುದ್ಧ ರೌಡಿ ಮಗನ ಗ್ಯಾಂಗ್

ಇಟಾಸ್ಕಾ ಎಂಬ ನಕಲಿ ಐಟಿಯ ಹೆಸರಲ್ಲಿ ಕಟ್ಟಾ ಕೈಹಾಕಿರುವ ಒಟ್ಟು 448 ಎಕರೆಗಳ ಹಾಲಿ ಮಾರುಕಟ್ಟೆ ರೇಟೇ 896 ಕೋಟಿಯಷ್ಟಾಗುತ್ತದೆ. ಒಂದು ವರ್ಷ ಕಳೆದು ಇಲ್ಲಿಗೆ ಎಕ್ಸ್‌ಪ್ರೆಸ್ ಹೈವೇ ಮತ್ತು ಇಂಟರ್ ಮಿಡಿಯೇಟ್ ರೋಡ್ ಬಂತೆಂದರೆ; ಅಲ್ಲಿಗೆ ದೇವನಹಳ್ಳಿ ಏರ್‌ಪೋರ್ಟ್ ಆರಂಭವಾಗಿಬಿಟ್ಟರೆ; ಭೂಮಿಯ ಬೆಲೆ ಇದರ ಐದು ಪಟ್ಟು ಹೆಚ್ಚಾಗುತ್ತದೆ.

ಆದರೆ ರೈತರಿಗಾಗಲೇ ಕಟ್ಟಾ ಎಕರೆಗೆ 50 ರಿಂದ ಎಂಬತ್ತು ಲಕ್ಷದ ತನಕ ಕೊಡುತ್ತಿದ್ದಾನೆ. ಅಲ್ಲಿಗೆ ಬಂಡವಾಳವೇ 225 ಕೋಟಿಯಷ್ಟಾಯಿತು. ಹೇಳಿಕೇಳಿ ಇದು ಬ್ಲಾಕ್ ಮನಿ. ಇಟಾಸ್ಕಾ ಎಂಬುದೇ ಈತನಕ ನಯಾಪೈಸೆಯ ವಹಿವಾಟು ನಡೆಸದ ನಕಲಿ ಕಂಪನಿ. ಹಾಗಾದರೆ ಇಷ್ಟೆಲ್ಲ ದುಡ್ಡು ಕಟ್ಟಾನಿಗಾಗಲಿ, ಆತನ ಪತ್ನಿಗಾಗಲಿ ಎಲ್ಲಿಂದ ಬಂತು?

ಲೋಕಾಯುಕ್ತಕ್ಕೆ ಸಲ್ಲಿಸಿದ ತನ್ನ ಆಸ್ತಿ ವಿವರದಲ್ಲಿ ಕಟ್ಟಾ ಬಂಡಿಕೋಡಿಗೆಹಳ್ಳಿಯಲ್ಲಿ ತಾನು ರಿಜಿಸ್ಟರ್ ಮಾಡಿಸಿಕೊಂಡ 26 ಎಕರೆ ಭೂಮಿಯ ಲೆಕ್ಕ ಕೊಡದೇ ಏಕೆ ಮುಚ್ಚಿಟ್ಟ? ಈ ಬಗ್ಗೆ ಲೋಕಾಯುಕ್ತರು ಇನ್ನೂ ಸುಮ್ಮನಿರುವುದೇಕೆ?

ಇದೆಲ್ಲದರ ಹೊರತಾಗಿಯೂ ಕಟ್ಟಾ ದುರುಳತನಕ್ಕೆ ಬೇಕಾಬಿಟ್ಟಿ ನಿದರ್ಶನಗಳಿವೆ. ತನ್ನ ಮಗನ ರೌಡಿಗ್ಯಾಂಗ್ ಮತ್ತು ಬ್ರೋಕರ್‌ಗಳ ಹಿಂಡನ್ನು ಬಿಟ್ಟು ಬಂಡಿಕೋಡಿಗೆ ಹಳ್ಳಿಯ ದಲಿತರನ್ನು ಬುಟ್ಟಿಗೆ ಹಾಕಿಕೊಂಡ ಕಟ್ಟಾ ಎಕರೆಗೆ 50 ಲಕ್ಷವನ್ನೋ 60 ಲಕ್ಷವನ್ನೋ ಕೊಡುತ್ತೇನೆಂದವನು ಸಹಿ ಬಿದ್ದ ಮೇಲೆ ಉಲ್ಟಾ ಹೊಡೆಯುತ್ತಿದ್ದಾನೆ.

ಈಗ ಕೆಐಎಡಿಬಿ ಎಕರೆಗೆ ಕೊಡುವ 23 ಲಕ್ಷದ ಹೊರತಾಗಿ ಒಂದೇ ಒಂದು ನಯಾ ಪೈಸೆಯನ್ನೂ ಹೆಚ್ಚಿಗೆ ಕೊಡುವುದಿಲ್ಲ ಎನ್ನುತ್ತಿದ್ದಾನೆ. ನಂಬಿ ಸಹಿ ಹಾಕಿದ ರೈತರು ಬಾಯಿ ಬಾಯಿ ಬಡಿದುಕೊಳ್ಳತೊಡಗಿದ್ದಾರೆ. ಭೂಮಿ ಕಳೆದುಕೊಳ್ಳುತ್ತಿರುವ ರೈತರಾದರೂ ಎಂಥವರು? ಬಿ.ಕೆ.ಪಾಳ್ಯ ಸಿಂಗಹಳ್ಳಿ, ಬಂಡಿಕೋಡಿಗೆಹಳ್ಳಿ, ಅರೇಬಿನ್ನಮಂಗಲ ಮತ್ತು ಬಾಗಲೂರಿನ ಬಹುಸಂಖ್ಯೆಯ ರೈತರು ಜಾತಿಯಲ್ಲಿ ದಲಿತರು. ಇಡೀ ಜುನ್ನಹಳ್ಳಿಯೇ ತೀರ ತುಳಿತಕ್ಕೊಳಗಾದ ಬೇಡರ ಗ್ರಾಮ. ಬಿ.ಕೆ.ಹಳ್ಳಿಯ ಬಸವಣ್ಣನ ಗುಡಿಯನ್ನೂ ಬಿಡದೇ ಕಟ್ಟಾ ಗ್ಯಾಂಗ್ ದೋಚಲು ಅಣಿಯಾಗಿದೆ. ಕೇಳುವವರ್‍ಯಾರು?



ಕಟ್ಟಾ ಭೂದಾಹಕ್ಕೆ ಬಲಿಯಾದ
ಬಿ.ಕೆ.ಹಳ್ಳಿಯ ಬಸವಣ್ಣ ಗುಡಿ

ಅಷ್ಟಕ್ಕೂ ಈ ಯೋಜನೆಗೆ ಪರಿಸರ ಮಾಲಿನ್ಯ ಮಂಡಳಿಯ ಪರವಾನಗಿಯುಂಟೆ? ಕೆಐಎಡಿಬಿಯು ಇಂಥ ಭೂಮಿಯನ್ನು ನೋಟಿಫೈ ಮಾಡುವುದು ಕಾನೂನು ಬದ್ಧವೇ? ಸದರಿ ಭೂ ಕೊಳ್ಳೆಯಲ್ಲಿ ಯಾರೆಲ್ಲ ತಿಮಿಂಗಿಲಗಳು ಕೈ ಹಾಕಿದ್ದಾರೆ? ಇಂಥ ನಿರ್ಲಜ್ಜ ಭೂ ದರೋಡೆಯ ಅಸಲೀ ಹುನ್ನಾರವೇನು? ಇಂಥ ಅನೇಕ ಪ್ರಶ್ನೆಗಳಿಗೆ ಉತ್ತರ ಹುಡುಕುವ ಯತ್ನವೇ 'ಕಟ್ಟಾ ಭೂ ದರೋಡೆ'!

ಕೆಐಎಡಿಬಿಯ 'ರೈತ ಸಂಹಾರ'ದ ಕತೆಯ ಎಲ್ಲಾ ಮುಖಗಳನ್ನು ಇದು ಪರಿಚಯಿಸಿಕೊಡುತ್ತದೆ.



ಗೊಲ್ಲಹಳ್ಳಿಯಲ್ಲಿ ದಲಿತರ ಹೋರಾಟ

# ಕಟ್ಟಾ ಹೆಂಡತಿ, ಮಗನ ಹೆಸರಲ್ಲಿ 3644 ಎಕರೆ ಗುಳುಂ!


■ ರಾ. ಸೋಮನಾಥ್

ಕಾಡುಗಳ್ಳನನ್ನೇ ಕರೆತಂದು ಅರಣ್ಯಮಂತ್ರಿಯನ್ನಾಗಿ ಮಾಡಿಬಿಟ್ಟರೆ ಹೇಗಿರುತ್ತದೆ?

ಹುಟ್ಟಾ ನೆಲಗಳ್ಳನ ಕೈಗೆ ಕೈಗಾರಿಕಾ ಮಂತ್ರಿಗಿರಿ ಸಿಕ್ಕಿಬಿಟ್ಟರೆ ಏನಾಗುತ್ತದೆ?

ಉತ್ತರ ಸ್ಪಷ್ಟವಾಗೇ ಇದೆ. ದೇವನಹಳ್ಳಿ ವಿಮಾನ ನಿಲ್ದಾಣದ ಹಿಂಭಾಗದ ಹದಿನೈದು ಗ್ರಾಮಗಳ ರೈತರು ಅಕ್ಷರಶಃ ಬೀದಿಗೆ ಬಿದ್ದಿದ್ದಾರೆ. ತನ್ನ ಅಗಾಧ ಭೂದಾಹ ಮತ್ತು ಆಂಧ್ರದ ಭೂಗಳ್ಳರ ದುರಾಸೆಗಾಗಿ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯನ್ನೇ ಆಯುಧವನ್ನಾಗಿ ಬಳಸಿದ ಭಾರೀ ಕೈಗಾರಿಕಾ ಮಂತ್ರಿ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು ಒಂದೇ ಏಟಿಗೆ ನಾನೂರ ನಲವತ್ತೆಂಟು ಎಕರೆ ಭೂಮಿಯನ್ನು ಕೊಳ್ಳೆಗೈದ ಕತೆ ನಿಜಕ್ಕೂ ರೋಚಕವೆ!

ಇಲ್ಲಿ ಕಬಳಿಕೆಯಾಗಿರುವುದು ಕೇವಲ 448 ಎಕರೆ ಮಾತ್ರವೇ ಆಗಿದ್ದರೆ ದುರಾಚಾರಕ್ಕೊಂದು ಮಿತಿಯಾದರೂ ಇರುತ್ತಿತ್ತು, ಯಾವ 448 ಎಕರೆ ಭೂಮಿಯನ್ನು ತಾನು ಮುಂದಾಮೋಚಿದ್ದನೋ ಅದಕ್ಕೆ ವಿಪರೀತ ಬೆಲೆ ಬರಬೇಕಲ್ಲ;




ಅದಕ್ಕೆಂದು ಮತ್ತೆ ಹದಿನೈದು ಗ್ರಾಮಗಳನ್ನು ಬಲಿತೆಗೆದುಕೊಂಡ ಕಟ್ಟಾ ದುರ್ಬುದ್ಧಿ ಬಹುಶಃ ಕಾಡುಗಳ್ಳ ವೀರಪ್ಪನ್‌ಗೂ ಇದ್ದಿರಲಿಕ್ಕಿಲ್ಲ; ಮತ್ತು ಈ ಹಿಂದೆ ಕೆಐಎಡಿಬಿ ಕಾಯ್ದೆಯನ್ನು ಬಳಸಿಕೊಂಡು ಲ್ಯಾಂಡ್ ರಾಬರಿಗೆ ನಿಂತ ಯಾವೊಬ್ಬ ಕೈಗಾರಿಕಾ ಮಂತ್ರಿಯೂ ಈ ಥರದ ಹಗಲು ದರೋಡೆಗೆ ಕೈಹಾಕಿರಲಿಲ್ಲ.

ಅನೇಕರಿಗೆ ನೆನಪಿರಬೇಕು. ಧರ್ಮಸಿಂಗ್ ಮುಖ್ಯಮಂತ್ರಿಯಾಗಿದ್ದ ಕಾಲಕ್ಕೆ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹಿಂಭಾಗದಲ್ಲಿ 'ಫ್ಯಾಬ್ ಸಿಟಿ' ಎಂಬ 'ಆಧುನಿಕ' ತಂತ್ರಜ್ಞಾನದ 'ಉದ್ದಿಮೆ ನಗರ'ವೊಂದರ ಸ್ಥಾಪನೆಗೆಂದು ಮುಂಬಯಿ ಉದ್ಯಮಿಯೊಬ್ಬ ಬೆಂಗಳೂರಿಗೆ ಬಂದಿದ್ದ. ತಾನು ಕೇಳಿದ ಸಾವಿರಾರು ಎಕರೆಯ ಡೀಲು ಕುದುರದೇ ಆತ ಕೆಲವೇ ದಿನಗಳಲ್ಲಿ ತನ್ನ 'ಫ್ಯಾಬ್ ಸಿಟಿ'ಯನ್ನು ಆಂಧ್ರದ ಹೈದ್ರಾಬಾದಿಗೆ ಸ್ಥಳಾಂತರಿಸಿಬಿಟ್ಟ.

### ಹೆಂಡತಿ ಮಗನ ಹೆಸರಲ್ಲಿ

ಅಲ್ಲಿಗೆ 'ಫ್ಯಾಬ್‌ಸಿಟಿ' ಬರದೇ ಹೋದರೂ ಅದಕ್ಕೆಂದು ವಶಪಡಿಸಿಕೊಳ್ಳಬೇಕಿದ್ದ ಬೆಂಗಳೂರು ಉತ್ತರ ತಾಲ್ಲೂಕು ಜಾಲ ಹೋಬಳಿಯ ಬಂಡಿಕೋಡಿಗೆಹಳ್ಳಿ, ಮಹದೇವಕೋಡಿಗೆಹಳ್ಳಿ, ಹೂವಿನಾಯಕನ ಹಳ್ಳಿ ಮತ್ತ ಬಾಗಲೂರು ಗ್ರಾಮಗಳ ಸಾವಿರಾರು ಎಕರೆ ಭೂಮಿಯ ಮೇಲೆ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಖದೀಮರ ಕಣ್ಣು ಬಿದ್ದಾಗಿತ್ತು, ಆಗಿನ್ನೂ ಬಿಜೆಪಿಗೆ ಅಧಿಕಾರವಿರಲಿಲ್ಲ. ಕಟ್ಟಾಯಕಶ್ಚಿತ್ ಶಾಸಕ ಮತ್ತು ನಟೋರಿಯಸ್ ಲ್ಯಾಂಡ್ ಗ್ರಾಬರ್ ಮಾತ್ರವೇ ಆಗಿದ್ದ.

ಅಲ್ಲಿಗೆ ಫ್ಯಾಬ್‌ಸಿಟಿ ಬರುತ್ತದೆ ಎಂದು ಗೊತ್ತಾಗಿಯೇ ಅನೇಕ ಬಿಲ್ಡರ್‌ಗಳೂ ಲ್ಯಾಂಡ್ ಗ್ರ್ಯಾಬರ್‌ಗಳೂ ಹಿಂಡು ಹಿಂಡಾಗಿ ಈ ನಾಲ್ಕು ಗ್ರಾಮಗಳ ಕೃಷಿ ಭೂಮಿಯ ಮೇಲೆ ಕಣ್ಣಿಟ್ಟರು. ಆ ಪೈಕಿ ಬಂಡಿಕೋಡಿಗೆಹಳ್ಳಿಗೆ ವಕ್ಕರಿಸಿದವನು ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು. 2004ರ ಹೊತ್ತಿಗೆ ಬಂಡಿಕೋಡಿಗೆಹಳ್ಳಿಗೆ ಬಂದು ಇಪ್ಪತ್ತಾರು ಎಕರೆಯಷ್ಟು ರೈತರ ಭೂಮಿ ಖರೀದಿಸಿದ್ದ ಕಟ್ಟಾ ಅದನ್ನು ತನ್ನ ಪತ್ನಿ ಕೆ. ಸೌಭಾಗ್ಯ ಮತ್ತು ಮಗ ಜಗದೀಶನ ಹೆಸರಿಗೆ ರಿಜಿಸ್ಟರ್ ಮಾಡಿಸಿಕೊಂಡಿದ್ದ. ತಲಾ ಎಕರೆಗೆ ಎಂಟೋ ಹತ್ತೋ ಲಕ್ಷ ತೆತ್ತು 26 ಎಕರೆ ಖರೀದಿಸಿದ್ದಲ್ಲದೇ ಇನ್ನೂ ಸರಿಸುಮಾರು ಎಂಬತ್ತು ಎಕರೆಗಳಷ್ಟು ದಲಿತರ ಭೂಮಿಗೆ ಎಕರೆಗೆ ಒಂದೋ ಎರಡೋ ಲಕ್ಷ ಅಡ್ವಾನ್ಸ್ ಕೊಟ್ಟು ಅಗ್ರಿಮೆಂಟ್ ಮಾಡಿಸಿಕೊಂಡಿದ್ದ.



ಅಲ್ಲಿಗೆ ಬಂಡಿಕೋಡಿಗೆಹಳ್ಳಿಯ ಒಟ್ಟು ನೂರೆಕರೆ ಜಮೀನುಪರೋಕ್ಷವಾಗಿ ಕಟ್ಟಾ ಅಧೀನಕ್ಕೊಳಪಟ್ಟಂತಾಯ್ತು!

ಒಂದು ಮೂಲದ ಪ್ರಕಾರ ಸದರಿ ಡೀಲಿಗೆಂದು ಕಟ್ಟಾ ಗಾಡ್‌ಫಾದರ್ ಆಂಧ್ರದ ಬಿಜೆಪಿ ನಾಯಕ ವೆಂಕಯ್ಯ ನಾಯ್ಡು ದೊಡ್ಡ ಮೊತ್ತದಲ್ಲಿ ದುಡ್ಡು ಹಾಕಿದ್ದ!



ಕಟ್ಟಾ ಮಗ ಜಗದೀಶ



ಕಟ್ಟಾ ಪತ್ನಿ ಸೌಭಾಗ್ಯ

ಯಾವತ್ತು ಧರ್ಮಸಿಂಗ್ ಸರ್ಕಾರ ಬಿತ್ತೋ ಕಟ್ಟಾನ ರೊಟ್ಟಿಯೇ ಜಾರಿ ತುಪ್ಪಕ್ಕೆ ಬಿದ್ದಂತಾಯ್ತು, ಭೂಗಳ್ಳನೇ ಭಾರೀ ಕೈಗಾರಿಕಾ ಮಂತ್ರಿಯಾಗಿಬಿಟ್ಟ. ಇನ್ನು ಯಾರೆಲ್ಲ ರೈತರು ತಮ್ಮ ಭೂಮಿ ಕೊಡಲು ಒಪ್ಪುವುದಿಲ್ಲವೋ ಅಂಥವರ ವಿರುದ್ಧ ಪೊಲೀಸರನ್ನು ಬುಟ್ಟಿಗೆ ಹಾಕಿಕೊಂಡು, ರೌಡಿಗಳನ್ನು ಛೂಬಿಟ್ಟು ಗೂಂಡಾಗಿರಿ ನಡೆಸುವ ತಾಪತ್ರಯವೇ ಇಲ್ಲವಲ್ಲ?

### 448 ಎಕರೆ!

ಆ ಹೊತ್ತಿಗಾಗಲೇ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹಿಂಭಾಗದ ಬಂಡಿಕೋಡಿಗೆಹಳ್ಳಿ, ಬಿ.ಕೆ. ಪಾಳ್ಯ ಸಿಂಗಹಳ್ಳಿ, ಅರೇಬಿನ್ನಮಂಗಲ, ಗೊಲ್ಲಹಳ್ಳಿ, ಬಾಗಲೂರು, ದುಮ್ಮನಹಳ್ಳಿ, ಉಣಸೂರು, ಜನ್ನಹಳ್ಳಿ ಮುಂತಾದ ಗ್ರಾಮಗಳ ಭೂಮಿಗೆ ಬಂಗಾರದ ಬೆಲೆ ಬಂದಾಗಿತ್ತು. ಜೊತೆಗೆ ಕಟ್ಟಾ ಕೈಹಾಕಿದ್ದ ಬಂಡಿಕೋಡಿಗೆಹಳ್ಳಿ, ಹೆಣ್ಣೂರು ರಿಂಗ್‌ರೋಡ್‌ನಿಂದ ದೇವನಹಳ್ಳಿ



ಅರೆಬಿನ್ನಮಂಗಲದಲ್ಲಿ ಕಟ್ಟಾ ವಿರುದ್ಧ ಧಿಕ್ಕಾರ

ಏರ್‌ಪೋರ್ಟ್‌ನ್ನು ಜೋಡಿಸುವ ಎಕ್ಸ್‌ಪ್ರೆಸ್ ಹೈವೇ ಮತ್ತು ಅದನ್ನು ಹೊಸಕೋಟೆಯೊಂದಿಗೆ ಕೂಡಿಕೊಳ್ಳುವ ಇಂಟರ್‌ಮೀಡಿಯಟ್ ರಸ್ತೆಗಳ ಸಂಗಮತಾಣ. ಭವಿಷ್ಯದಲ್ಲಿ ಎಕರೆಗೆ ಕಮ್ಮಿಯೆಂದರೂ ಹತ್ತು ಕೋಟಿಯ ಬೆಲೆ ಬರುತ್ತದೆ. ಹಾಲೀ ಮಾರ್ಕೆಟ್‌ರೇಟೆ ಎಕರೆಗೆ ಒಂದೂವರೆ ಕೋಟಿಯಿಂದ ಎರಡು ಕೋಟಿಯಿದೆ. ಹೀಗಿರುವಾಗ ಐದೋ ಹತ್ತೋ ಲಕ್ಷಕ್ಕೆ ಎಕರೆ ಭೂಮಿ ಕೊಡು ಎಂದರೆ ಯಾರು ಕೊಡುತ್ತಾರೆ?

ತನ್ನ ಬ್ರೋಕರ್‌ಗಳನ್ನು ಬಿಟ್ಟು ಏನೆಲ್ಲಾ ಸರ್ಕಸ್ ಮಾಡಿದಾಗಲೂ ಬಹುತೇಕ ರೈತರು ಭೂಮಿ ಕೊಡಲು ಒಪ್ಪಲೇ ಇಲ್ಲ, ಹಾಗಂತ ಕಟ್ಟಾ ಬಿಡಲಿಲ್ಲ, ಎಷ್ಟೆಂದರೂ ಕೈಗಾರಿಕಾ ಮಂತ್ರಿ. ಇಂತಿಂಥಾ ಜಮೀನು ಕೈಗಾರಿಕಾ ಉದ್ದೇಶಕ್ಕೆ ಬೇಕೆಂದು ಕೆಐಎಡಿಬಿಯಿಂದ ನೋಟಿಫೈ ಮಾಡುವ ಸರ್ವಾಧಿಕಾರ ಇದ್ದೇ ಇತ್ತಲ್ಲ; ತಾನು ಮಂತ್ರಿಯಾದ ಒಂದೇ ತಿಂಗಳಿಗೆ ಬಂಡಿಕೋಡಿಗೆಹಳ್ಳಿಯಲ್ಲಿ ತಾನು ಈಗಾಗಲೇ ಕೈಹಾಕಿದ್ದ ನೂರೆಕರೆಯನ್ನೂ ಸೇರಿಸಿ ಒಟ್ಟೂ 448 ಎಕರೆಗಳಷ್ಟು ಭೂಮಿ ವಿಶೇಷ ಆರ್ಥಿಕ ವಲಯಕ್ಕೆ (SEZ) ಬೇಕೆಂದು 2006ರ ಆಗಸ್ಟ್ 7ರಂದು ಪ್ರಿಲಿಮಿನರಿ ನೋಟಿಫೈ ಮಾಡಿಸಿಬಿಟ್ಟ.

### ನಕಲಿ ಕಂಪನಿ ಇಟಾಸ್ಕಾ?

ಆ ಹೊತ್ತಿಗಾಗಲೇ ಕಟ್ಟಾ ತನ್ನ ಛೇಲಾಗಳ ಹೆಸರಲ್ಲಿ ITASCA (ಇಟಾಸ್ಕಾ) ಎಂಬ ನಕಲಿ ಐಟಿ ಕಂಪನಿಯೊಂದನ್ನು ಹುಟ್ಟುಹಾಕಿದ್ದ, ತಾನು 1250 ಕೋಟಿ ರೂಪಾಯಿ ಬಂಡವಾಳ ಹೂಡುತ್ತೇನೆಂದೂ, ಎಂಟು ಸಾವಿರ ಮಂದಿ ಕನ್ನಡಿಗರಿಗೆ ಕೆಲಸ ಕೊಡುತ್ತೇನೆಂದೂ ITASCAದ ಮ್ಯಾನೇಜಿಂಗ್ ಡೈರೆಕ್ಟರ್ ಅರ್ಥಾತ್ ಕಟ್ಟಾನ ಬೇನಾಮಿ ಎಸ್.ವಿ. ಶ್ರೀನಿವಾಸುಲು ಎಂಬಾತ ಮೋಸದ ಪ್ರಾಜೆಕ್ಟ್ ರಿಪೋರ್ಟೊಂದನ್ನು 'ಕರ್ನಾಟಕ ಉದ್ಯೋಗ ಮಿತ್ರ'ಕ್ಕೆ ಸಲ್ಲಿಸಿದ್ದ. 50 ಕೋಟಿಯನ್ನು ಮೀರಿದ ಯಾವುದೇ ಯೋಜನೆಗೆ ಸರ್ಕಾರಿ ಪರವಾನಗಿ ದೊರಕಬೇಕೆಂದರೆ ಅದು ಮುಖ್ಯಮಂತ್ರಿಗಳೇ ಅಧ್ಯಕ್ಷರಾಗಿರುವ ಹೈಲೆವಲ್ ಕಮಿಟಿಯಲ್ಲೇ ಪಾಸಾಗಬೇಕು.

ಅದಕ್ಕೆಂದು ಕಟ್ಟಾ ಮತ್ತೊಂದು ತಂತ್ರ ಬಳಸಿದ್ದ. ಬಂಡಿಕೋಡಿಗೆಹಳ್ಳಿಯ ಪಕ್ಕದ ಗ್ರಾಮಗಳಾದ ಬಿ.ಕೆ. ಪಾಳ್ಯ ಸಿಂಗಹಳ್ಳಿ, ಅದೇ ಬಿನ್ನಮಂಗಲ ಮತ್ತು ಗೊಲ್ಲಹಳ್ಳಿಯ ಒಟ್ಟೂ 1209 ಎಕರೆಗೆ 2006ರ ಆಗಸ್ಟ್ 7ರಂದೇ ಕೆಐಎಡಿಬಿಯಿಂದ ಮತ್ತೊಂದು ನೋಟಿಫಿಕೇಷನ್ ಹೊರಡಿಸಿ ಇಷ್ಟೆಲ್ಲ ಭೂಮಿ ಯಾವುದೋ ಕೈಗಾರಿಕಾ ಉದ್ದೇಶಕ್ಕೆ ಬೇಕೆಂದು ಕತೆ ಕಟ್ಟಿದ್ದ. ಇದಾಗಿ ವಾರಕ್ಕೆ ತನ್ನ ಜಮೀನಿನ ಎದುರು ದಿಕ್ಕಿಗಿರುವ ದುಮ್ಮನಹಳ್ಳಿ, ಸಿಂಗಹಳ್ಳಿ, ಉಣಸೂರು ಮತ್ತು ದೇವನಹಳ್ಳಿ ತಾಲ್ಲೂಕಿನ ಜುನ್ನಹಳ್ಳಿ, ಬಾಲದಿಮ್ಮನಹಳ್ಳಿ, ಕವಡದಾಸನಹಳ್ಳಿ, ಭಟ್ರಮಾರನಹಳ್ಳಿ, ಬೆಟ್ಟಕೋಟೆ ಮುಂತಾದ ಗ್ರಾಮಗಳ ಒಟ್ಟು ಸಾವಿರದ ಅರವತ್ತೊಂಬತ್ತು ಎಕರೆಗೆ ಇನ್ನೊಂದು ನೋಟಿಫಿಕೇಷನ್ ಹೊರಡಿಸಿ ಅದು ಫ್ರಾನ್ಸ್ ಮೂಲದ ಏರೋಸ್ಪೇಸ್ ಇಂಡಸ್ಟ್ರೀಸ್(ವಿಮಾನ ಬಿಡಿಭಾಗಗಳ ಘಟಕ) ಮತ್ತು ಈಗಾಗಲೇ ನಂದಗುಡಿಯನ್ನು ನುಂಗಲು ಹೊರಟಿರುವ SKIL ಎಂಬ ಮತ್ತೊಂದು ನಕಲಿ ಕಂಪನಿಗೆ ಇನ್ನೊಂದು SEZ ಮಾಡಲು ಬೇಕೆಂದೂ ರೈಲು ಬಿಟ್ಟಿದ್ದ! ಇದ್ಯಾವುದೂ ಪ್ರಾಮಾಣಿಕ ಕೈಗಾರಿಕಾ ಉದ್ದೇಶವಿಲ್ಲದ ತನ್ನ ಭೂಕಬಳಿಕೆಗೆ ಪೂರಕವಾಗಿಯೇ ಕಟ್ಟಾ ಹೂಡಿದ ಕಪಟ ನಾಟಕವಾಗಿತ್ತು.

ಕಟ್ಟಾನ ಹಗಲು ದರೋಡೆ 2007ರ ಜನವರಿಯ ಹೊತ್ತಿಗೆ ಎಂಥಾ ವಿಪರೀತಕ್ಕೆ ಹೋಯಿತೆಂದರೆ, ಈಗಾಗಲೇ ತನ್ನ ಬಂಡಿಕೋಡಿಗೆಹಳ್ಳಿ ಲ್ಯಾಂಡಿಗೆ ನಕಲಿ ಐಟಿ ಕಂಪನಿಯ ಹೆಸರಲ್ಲಿ ಹೊರಡಿಸಿದ 448 ಎಕರೆಯ ನೋಟಿಫಿಕೇಷನ್, ಗೊತ್ತೇ ಇಲ್ಲದ ಕೈಗಾರಿಕಾ ಉದ್ದೇಶಕ್ಕೆಂದು ಬಿ.ಕೆ. ಪಾಳ್ಯ ಸಿಂಗಹಳ್ಳಿ, ಅದೇ ಬಿನ್ನಮಂಗಲ ಮತ್ತು ಗೊಲ್ಲಹಳ್ಳಿ 1209 ಎಕರೆಗಳ ಎರಡನೇ ನೋಟಿಫಿಕೇಷನ್; ಜೊತೆಗೆ ಫ್ರೆಂಚ್ ಕಂಪನಿ ಮತ್ತು SKILಗಳ ಹೆಸರಿನಲ್ಲಿ ಭೂಮಿ ಕಸಿಯಲು ಹೊರಡಿಸಿದ್ದ 1069 ಎಕರೆಗಳ ಮೂರನೇ ಆದೇಶಗಳೂ ಸಾಲದೆಂಬಂತೆ 2007ರ ಜನವರಿಯಲ್ಲಿ ತನ್ನ ಬಂಡಿಕೋಡಿಗೆಹಳ್ಳಿ



ಭೂ ಸ್ವಾಧೀನದ ವಿರುದ್ಧ ಬಿ.ಕೆ. ಪಾಳ್ಯದ ಮಹಿಳೆಯರ ಆಕ್ರೋಶ

ಲ್ಯಾಂಡಿಗೇ ಹೊಂದಿಕೊಂಡಿದ್ದ ಬೆಂಗಳೂರು ಉತ್ತರ ತಾಲ್ಲೂಕು ಜಾಲ ಹೋಬಳಿಯ ಮಹದೇವ ಕೋಡಿಗೆಹಳ್ಳಿ, ಹೂವಿನಾಯಕನಹಳ್ಳಿ ಮತ್ತು ಬಾಗಲೂರಿನ ಒಟ್ಟು 918 ಎಕರೆಗೆ ನಾಲ್ಕನೇ ನೋಟಿಫಿಕೇಷನ್ ಹೊರಡಿಸಿಬಿಟ್ಟ. ಅಲ್ಲಿಗೆ ಒಂದಲ್ಲ ನಾಲ್ಕು ಯೋಜನೆಗಳ ಮೂಲಕ ರೈತ ಸಂಹಾರಕ್ಕೆ KIADB ಸಜ್ಜಾಗಿ ನಿಂತಿತ್ತು.


### ಬಾಲಕೃಷ್ಣೇಗೌಡನ ಎಂಟ್ರಿ

ಈ ಬಾರಿ ಹಾರ್ಡ್‌ವೇರ್ ಪಾರ್ಕ್‌ಗೆಂದು ಭೂಮಿ ಕಸಿಯಲು ಕೆಐಎಡಿಬಿಯ ಖದೀಮರನ್ನು ಛೂಬಿಟ್ಟಿದ್ದ. ಸ್ವತಃ ಕಟ್ಟಾಗೆ ಚೆನ್ನಾಗಿ ಗೊತ್ತಿತ್ತು. ಅದು ದೇವೇಗೌಡರ ಕುಲಪುತ್ರ ಬಾಲಕೃಷ್ಣೇಗೌಡ ಕೈ ಹಾಕಿದ್ದ ಲ್ಯಾಂಡ್ ಎಂದು! ಅಲ್ಲಿಗೆ ಸ್ವಾಮಿಕಾರ್ಯ ಸ್ವಕಾರ್ಯ ಒಟ್ಟಿಗೇನೆ

ನೆರವೇರಿದಂತಾಗುತ್ತದೆ. ಅಕ್ಕಪಕ್ಕ ಇನ್ನಷ್ಟು ಭೂ ದರೋಡೆ ನಡೆದರೆ ತನ್ನ ಭೂಮಿಗೂ ವಿಪರೀತ ರೇಟ್ ಏರುತ್ತದೆ.

ಕೇಳಿದ ರೇಟಿಗೆ ಭೂಮಿ ಕೊಡದ ರೈತರ ಜಮೀನು ಕಬಳಿಯುವಲ್ಲಿ ಕಟ್ಟಾ ಜೊತೆಗೇ ಬಾಲಕೃಷ್ಣೇಗೌಡನೂ ಕೈಜೋಡಿಸಿ ಬಿಟ್ಟಿದ್ದರಿಂದ ಮುಖ್ಯಮಂತ್ರಿ ಕುಮಾರ ಸ್ವಾಮಿಗೆ ಕಟ್ಟಾನ ನಕಲಿ ಐಟಿ ಕಂಪನಿಯ ಜಾತಕ ಜಾಲಾಡುವ ಮನಸ್ಸಾದರೂ ಹೇಗೆ ಬಂದೀತು?

ಬಹುಶಃ ಸ್ವತಃ ಕಟ್ಟಾನಿಗೇ ಗೊತ್ತಿಲ್ಲ ದ್ದೆಂದರೆ ಪ್ರಾರಂಭದಲ್ಲಿ ತಾನು SEZ ಹೆಸರಲ್ಲಿ ಕಬಳಿಸಲು ಹೊರಟಿದ್ದ ಬಂಡಿ ಕೋಡಿಗೆಹಳ್ಳಿ ಭೂಮಿ ಬೆಂಗಳೂರು ನಗರ ಜಿಲ್ಲೆಗೆ ಸೇರುವುದರಿಂದ ಕಾಯ್ದೆಯಂತೆ ಅಲ್ಲಿ SEZ ಸಾಧ್ಯವೇ ಇರಲಿಲ್ಲ.


ಕಟ್ಟಾ ನುಂಗಿರುವ ಭೂಮಿಯ ನಕ್ಷೆ

ಆದರೇನಂತೆ ಕನಿಷ್ಠ ನಕಲಿ ಐಟಿ ಕಂಪನಿಯ ಹೆಸರಲ್ಲಾದರೂ ನೋಟಿಫಿಕೇಷನ್ ಹೊರಡಿಸಿ ಎಂದು ಕಟ್ಟಾ ಹಠ ಹಿಡಿದ. ಆದಕ್ಕೇ ಕೈಗಾರಿಕಾ ಇಲಾಖೆಯು ರೈತರ ಒಪ್ಪಿಗೆ ಪಡೆದೇ ಭೂಸ್ವಾಧೀನ ಮಾಡಿಕೊಳ್ಳತಕ್ಕದ್ದೆಂದು ಷರತ್ತು ವಿಧಿಸುವುದು ಅನಿವಾರ್ಯವಾಗಿ ಹೋಯಿತು. ಆದರೆ ಆ ಹೊತ್ತಿಗಾಗಲೇ ದೇವನಹಳ್ಳಿ ಏರ್‌ಪೋರ್ಟ್ ಹಿಂಭಾಗದ ಹದಿನೈದೂ ಗ್ರಾಮಗಳ ರೈತರು ರೊಚ್ಚಿಗೆದ್ದರು. ಆಂಜನಪ್ಪ, ಬಿ.ಆರ್. ಪದ್ಮನಾಭ, ಡಿ.ಎಸ್. ಗೌಡರ ನೇತೃತ್ವದಲ್ಲಿ ರೈತರ ಹೋರಾಟ ಸಮಿತಿಯನ್ನು ಕಟ್ಟಿ ಹಳ್ಳಿ ಹಳ್ಳಿಗಳಲ್ಲೂ ಪ್ರತಿಭಟನಾ ಸಭೆಗಳಾದವು. ಕಸಿಯಲಿರುವ ಭೂಮಿಯ ಮೋಜಣಿಗೆಂದು ಬಂದಿದ್ದ ಕೆಐಎಡಿಬಿಯ ಖದೀಮ ರಾಮಚಂದ್ರಮೂರ್ತಿಯನ್ನು ಸರಿಸುಮಾರು ಸಾವಿರದಷ್ಟು ರೈತರು ಸೇರಿದ್ದೇ ಘೇರಾವ್ ಮಾಡಿ ಓಡಿಸಿಬಿಟ್ಟರು. ಮುಖ್ಯಮಂತ್ರಿಗೇ ದೂರು ಕೊಟ್ಟರು.

## ನಕಲಿ ಐಟಿ ಕಂಪನಿಯ ವೇಷ, 15 ಗ್ರಾಮಗಳ ಸರ್ವನಾಶ

ಆದರೆ ಈಗಾಗಲೇ ಬಂಡಿಕೋಡಿಗೆಹಳ್ಳಿಯ ಭೂಮಿಗೆಂದು ಹತ್ತುಕೋಟಿಗೂ ಹೆಚ್ಚು ಬ್ಲಾಕ್‌ಮನಿಯನ್ನು ತೊಡಗಿಸಿದ್ದ ಕಟ್ಟಾನಿಗೆ ಆತಂಕ ಶುರುವಾಯಿತು. ರೈತರ ಸಭೆ ಕರೆದು ಪೂಸಿ ಹೊಡೆದರೆ ರೊಚ್ಚಿಗೆದ್ದ ರೈತರು "ಆಂಧ್ರದಿಂದ ಓಡಿಬಂದು ಕನ್ನಡಿಗರನ್ನು ವಕ್ಕಲೆಬ್ಬಿಸ್ತಿಯೇನಯ್ಯಾ?" ಎಂದು ಬಾಯಿಗೆ ಬಂದಂತೆ ಉಗಿದರು. ಇನ್ನೇನು ಕುಮಾರಸ್ವಾಮಿಯ ಮುಖ್ಯಮಂತ್ರಿಗಿರಿಯೇ ಮುಗಿದುಹೋದರೆ ಮತ್ತೆ ತಾನು ಕೈಗಾರಿಕಾ ಮಂತ್ರಿ ಆಗುತ್ತೇನೋ ಇಲ್ಲವೋ! ಇರುವ ಅಲ್ಪಾವಧಿಯಲ್ಲೇ ITASCA ಭೂ ದರೋಡೆಯನ್ನು ಮುಗಿಸಿಬಿಡಬೇಕು. ಜೊತೆಗೆ ತನ್ನ 448 ಎಕರೆ ಭೂಮಿಗೆ ಕೆಐಎಡಿಬಿಯಿಂದ ಫೈನಲ್ ನೋಟಿಫಿಕೇಷನನ್ನೂ ಹೊರಡಿಸಬೇಕು. ಒಮ್ಮೆ ಅಂತಿಮ ಅಧಿಸೂಚನೆ ಹೊರಡಿಸಿಬಿಟ್ಟರೆ ರೈತರು ತನಗಲ್ಲದೇ ಬೇರೆ ಯಾರಿಗೂ ಭೂಮಿ ಮಾರುವ ಹಾಗೇ ಇಲ್ಲ!

### ದಂಗೆ ಎದ್ದ ರೈತರು

ಹಾಗೆಂದುಕೊಂಡೇ 2007ರ ಜೂನ್ ತಿಂಗಳಲ್ಲಿ ಕಟ್ಟಾ ಬಂಡಿಕೋಡಿಗೆಹಳ್ಳಿಯ 448 ಎಕರೆ ಭೂಮಿಗೆ ಕೆಐಎಡಿಬಿಯಿಂದ 28(4) ಅಂದರೆ ಅಂತಿಮ ಅಧಿಸೂಚನೆ ಹೊರಡಿಸಿಬಿಟ್ಟ. ಕಾಯ್ದೆಯಂತೆ ಈ ರೀತಿ ಫೈನಲ್ ನೋಟಿಫಿಕೇಷನ್ ಹೊರಡಿಸುವು ದಕ್ಕೂ ಮುನ್ನ ರೆವಿನ್ಯೂ ಮತ್ತು ಕೆಐಎಡಿಬಿ ಅಧಿಕಾರಿಗಳ ಜಂಟಿ ಸರ್ವೆ ನಡೆಸಬೇಕು. ರೈತರಿಗೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ಕೊಡಬೇಕು. ಅದಕ್ಕೊಂದು ಪತ್ರಿಕಾ ಜಾಹೀರಾತು ಕೊಡಬೇಕು. ಯಾವ ಕಂಪನಿಗೆಂದು ಭೂಮಿ ಸ್ವಾಧೀನಪಡಿಸಿಕೊಳ್ಳಲಾಗುತ್ತೋ ಆ ಕಂಪನಿಯು ನಕಲಿಯೋ ಅಸಲಿಯೋ ಎಂಬುದನ್ನು ಪರೀಕ್ಷಿಸಬೇಕು. ಇದ್ಯಾವುದನ್ನೂ ಮಾಡದೇ ಏಕಾಏಕಿ ತನ್ನ ITASCAದ 448 ಎಕರೆ ಮತ್ತು SKIL ಕಂಪನಿಯ 1069 ಎಕರೆಗಳ ಎರಡು ಯೋಜನೆಗಳಿಗಷ್ಟೇ ಫೈನಲ್ ನೋಟಿಫಿಕೇಷನ್ ಜಾರಿಗೊಳಿಸಿದ ಕಟ್ಟಾ, ಬಾಲಕೃಷ್ಣೇಗೌಡರು ಕೈಹಾಕಿದ್ದ 918 ಎಕರೆಯ ಹಾರ್ಡ್‌ವೇರ್ ಪಾರ್ಕ್ ಮತ್ತು ಗೊತ್ತಿಲ್ಲದ ಕೈಗಾರಿಕೆಗಳ ಹೆಸರಲ್ಲಿ ನೋಟಿಫೈ ಮಾಡಿದ್ದ 1209 ಎಕರೆಯ ಯೋಜನೆಗೆ ಮಾತ್ರ ಫೈನಲ್ ನೋಟಿಫಿಕೇಷನ್ ಹೊರಡಿಸಲೇ ಇಲ್ಲ!

ಇದರರ್ಥ ಆ ಎರಡರ ಜಮೀನುಗಳನ್ನು ತಮಗೆ ಅನುಕೂಲವಾದಾಗಲೆಲ್ಲ ಡೀ ನೋಟಿಫೈ ಮಾಡಿಸಿಕೊಂಡು ನುಂಗುವುದು!


ಅಲ್ಲಿಗೆ ದೇವನಹಳ್ಳಿ ಏರ್‌ಪೋರ್ಟ್ ಹಿಂಭಾಗದಲ್ಲಿ ನಾಲ್ಕು ಯೋಜನೆಗಳ ನೆಪದಲ್ಲಿ ಒಟ್ಟು 3644 ಎಕರೆಗಳಷ್ಟು ರೈತರ ಭೂಮಿಗೆ ಸರ್ಕಾರವೇ ಕನ್ನ ಹಾಕಿದ್ದು ಸ್ಪಷ್ಟವಾಗಿತ್ತು. ರೈತರ ಹೋರಾಟ ಸಮಿತಿಯ ಪ್ರತಿಭಟನೆಯೂ ತೀವ್ರಗೊಂಡಿತ್ತು. ಅದರಲ್ಲೂ ಕಟ್ಟಾ ಕೈಹಾಕಿದ್ದ 448 ಎಕರೆಗಳ ITASCA ಎಂಬ ನಕಲಿ ಕಂಪನಿಗೆ ತಾವ್ಯಾರೂ ಭೂಮಿ ಮಾರುವುದಿಲ್ಲ ಎಂದೇ ಬಂಡಿಕೋಡಿಗೆಹಳ್ಳಿಯ ರೈತರು ಪಟ್ಟು ಹಿಡಿದರು. ಆದರೆ ದುರಾಸೆಗೆ ಬಿದ್ದ ಕಟ್ಟಾ ತಾನೊಬ್ಬ ಮಂತ್ರಿ ಎಂಬುದನ್ನೇ ಮರೆತುಬಿಟ್ಟ. ಈ ಬಾರಿ ನೇರವಾಗಿ ಬಂಡಿಕೋಡಿಗೆಹಳ್ಳಿಯ ದಲಿತರ ಮೇಲೆಯೇ ರೌಡಿಗಳನ್ನು ಛೂಬಿಟ್ಟ. ಅದಕ್ಕೆಂದು ಮಗ ಕಟ್ಟಾ ಜಗದೀಶನ ನೇತೃತ್ವದಲ್ಲಿ ರೌಡಿ ಪಡೆಯೊಂದನ್ನು ಹುಟ್ಟುಹಾಕಿ ಅವರನ್ನೇ ಅದೇ ಬಂಡಿ ಕೋಡಿಗೆಹಳ್ಳಿಯ ಲ್ಯಾಂಡ್ ಬ್ರೋಕರ್‌ಗಳಾದ ರಾಜಣ್ಣ ನಾಗಣ್ಣ ಮತ್ತು ಮಂಜುನಾಥ ಅಲಿಯಾಸ್ ಬ್ರೋಕರ್ ಮಂಜನ ಜೊತೆ ಮಾಡಿದ. ಯಾರೇ ದಲಿತನಿಂದ ಸಹಿ ಹಾಕಿಸಿಕೊಟ್ಟರೂ ಎಕರೆಯೊಂದಕ್ಕೆ ಒಂದು ಲಕ್ಷ ಕಮೀಷನ್ ಕೊಡುವುದಾಗಿ ಕಟ್ಟಾ ಈ ಬ್ರೋಕರ್‌ಗಳಿಗೆ ಆಮಿಷ ಒಡ್ಡಿದ್ದಾನೆ.

### ಮಗನ ಗೂಂಡಾಗಿರಿ

ಇಲ್ಲಿಗೆ ತಿಂಗಳಿನಿಂದ ಫೀಲ್ಡಿಗಿಳಿದ ಈ ಬ್ರೋಕರ್‌ಗಳು ಪ್ರತಿ ಸಂಜೆಯಾದರೆ ಸಾಕು ಬಂಡಿ ಕೋಡಿಗೆಹಳ್ಳಿಗೆ ಮುಗಿಬೀಳುತ್ತಾರೆ. ದಲಿತರನ್ನು ಕರೆದೊಯ್ದು ಕಂಠಮಟ್ಟ ಕುಡಿಸುತ್ತಾರೆ. ಕುಡಿದು ಚಿತ್ತಾಗಿ ಯಾರೆಲ್ಲ ಸಹಿ ಹಾಕುವುದಿಲ್ಲವೋ ಅಂಥವರ ಮೇಲೆ ಅದೇ ಊರಿನ ಕುಡುಕರನ್ನು ಛೂ ಬಿಡುತ್ತಾರೆ. ಪ್ರತಿ ಸಂಜೆಯಾದರೆ ಅಲ್ಲಿ ಒಂದಲ್ಲ ಒಂದು ಗಲಾಟೆ ಇದ್ದೇ ಇರುತ್ತದೆ. ದುರಂತವೆಂದರೆ ಈಗಾಗಲೇ ಕೆಲ ದಲಿತರು ಸಹಿ ಹಾಕಿಬಿಟ್ಟಿದ್ದಾರೆ. ಸಹಿ ಹಾಕದವರನ್ನು ಕಟ್ಟಾ ಗ್ಯಾಂಗ್ ಬೇಟೆಯಾಡುತ್ತಲೇ ಇದೆ.

ಬಹುಶಃ ಇನ್ನೆರಡು ತಿಂಗಳಲ್ಲಿ ಬಂಡಿಕೋಡಿಗೆಹಳ್ಳಿಯಲ್ಲಿ ಹೆಣಬಿದ್ದರೂ ಅಚ್ಚರಿಯಿಲ್ಲ!

ನೆಲಗಳ್ಳನೊಬ್ಬನ ಕೈಗೆ ಕೈಗಾರಿಕಾ ಮಂತ್ರಿಗಿರಿ ಸಿಕ್ಕಿಬಿಟ್ಟರೆ ಏನಾಗುತ್ತೋ ಅದೇ ಸಂಭವಿಸಿದೆ. ಅಷ್ಟಕ್ಕೂ ಕೈಗಾರಿಕಾ ಮಂತ್ರಿಯೇ ನಕಲಿ ಐಟಿ ಕಂಪನಿ ಸೃಷ್ಟಿಸುತ್ತಾನೆಂದರೆ, ಆ ಹೆಸರಲ್ಲಿ 448 ಎಕರೆ ಕೃಷಿ ಭೂಮಿಯನ್ನು ದೋಚುತ್ತಾನೆಂದರೆ, ಇದಕ್ಕೆ ಬೆಲೆ ಬರಲೆಂದು ಅಕ್ಕಪಕ್ಕದ ಗ್ರಾಮಗಳ ಸಾವಿರಾರು ಎಕರೆ ಭೂಮಿಯನ್ನು ಇನ್ನಷ್ಟು ನಕಲಿ ಕಂಪನಿಗಳ ಹೆಸರಲ್ಲಿ ಕೆಐಎಡಿಬಿಯೇ ನಿಂತು ನುಂಗಲು ಹೊಂಟಿದೆಯೆಂದರೆ, ಇದನ್ನು ಪ್ರಶ್ನಿಸಬೇಕಿದ್ದ ಪ್ರತಿಭಟಿಸಬೇಕಿದ್ದ ವಿರೋಧಿ ಕಾಂಗ್ರೆಸ್ಸೇ ನಿದ್ದೆ ನಟಿಸುತ್ತಿದೆ ಯೆಂದರೆ; ರೈತರು ಯಾರನ್ನು ನಂಬಬೇಕು?


ಕೆ.ಐ.ಎ.ಡಿ.ಬಿ.ಯ ಭೂಸ್ವಾಧೀನ ಪ್ರಕ್ರಿಯೆ

ದೇವನಹಳ್ಳಿ ಏರ್‌ಪೋರ್ಟ್ ಹಿಂಭಾಗದ ನಾಲ್ಕು ನಕಲಿಯೋಜನೆಗಳ ಒಟ್ಟು 3644 ಎಕರೆ ಭೂಸ್ವಾಧೀನದ ಬಗ್ಗೆ ಸಿಬಿಐ ತನಿಖೆಯಾಗಲಿ. ಕನಿಷ್ಠ ಲೋಕಾಯುಕ್ತರಾದರೂ ವಿಚಾರಣೆ ಮಾಡಲಿ. ಬೀದಿಗಿಳಿದ ರೈತರ ಜೊತೆಗೆ ಇಡೀ ನಾಡು ನಿಲ್ಲುವಂತಾಗಲಿ. ಇದು ಪತ್ರಿಕೆಯ ಕಳಕಳಿಯ ಮನವಿ. ■

## SKIL ಕಳ್ಳರಿಗೆ ಮತ್ತೊಂದು SEZ



ನಿಗೂಢಮಂದರ ನಂದಗುಡಿಯಲ್ಲಿ ಈಗಾಗಲೇ SEZ ಹೆಸರಲ್ಲಿ ಲೂಟಿಗಿಳಿದಿರುವ SKIL ಎಂಬ ಕಂಪನಿಗೆ ಮತ್ತೆ ವಿಮಾನ ನಿಲ್ದಾಣದ ಪಕ್ಕ ನೂರು ಹೆಕ್ಟೇರ್ ಕೃಷಿ ಭೂಮಿಯನ್ನು ಯಾವ ಕಾರಣಕ್ಕೆ ಮಂಜೂರು ಮಾಡಲಾಗಿದೆ ಎಂಬುದೇ ಗೊತ್ತಾಗುತ್ತಿಲ್ಲ.

ನೂರು ಹೆಕ್ಟೇರ್ ಎಂದರೆ 250 ಎಕರೆಗಳಷ್ಟು ಭೂ ಪ್ರದೇಶ. ಹಾಗೊಮ್ಮೆ ನಂದಗುಡಿಯಲ್ಲಿ ಹೋರಾಟ ತೀವ್ರಗೊಂಡರೆ ಈಗಾಗಲೇ ನುಂಗಿರುವ ಕಮಿಷನ್‌ಗೆ ಸರಿಹೋಗಲೆಂದು ಈ 250 ಎಕರೆಯೇ? ಅಥವಾ ಬಿಟ್ಟಿ ಭೂಮಿಯನ್ನು ಬಂದಷ್ಟು ಗುಂಜಿಕೊಳ್ಳುವ ದುರಾಸೆಯೇ?

ಅಷ್ಟಕ್ಕೂ SKIL ಎಂಬುದೇ ನೆಲಗಳ್ಳತನಕ್ಕೆಂದು ಹುಟ್ಟಿಕೊಂಡು ನಕಲಿ ಕಂಪನಿ. ಇದರ ಧಣಿ ನಿಖಿಲ್ ಗಾಂಧಿಯೇ ಓರ್ವ ಲ್ಯಾಂಡ್ ಬ್ರೋಕರ್. ಇಂಥವನಿಗೆ ನಂದಗುಡಿಯಲ್ಲಿ ಹನ್ನೆರಡೂವರೆ ಸಾವಿರ ಎಕರೆಗಳಷ್ಟು ಭೂಮಿಯ ಜೊತೆ ಏಳೂವರೆ ಸಾವಿರ ಎಕರೆಗಳಷ್ಟು ಸರ್ಕಾರಿ ಭೂಮಿಯನ್ನು ಬಿಟ್ಟು ಕೊಟ್ಟು ಅದು ಸಾಲದೆಂಬಂತೆ ವಿಮಾನ ನಿಲ್ದಾಣದ ಪಕ್ಕದಲ್ಲೇ ಮತ್ತೆ 250 ಎಕರೆಯ ಇನ್ನೊಂದು SEZ ಅವಕಾಶ ಕೊಡುತ್ತಾರೆಂದರೆ; SKIL ಕಂಪನಿಯಿಂದ ಇನ್ನೆಂಥಾ ಆಕರ್ಷಕ ಕಮಿಷನ್ ತಿನ್ನಿಸಿರಬೇಡ?

ಇವರಲ್ಲಿ ಬಾಲಕೃಷ್ಣೇಗೌಡನ ಪಾಲೆಷ್ಟು? ಕಟ್ಟಾನ ಪಾಲೆಷ್ಟು?

## 'ಗರ್ವ' ಭಂಗ



'ಗರ್ವ' ಅಂತ ಒಂದು ವಾರಪತ್ರಿಕೆ ಕೆಲದಿನ ಪ್ರಕಟವಾಗಿ ಈಗ ತಾನೆ ನಿಂತುಹೋಗಿದೆ. ಮುತ್ತಪ್ಪ ರೈ ದುಡ್ಡು ಮತ್ತು ಹಿಂದೂತ್ವದ ಅಮಲಿನಲ್ಲಿ ಮೆರೆಯಲು ಯತ್ನಿಸಿದ್ದ ಪತ್ರಿಕೆ ಇದು. ಹಾಗೆ ನೋಡಿದರೆ ಪತ್ರಿಕೆಯೊಂದು ಸಕ್ಸಸ್ ಆಗಲು ಬೇಕಾದ ಕೆಲವಂಶ ಗರ್ವದಲ್ಲಿತ್ತು. ಅಂದರೆ ಒಂದು ಚುರುಕಾದ ಟೀಂ, ಯಥೇಚ್ಛ ದುಡ್ಡು ಭಾರಿ ಪ್ರಚಾರ.... ಇತ್ಯಾದಿ. ಆದರೂ ಜನ ಗರ್ವವನ್ನು ನಿರ್ಲಕ್ಷಿಸಿಬಿಟ್ಟರು.

ಇದೇ ಸಮಯಕ್ಕೆ ದಿಕ್ಸೂಚಿ ಅಂತ ಇನ್ನೊಂದು ಮಾಸ ಪತ್ರಿಕೆಯೂ ನಿಂತು ಹೋಗಿದೆ. ಕಳೆದ ಹದಿನೈದಿಪ್ಪತ್ತು ವರ್ಷಗಳಿಂದ ಬರುತ್ತಿದ್ದ ದಿಕ್ಸೂಚಿಗೆ ಒಳ್ಳೇ ಪ್ರಸಾರ, ಲಾಭ, ಹೆಸರು ಎಲ್ಲಾ ಇತ್ತು. ಆದರೂ ಅದು ಬದುಕುಳಿಯಲಿಲ್ಲ. ಒಂದು ಪತ್ರಿಕೆ ಯಶಸ್ವಿಯಾಗಬೇಕೆಂದರೆ ನಿಜಕ್ಕೂ ಬೇಕಾಗಿರುವುದೇನು?

'ಓದುಗರು' ಅನ್ನೋ ಉತ್ತರವನ್ನು ಯಾರು ಬೇಕಾದರೂ ಹೇಳುತ್ತಾರೆ. ಆದರೆ ಪತ್ರಿಕೆಯೊಂದು ಓದುಗರ ಕೈ ಸೇರುವ ಮುನ್ನ ಬೇರೆ ಅನೇಕ ಹಂತಗಳನ್ನು ಹಾದುಬರಬೇಕಾಗುತ್ತದೆ. ಡೈನಾಮಿಕ್ ಆಗಿರುವ ಚುರುಕಾದ ಟೀಂ ಇರಬೇಕು. ಜನರಿಗೆ ಓದಬೇಕು ಅನ್ನಿಸೋ ವಿಚಾರ ಆರಿಸಿಕೊಳ್ಳಬೇಕು. ಹಾಗೆ ಆಯ್ದುಕೊಂಡ ಸಬ್ಜೆಕ್ಟನ್ನು ಬೋರ್ ಹೊಡೆಸದಂತೆ ಪ್ರೆಸೆಂಟ್ ಮಾಡಬೇಕು. ಅಚ್ಚುಕಟ್ಟಾದ ಲೇಔಟ್ ಇರಬೇಕು. ಮುದ್ರಣ ದೋಷ ಇರಲೇಬಾರದು... ಹೀಗೆ ಒಂದು ಪಟ್ಟಿಯನ್ನೇ ಮಾಡಬಹುದು.

■ ಪಾರ್ವತೀಶ

## ಬಿಡಿ ಚಿತ್ರಗಳು


ತಮಾಷೆ ಏನೆಂದರೆ ಇವ್ಯಾವುದೂ ಇರದಿದ್ದಾಗಲೂ ಬರೀ ಹಣ ಕೈಲಿಟ್ಟುಕೊಂಡು ಭಂಡತನದಿಂದ ಪತ್ರಿಕೆ ಶುರು ಮಾಡಿದವರು ಸೋತಿದ್ದಾರೆ. ಕೈಲಿ ಹಣ ಇರದಿದ್ದಾಗಲೂ ಇನ್ನುಳಿದ ಕ್ವಾಲಿಟಿ ಇತ್ತೆಂಬ ಕಾರಣಕ್ಕೆ ಹಾಗೂ ಅದಕ್ಕೊಂದು ಪ್ರಸ್ತುತತೆ ಇದ್ದಾಗ ಗೆದ್ದು ಈಗ ಸುಸ್ಥಿತಿ ತಲುಪಿರುವ (ನಮ್ಮದೂ ಸೇರಿದಂತೆ) ಕೆಲ ಪತ್ರಿಕೆಗಳೂ ಇವೆ.

ಆದರೆ ಹಣ, ತಂಡ, ಭರ್ಜರಿ ಪ್ರಚಾರವಿದ್ದಾಗಲೂ ಗರ್ವ ಭಂಗವಾಗಿದ್ದೇಕೆಂದರೆ ಅದು ಹೊಸತೇನನ್ನು ಹೊಂದಿರಲಿಲ್ಲ. ಅದಕ್ಕೆ ಒಂದು social significance ಇರಲಿಲ್ಲ. ಗರ್ವ ಟೀಂ 'ಮುತ್ತಪ್ಪ ರೈಟ್ಸ್' ಎಂದು ಪ್ರಚಾರ ಕೊಟ್ಟರೂ ಕೂಡ **finally Muthappa Rai left it!**

ದಿಕ್ಸೂಚಿಯದ್ದು ಇನ್ನೊಂದು ಟ್ರಾಜಿಡಿ.

ಒಂದು ರೀತಿಲಿ ಅದರ ಮಾಲೀಕ ಹಾಗೂ ಸಂಪಾದಕ ಪಾಟೀಲರೇ ದಿಕ್ಸೂಚಿಯನ್ನು ಕೊಂದರೆಂದೇ ಹೇಳಬಹುದು. ಪಾಟೀಲರು ದಿಕ್ಸೂಚಿಯಿಂದ ಗಳಿಸಿದ ಹಣವನ್ನು ಪ್ಲಸ್ ಸಾಲ ಮಾಡಿ ವಿವೇಚನೆಯಿಲ್ಲದೆ ಪ್ರಿಂಟಿಂಗ್ ಬ್ಯುಸಿನೆಸ್‌ಗೆ ಸುರಿಯುತ್ತಾ ಹೋದರು. ಅದನ್ನು ನಿರ್ವಹಿಸುವ ಚಾಕಚಕ್ಯತೆ ಅವರಿಗಿರಲಿಲ್ಲ. ತಮ್ಮದೇ ಪ್ರಿಂಟಿಂಗ್ ಮೆಷಿನ್ ಇದೆಯೆಂಬ ಕಾರಣಕ್ಕೆ ಸಿಲಿಕಾನ್ ಸಿಟಿ, ಜೀವನಾಡಿ, Easy English, Competology, Learn Kannada ಹೀಗೆ ಮನಬಂದಂತೆ ಹೊಸ ಪತ್ರಿಕೆಗಳನ್ನು ಚಾಲು ಮಾಡಿಬಿಟ್ಟರು. ಈ ಗದ್ದಲದಲ್ಲಿ ಸಂಸ್ಥೆಯ Flag Ship ದಿಕ್ಸೂಚಿಯೇ ಸರಿ ಪೋಷಣೆ ಸಿಗದೆ ಸೊರಗುತ್ತಾ ಹೋಯಿತು. ಕೊನೆಗೀಗ ನಿಂತೇ ಹೋಗಿದೆ. ಸಂಸ್ಥೆಯ ಲಕ್ಷಾಂತರ ರೂಪಾಯಿ ಬಾಕಿ ಹಣ ಏಜೆಂಟರ ಬಳಿ ಇದೆ. ಆದರೆ ಈ ವ್ಯಾಪಾರಿ ಜಗತ್ತಿನಲ್ಲಿ ಸೋತವರ ಬಗ್ಗೆ ಯಾರೂ ಕಣ್ಣೀರು ಹಾಕುವುದಿಲ್ಲ. ಕಾಸೂ ಕೊಡುವುದಿಲ್ಲ. ಸಜ್ಜನ ಪಾಟೀಲರು ಈ ಬಿಕ್ಕಟ್ಟಿನಿಂದ ಹೊರಬರುವಂತಾಗಲಿ. ಅವರು ದಿಕ್ಸೂಚಿ ಚಾಲೂ ಮಾಡಿದಾಗ ಪ್ರತಿಸ್ಪರ್ಧಿಗಳೇ ಇರಲಿಲ್ಲ. ಈಗ ನಮ್ಮದೇ ಗೈಡ್ ಸೇರಿದಂತೆ ಅಂತಹ ಒಂದು ಡಜನ್ ಮಾಸ ಪತ್ರಿಕೆಗಳಿವೆ. ದಕ್ಕಿದ ಯಶಸ್ಸನ್ನು ಉಳಿಸಿಕೊಳ್ಳುವ ಕಲೆ ಪಾಟೀಲರಿಗಿರಲಿಲ್ಲ ಅಷ್ಟೇ.

## 2 ನೇ ಅಂಬೇಡ್ಕರ್ ಯಾರು?




ಇತಿಹಾಸ ಓದುವಾಗ 1 ನೇ ಕೃಷ್ಣ 2 ನೇ ಪುಲಕೇಶಿ ಎಂದು ನಾವು ಓದುತ್ತಿದ್ದೆವಲ್ಲ, ಅದೇ ರೀತಿ ಈಗ 2 ನೇ ಅಂಬೇಡ್ಕರ್ ಎನ್ನೋ ಮಾತೂ ಚಲಾವಣೆಗೆ ಬಂದಿದೆ. ಆದರೆ ಅಸಲಿಗೆ 2 ನೇ ಅಂಬೇಡ್ಕರ್ ಯಾರೆಂದು ತೀರ್ಮಾನಿಸುವುದು ಸ್ವಲ್ಪ ಕಷ್ಟ. ಕರ್ನಾಟಕದಲ್ಲಂತೂ ಆ ಕಿರೀಟಕ್ಕಾಗಿ ವಿಪರೀತ ಸ್ಪರ್ಧೆ ಇದೆ. ಬೆಂಗಳೂರಿನ ಬಹುತೇಕ ದಲಿತ ಮುಖಂಡರು ತಾವೇ ಅಭಿನವ ಅಂಬೇಡ್ಕರ್ ಎಂಬಂತೆ ಅಭಿನಯಿಸುತ್ತಿರುತ್ತಾರೆ. ಈ ಗದ್ದಲದಲ್ಲೇ ಶಿವಮೊಗ್ಗದಲ್ಲೊಬ್ಬ ಅಂಬೇಡ್ಕರ್ ಅವತರಿಸಿರುವ ಸುದ್ದಿ ಬಂದಿದೆ. ಯಾವುದೋ ಮೀಟಿಂಗ್‌ನಲ್ಲಿ ಕುಂಸಿ ಉಮೇಶ್ ಎಂಬ ಲೆಕ್ಚರರ್ "ಇಲ್ಲಿ ಇವತ್ತು 2 ನೇ ಅಂಬೇಡ್ಕರ್ ಬಂದಿದ್ದಾರೆ... ನೀವೆಲ್ಲಾ ದಲಿತ ವಿದ್ಯಾರ್ಥಿಗಳು ಯಾವ ಪ್ರಗತಿಪರರ ಜೊತೆಗೂ ಸೇರದೆ ಇವರು ಹೇಳಿದಂತೆ ಮಾತ್ರ ಕೇಳಬೇಕು" ಎಂದೆಲ್ಲಾ ಉಪದೇಶ ಮಾಡಿದ್ದಾರಂತೆ. ಅಂದಹಾಗೆ ಈ 2 ನೇ ಅಂಬೇಡ್ಕರ್ ಎಂದು ಕೀರ್ತಿ ಪಡೆದಿರುವವರು ಬಹುಜನ ಸಮಾಜ ಪಕ್ಷದ ನಾಯಕ ಗುರುಮೂರ್ತಿ ಮಹಾಶಯರು. ಹೀಗೆ ಏಕಾಏಕಿ 2 ನೇ ಅಂಬೇಡ್ಕರ್ ಯಾರೆಂದು ತೀರ್ಮಾನ ಆಗೇ ಹೋಗಿರುವುದರಿಂದ ಇನ್ನುಳಿದ ಅಭಿನವ ಅಂಬೇಡ್ಕರ್‌ಗಳೇನು ಮಾಡಬೇಕು?

## ರಜನಿ ದುರ್ಗಂಧ




ನಟ ರಜನಿಕಾಂತ್ ಬಗ್ಗೆ ಇತ್ತೀಚೆಗೆ ವಿಶಿಷ್ಟ, ವಿಕ್ಷಿಪ್ತ ಎಂತೆಲ್ಲಾ ಟೈಟಲ್‌ಗಳಿರುವ ವಿಚಿತ್ರ ಪುಸ್ತಕವೊಂದು ಪ್ರಕಟವಾಗಿ ಚೆನ್ನಾಗಿ ಮಾರಾಟವೂ ಆಗಿತ್ತು. ಈಗಿನ ವಿಶೇಷ ಏನೆಂದರೆ ಈ ಪುಸ್ತಕ ರೆಡಿ ಮಾಡಿದ್ದ ಇಬ್ಬರು ಬೀದಿ ಜಗಳಕ್ಕೆ ಬಿದ್ದಿರುವುದು. ಸಿನಿಮಾ ಪತ್ರಕರ್ತ ಮಹೇಶ್ ದೇವಶೆಟ್ಟಿ ಈ ಪುಸ್ತಕವನ್ನು ಬರೆದು "ಸದ್ಯಕ್ಕೆ ನನ್ನ ಹೆಂಡತಿಯಾಗಿರುವ .....ಗೆ ಅರ್ಪಣೆ" ಎಂದು ಪ್ರಿಂಟು ಮಾಡಿಸಿ ತನ್ನ ತಿಕ್ಕಲು ಬುದ್ಧಿ ತೋರಿಸಿದ್ದಾನೆ. ಮತ್ತೊಂದೆಡೆ ಪ್ರಕಾಶಕ ರವಿಚಂದ್ರರಾವ್ "ಲೇಖಕ ಮಹೇಶ್ ದೇವಶೆಟ್ಟಿ ನನ್ನ ಹತ್ತಿರ ಹಣ ಪಡೆದಿದ್ದರೂ ದುಡ್ಡೆ ಕೊಡಲಿಲ್ಲವೆಂದು ಅಪಪ್ರಚಾರ ಮಾಡುತ್ತಿದ್ದಾನೆ" ಎಂದು ಆಪಾದನೆಗಳ ಹೊಸ ಪುಸ್ತಕವನ್ನೇ ಬರೆದು ಫ್ರೀಯಾಗಿ ಹಂಚುತ್ತಿದ್ದಾನೆ.

ಇಲ್ಲಿ ಪ್ರಕಾಶಕ ರವಿಚಂದ್ರರಾವ್ ಆರೋಪಗಳಲ್ಲಿ ನಿಜ ಎಷ್ಟಿದೆ ಎಂದು ಚೆಕ್ ಮಾಡಿ ನೋಡಬೇಕಿದೆ. ಏಕೆಂದರೆ ತಾನು ಯಾವ ಬಾಬ್ತಿಗೆಂದು ಹಣ ಪಡೆದಿರುತ್ತಾನೋ ಅದಕ್ಕೆ ಬಿಟ್ಟು ಬರೆಯುವ ಅಭ್ಯಾಸ ಆ ಲೇಖಕರಿಗಿದೆ. ಉದಾಹರಣೆಗೆ ಒಂಟೂರು ಕಾಸು ಕೈಗಿಟ್ಟರೆ ಹಾಳು ಎ ಗಬ್ಬು ಕದ್ದಿರುವ ಸಿನಿಮಾಗಳನ್ನು ಕೂಡಾ ಬೊಂಬಾಟ್ ಸಿನಿಮಾ ಅಂತ ವಿಮರ್ಶೆ ಬರೆಯುವ ಚಾಳಿ ಮಹೇಶ್ ದೇವಶೆಟ್ಟಿಗಿದೆ. ಅಂದಹಾಗೆ ಈತ ವಿಜಯ ಕರ್ನಾಟಕ ಪತ್ರಿಕೆಯಲ್ಲಿ 'ಕೆಲಸ' ಮಾಡುತ್ತಿದ್ದಾನೆ!




# ಓಂಕಾರಾಶ್ರಮ ಶಿವಪುರಿ ಸ್ವಾಮಿಗೆ ವಿಷ ನೀಡಿ ಕೊಲೆ?



**ಅವತ್ತು ಶಿವಪುರಿಸ್ವಾಮಿಗಳ ಮೃತದೇಹದ ಪೋಸ್ಟ್‌ಮಾರ್ಟಂ ಆಗಿರಲಿಲ್ಲ. ಅದಕ್ಕೆ ಒತ್ತಾಯಿಸುವ ಜರೂರತ್ತೂ ಸಹ ಯಾರಿಗೂ ಇರಲಿಲ್ಲವಾದ್ದರಿಂದ ಅಂತ್ಯ ಸಂಸ್ಕಾರ ನಡೆದುಹೋಗಿತ್ತು. ಆದರೆ ಅಲ್ಲಿಂದಾಚೆಗೆ ನಡೆಯುತ್ತಿರುವ ನಾಟಕೀಯ ಘಟನೆಗಳೇ ಶಿವಪುರಿಸ್ವಾಮಿಯ ಸಾವು ಸಹಜ ಸಾವಲ್ಲ ಎಂಬ ಅನುಮಾನಕ್ಕೆ ಪುಷ್ಟಿ ನೀಡುತ್ತಿದೆ ಮತ್ತು ಸ್ವಾಮೀಜಿಯನ್ನು ವಿಷ ನೀಡಿ ಕೊಂದಿದ್ದಾರೆಯೇ ಎಂಬ ಅನುಮಾನವನ್ನೂ ಸೃಷ್ಟಿಸಿದೆ.**

■ ಬಿಳಿದಾಳೆ ಈಶ

ಈ ತರಹದ್ದೊಂದು ಗುಮಾನಿ ಈಗ ಕೆಲವರಿಗೆ ಬಂದಿದೆ. ಕಳೆದ ಜುಲೈ 25 ರಂದು ಓಂಕಾರಾಶ್ರಮದ ಶಿವಪುರಿ ಸ್ವಾಮಿ ದಿಢೀರೆಂದು ಸತ್ತು ಹೋದರು. ಒಂಚೂರು ವಾಂತಿ, ಭೇದಿ ಆಗಿ ಅದಕ್ಕೂ ಮೊದಲು mild heart attack ಸಹ ಆಗಿತ್ತೆಂದು ಆಮೇಲೆ ಹೇಳಲಾಗಿತ್ತು. ಆದರೆ ಆಶ್ರಮದಿಂದ ಫರ್ಲಾಂಗ್ ದೂರದಲ್ಲಿರುವ ಮಣಿಪಾಲ್ ಆಸ್ಪತ್ರೆಯ ವೈದ್ಯರು ಚಿಕಿತ್ಸೆ ನೀಡಲೂ ಅವಕಾಶ ಸಿಗದ ಕಾರಣ brought dead ಅಂತಲೇ ದಾಖಲಿಸಿಕೊಂಡಿದ್ದರು. ಅಂದರೆ ಆಸ್ಪತ್ರೆಗೆ ಕರೆದುಕೊಂಡು ಹೋಗುವ ಮೊದಲೇ ಶಿವಪುರಿ ಸ್ವಾಮಿಗಳು ಶಿವಪಾದ ಸೇರಿಕೊಂಡಿದ್ದರೆಂದಾಯಿತು. ಅದನ್ನೇ ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ ಸ್ವಾಮಿಗಳು ಸತ್ತಿದ್ದಾರೆಂದು ಗ್ಯಾರಂಟಿಯಾದ ಮೇಲಷ್ಟೇ ಅವರನ್ನು (ದೇಹವನ್ನು) ಅರ್ಜೆಂಟಾಗಿ ಆಸ್ಪತ್ರೆಗೆ ಒಯ್ಯುವ ಪ್ರಹಸನ ನಡೆಯಿತು ಎಂಬ ಅನುಮಾನ ಬೆಳೆಯುತ್ತಿದೆ.




ಆ ಕಾರಣಕ್ಕಾಗೇನೆ ಸಿಟಿ ಕ್ರೈಂ ಬ್ರಾಂಚ್ ಪೊಲೀಸರೂ ಈಗ ಸೀನ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ತನಿಖೆ ಶುರು ಮಾಡಿದ್ದಾರೆ.

ಆಶ್ಚರ್ಯದ ಸಂಗತಿ ಏನೆಂದರೆ ಅವತ್ತು ಶಿವಪುರಿಸ್ವಾಮಿಗಳ ಮೃತದೇಹದ ಪೋಸ್ಟ್‌ಮಾರ್ಟಂ ಆಗಿರಲಿಲ್ಲ, ಅದಕ್ಕೆ ಒತ್ತಾಯಿಸುವ ಜರೂರತ್ತೂ ಸಹ ಯಾರಿಗೂ ಇರಲಿಲ್ಲವಾದ್ದರಿಂದ ಅಂತ್ಯ ಸಂಸ್ಕಾರ ನಡೆದುಹೋಗಿತ್ತು.

ಆದರೆ ಅಲ್ಲಿಂದಾಚೆಗೆ ನಡೆಯುತ್ತಿರುವ ನಾಟಕೀಯ ಘಟನೆಗಳೇ ಶಿವಪುರಿಸ್ವಾಮಿಯ ಸಾವು ಸಹಜ ಸಾವಲ್ಲ ಎಂಬ ಅನುಮಾನಕ್ಕೆ ಪುಷ್ಟಿ ನೀಡುತ್ತಿದೆ.

ಆ ಅನುಮಾನಗಳಾವುವೂ ಕಡಿಮೆ ಗೇಜಿನವುಗಳಲ್ಲ.

ಹೇಳಿಕೊಳ್ಳಲಿಕ್ಕೆ ಒಂದು ಅಡ್ರೆಸ್ಸೂ ಇರದ ಮಧುಸೂದನ ಸ್ವಾಮಿ ನಾನೇ ಉತ್ತರಾಧಿಕಾರಿ ಅಂತ ಇಲಿಯಂತೆ ಆಶ್ರಮದ ಬಿಲ ಹೊಕ್ಕಿದ್ದಾನೆ.



ಶೇಖರ್‌ಸ್ವಾಮಿ

ಬೆಂಗಳೂರಿನ ಭಾರಿ ರಿಯಲ್ ಎಸ್ಟೇಟ್ ಕುಳಗಳು ಅದರಲ್ಲೂ ಮೈಸೂರು ರೋಡಿನಲ್ಲಿ ವ್ಯವಹಾರ ನಡೆಸುತ್ತಿರುವ ಮಂದಿ ಆಶ್ರಮದ ಉತ್ತರಾಧಿಕಾರಿ ಬಗ್ಗೆ ವಿಪರೀತ ತಲೆ ಕೆಡಿಸಿಕೊಂಡು ಮಧ್ಯೆ ಪ್ರವೇಶಿಸುತ್ತಿದ್ದಾರೆ.

ಶಿವಪುರಿ ಸ್ವಾಮಿಯ ಹಳೇ ಆಶ್ರಮವಾದ ತಿರುಚ್ಚಿ ಕೈಲಾಸಾಶ್ರಮದ ಹಾಲಿ ಗುರು ಜಯೇಂದ್ರ ಪುರಿ ಹಾಗೂ ಆದಿ ಚುಂಚನಗಿರಿ ಮಠದ ಶೇಖರ್‌ಸ್ವಾಮಿ ಅನುಮಾನಾಸ್ಪದ ರೀತಿಯಲ್ಲಿ ಅನಾಮಿಕ ಮಧುಸೂದನ ಸ್ವಾಮಿಗೆ ಸಪೋರ್ಟ್ ಕೊಡುತ್ತಿದ್ದಾರೆ.

ಶಿವಪುರಿ ಸ್ವಾಮಿ ಸತ್ತ ದಿನ ಆಶ್ರಮದ ಲಾಕರ್‌ನಲ್ಲಿ ಇದ್ದ ಹಣ 3 ಕೋಟಿ ರೂಪಾಯಿಗಳು ಮತ್ತು ಅದಷ್ಟೂ ಅವತ್ತೇ ನಾಪತ್ತೆಯಾಗಿದೆ ಅನ್ನುವ ಮಾತುಗಳೂ ಇವೆ. ಈ ಹಣ ಪೂರ್ತಿ ಬ್ಲಾಕ್‌ಮನಿ ಎಂಬ ಬಗ್ಗೆ ಸಂಶಯವಿಲ್ಲ, ಆದರೆ ಆ ದುಡ್ಡು ಯಾರದ್ದು ಮತ್ತು ಲೂಟಿ ಮಾಡಿದವರ್ಯಾರೆಂಬ ಪ್ರಶ್ನೆಗೆ ಇನ್ನೂ ಉತ್ತರ ಸಿಕ್ಕಿಲ್ಲ.

ಈ ಮಧ್ಯೆ ಧ್ಯಾನ ಸುಂದರಿ ವನಿತಾ ಹಾಗೂ ಸುಂಕ ಪದ್ಮನಾಭ ನೇತೃತ್ವದ ಗೀತಜ್ಞಾನ ಯೋಗ ಟ್ರಸ್ಟ್‌ನವರು ಓಂಕಾರಾಶ್ರಮದ ಉಸ್ತುವಾರಿ ನಮಗೇ ಕೊಡಿ ಇಲ್ಲಾಂದ್ರೆ ಕೋರ್ಟಿಗೆ ಹೋಗುತ್ತೇವೆಂದು ಮುಖ್ಯಮಂತ್ರಿ ಕುಮಾರಸ್ವಾಮಿಗೆ ಧಮಕಿ ಪತ್ರ ಬರೆದಿದ್ದಾರೆ.

ಇದೆಲ್ಲಕ್ಕೂ ಮೀರಿದ ವಾಸ್ತವ ವಿಚಾರ ಏನೆಂದರೆ ಓಂಕಾರಾಶ್ರಮಕ್ಕೆ ಸೇರಿರುವ 18 ಎಕರೆ ಭೂಮಿ ಹಾಗೂ ಕಟ್ಟಡಗಳ ಇವತ್ತಿನ ಮಾರುಕಟ್ಟೆ ಬೆಲೆ 100 ಕೋಟಿಗೂ ಜಾಸ್ತಿ ಇದೆ.

ವಾರಸುದಾರರಿಲ್ಲದ ಈ ಚಿನ್ನದ ಗಣಿ ಮೇಲೆ ಕಾಗೆ-ಗೂಬೆಗಳ ಕಣ್ಣು ಬೀಳುವುದು ಸಹಜ ತಾನೆ. ಹಾಗಾಗೇ ಓಂಕಾರಾಶ್ರಮದ ಸಹಜ ಉತ್ತರಾಧಿಕಾರಿ ಯಾಗಬೇಕಿದ್ದ ಉಪ್ಪಾರ ಜನಾಂಗದ ಪುರುಷೋತ್ತಮಾನಂದ ಪುರಿ ಸ್ವಾಮಿಗಳು ಅಲ್ಲಿಗೆ ಕಾಲಿಡದಂತೆ ಒಂದು ಪಿತೂರಿಯೇ ನಡೆಯುತ್ತಿದೆ.

65 ವರ್ಷದ ಶಿವಪುರಿ ಸ್ವಾಮಿ ಹೀಗೆ ಸಡನ್ನಾಗಿ ಪ್ರಾಣ ಬಿಡಲು ಅವರ ದೇಹಸ್ಥಿತಿ ಹೇಗಿತ್ತು ಎಂಬುದಕ್ಕಿಂತ ಆಶ್ರಮದ ಸ್ಥಿತಿ ಹೀಗಿತ್ತು ಎನ್ನುವುದೇ ಸರಿ ವಿವರಣೆ. ಇದು **murder for gain** ಇರಬಹುದಾ ಅನ್ನೋ ಸಂಶಯ ಬರಲು ಮೇಲೆ ಹೇಳಿರುವ ನಾನಾ ಹಿನ್ನೆಲೆಯಿದೆ. ಸಿಸಿಬಿ ಪೊಲೀಸರ ತನಿಖೆ ಏನು ಹೇಳುತ್ತದೆಂಬುದನ್ನು ಎಲ್ಲರೂ ಈಗ ಕಾಯುತ್ತಿದ್ದಾರೆ.

ಮತ್ತೊಂದೆಡೆ ಶಾಸಕ ನೀರಾವರಿ, ಗಂಗಣ್ಣ ಗಡ್‌ಕರ್ ನೇತೃತ್ವದ ಉಪ್ಪಾರ ಸಮುದಾಯ ನವೆಂಬರ್ ತಿಂಗಳ ಒಂದು ದಿನ ಸಾವಿರಾರು ಸಂಖ್ಯೆಯಲ್ಲಿ ದಂಡೆತ್ತಿ ಬಂದು ಓಂಕಾರಾಶ್ರಮ ವಶಪಡಿಸಿಕೊಳ್ಳಲು ರೆಡಿಯಾಗುತ್ತಿದ್ದಾರೆ.

## 'ಮಧು' ಸೂದನ ಸ್ವಾಮಿಯೂ 'ವಿಷ' ಪ್ರಾಶನ ಸಂಗತಿಯೂ....

ಹಾಲಿ ಓಂಕಾರಾಶ್ರಮದ ಇನ್‌ಚಾರ್ಜ್ ಗುರುವೇಷ ಧಾರಿ ಮಧುಸೂದನ ಯಾವೂರಿನವನು? ಇಲ್ಲಿಗ್ಯಾಕೆ ಬಂದ? ಕರೆತಂದವರ್ಯಾರು? ಓಂಕಾರಾಶ್ರಮಕ್ಕೂ, ಶಿವಪುರಿ ಸ್ವಾಮಿಗೂ, ಇವನಿಗೂ ಯಾವ ಬಾದರಾಯಣ ಸಂಬಂಧ ಎಂಬುದು ಯಾರಿಗೂ ಗೊತ್ತಾಗುತ್ತಿಲ್ಲ. ಸ್ವತಃ ಆಶ್ರಮದ ಸಿಬ್ಬಂದಿ ಹಾಗೂ ಶಿವಪುರಿ ಆಪ್ತರಿಗೂ ಕೂಡ.

ಶಿವಪುರಿ ಸ್ವಾಮಿ ಸಾಯುವ 10 ದಿನದ ಹಿಂದಷ್ಟೇ ಈ ಮಧುಸೂದನ ಆಶ್ರಮದಲ್ಲಿ ಕಾಣಿಸಿಕೊಂಡಿದ್ದ. ಅವತ್ತು ಜುಲೈ 14 ರ ದಿನ ಶಿವಪುರಿ ಸ್ವಾಮಿಯ ಆಪ್ತರಾದ ನಿವೃತ್ತ ಐಎಎಸ್ ಅಧಿಕಾರಿ ಗಂಗಪ್ಪನವರ ಬರ್ತ್‌ಡೇ ಸಮಾರಂಭ ಏರ್ಪಾಡಾಗಿತ್ತು. ಎಂಎಲ್‌ಸಿ ನೀರಾವರಿ ಮುಂತಾದವರು ಬಂದಿದ್ದ ಈ ಕಾರ್ಯಕ್ರಮದಲ್ಲಿ ಕರೆಯದೆ ಬಂದಿದ್ದ ಏಕೈಕ ವ್ಯಕ್ತಿ ಈ ಮಧುಸೂದನ. ಆ ದಿನ 'ಈತ ಯಾರೆಂದು' ಕೇಳಿದವರಿಗೆ ಶಿವಪುರಿ ಸ್ವಾಮಿ ಹೇಳಿದ್ದು "ದೂರದಿಂದ ಬಂದಿದ್ದಾರೆ, ಒಂದು ನಾಲ್ಕು ದಿನ ಇದ್ದು ಹೋಗ್ತಾರೆ" ಎಂದು.. ಆದರೆ ಮುಂದೆ ನಡೆದದ್ದೇ ಬೇರೆ ಕತೆ.. ಇನ್ನೂ ಬದುಕಿರಬಹುದಾಗಿದ್ದ ಶಿವಪುರಿ ಸ್ವಾಮಿಯನ್ನು ಈ ಮಾತು ಹೇಳಿದ 11 ನೇ ದಿನ ಅನುಮಾನಾಸ್ಪದ ರೀತಿಯಲ್ಲಿ ಭೂಲೋಕದಾಚೆಗೆ ರವಾನಿಸಲಾಯಿತು.. ನಾಲ್ಕು ದಿನ ಇರಲಷ್ಟೇ ಬಂದಿದ್ದ ಮಧುಸೂದನ ಸ್ವಾಮಿ ಜಾಗ ಖಾಲಿ ಮಾಡುವ ಬದಲಿಗೆ ಪರ್ಮನೆಂಟಾಗಿ ಅಲ್ಲೇ ತಳ ಊರಿದ್ದಾನೆ. ಈ ನಡುವೆ ಜುಲೈ 14 ರಿಂದ ಜುಲೈ 25 ರೊಳಗೆ ಏನೇನು ಕರಾಮತ್ತು ನಡೆಯಿತೊ ಏನೊ, ಶಿವಪುರಿ ಪ್ರಾಣ ಬಿಟ್ಟ ಮರುದಿನವೇ ಒಂದು 'ವಿಲ್' ಪ್ರತ್ಯಕ್ಷವಾಯಿತು.. ಈ ಹುಡುಗುಬಟ್ಟೆ 'ಮಧುಸೂದನ ಸ್ವಾಮಿಯೇ ತನ್ನ ಉತ್ತರಾಧಿಕಾರಿ' ಅಂತ ಶಿವಪುರಿ ಬರೆದಿದ್ದ ವಿಲ್ ಅದು. ವಿಪರ್ಯಾಸ ಏನೆಂದರೆ ಈ ವಿಲ್‌ಗೂ ಮುನ್ನ ಶಿವಪುರಿ ಸ್ವಾಮಿ ಇನ್ನೊಂದು ವಿಲ್ ಬರೆದಿಟ್ಟಿದ್ದರು.. ಹೊಸದುರ್ಗದಲ್ಲಿರುವ ಪುರುಷೋತ್ತಮಾನಂದಪುರಿ ಸ್ವಾಮಿ ತನ್ನ ಉತ್ತರಾಧಿಕಾರಿ ಎಂದು ಸೂಚಿಸಿದ್ದ ವಿಲ್ ಅದು. ಶಿವಪುರಿ ಹಾಗೂ ಪುರುಷೋತ್ತಮಾನಂದ ಸ್ವಾಮಿ ಇಬ್ಬರೂ ಉಪ್ಪಾರ ಜನಾಂಗದವರೇ ಆಗಿದ್ದರಿಂದ ಪರಸ್ಪರ ಗುರು-ಶಿಷ್ಯ ಸಂಬಂಧವೂ ಇತ್ತಾದ್ದರಿಂದ ಆ ವಿಲ್‌ಗೆ ಅರ್ಥ, ಅಧಿಕೃತತೆ, ಸಾಮಾಜಿಕ ಮಾನ್ಯತೆ ಹಾಗೂ ಪ್ರಸ್ತುತತೆ ಇದೆ ಎಂಬುದು ಮೇಲ್ನೋಟಕ್ಕೇ ಗೊತ್ತಾಗುತ್ತಿದೆ. ಅದು ಬಿಟ್ಟು ಜಾತಿಯಲ್ಲಿ ಬ್ರಾಹ್ಮಣನಾಗಿರುವ ಮಧುಸೂದನ ಸೃಷ್ಟಿಸಿರುವ ವಿಲ್‌ಗೆ ಆ ತಾಕತ್ತಿಲ್ಲ. ಆತ ಶಿವಪುರಿಯ ಶಿಷ್ಯನೂ ಅಲ್ಲ, ಜಾತಿವಸ್ತನೂ ಅಲ್ಲ. ಆಶ್ರಮ ಯಾವ ದಿಕ್ಕಿನಲ್ಲಿತ್ತು

▶

## ಹಿರಿಯೂರಿನಲ್ಲಿ ಯುದ್ಧ


ಶಿವಪುರಿ ಸ್ವಾಮಿಗೆ ಹಿರಿಯೂರು ಬಳಿ ಒಂದು ನೂರೆಕರೆ ಜಮೀನಿತ್ತು, ಬೆಂಗಳೂರಿನ ಓಂಕಾರಾಶ್ರಮದಲ್ಲಿ ಯಾವಾಗ ಬ್ರಾಹ್ಮಣ ಮಧುಸೂದನ ಬಂದು ಕುಳಿತನೋ ಆಗಲೇ ಕನಲಿ ಹೋದ ಉಪ್ಪಾರರು ಪುರುಷೋತ್ತಮಾನಂದ ಸ್ವಾಮಿಯನ್ನು ಮುಂದಿಟ್ಟುಕೊಂಡು ಆಶ್ರಮಕ್ಕೆ ನುಗ್ಗಿದ್ದರು. ಆದರೆ ಬಾಲಗಂಗಾಧರ ಸ್ವಾಮಿ ಸುಮ್ಮನಿರಬೇಕಲ್ಲ, ಅವರು ಕೆಂಗೇರಿ ಪೊಲೀಸರನ್ನು ಛೂಬಿಟ್ಟು ಎಲ್ಲರನ್ನೂ ಹೊರ ಹಾಕಿಸಿಬಿಟ್ಟರು. ಅತ್ತ ಹಿರಿಯೂರು ತೋಟಕ್ಕೂ ಬಿಜಾಪುರ ಕಡೆಯ ಬರಾದಾರ ಎಂಬಾತನನ್ನು ಕಾವಲಿರುವಂತೆ ಕುಳ್ಳಿರಿಸಿದರು. ಆದರೆ ಉಪ್ಪಾರ ಜನ ಈಗ ಅಲ್ಲಿಗೆ ಹೋಗಿ ಬರಾದಾರನಿಗೆ ನಾಲ್ಕು ಲಾತ ಬಿಗಿದು ಓಡಿಸಿ ಜಮೀನು ವಶಪಡಿಸಿಕೊಂಡಿದ್ದಾರೆ.

ಅವರ ಮುಂದಿನ ಗುರಿ ಓಂಕಾರಾಶ್ರಮ. ಅದಕ್ಕಾಗಿ ಶೀಘ್ರದಲ್ಲೇ ಇನ್ನೊಂದು ಸೆಣೆಸಾಟವೂ ನಡೆಯಲಿದೆ.

## ಯೋಗ ಸುಂದರಿ ಮತ್ತು ಪದ್ಮನಾಭರ ಗೀತ ಜ್ಞಾನ ಟ್ರಸ್ಟ್‌ಗೂ ಒಂದು ಅರ್ಜಿ



ಆರ್ಯ ವೈಶ್ಯ ಜನಾಂಗದವರೇ ಸೇರಿ ಮಾಡಿಕೊಂಡಿರುವ ಒಂದು ಟ್ರಸ್ಟ್ ಇದು. ಕೆಂಗೇರಿ ಹೋಬಳಿಯ, ಗ್ರಾಮದ ಓಂಕಾರಾಶ್ರಮದ ಪಕ್ಕದಲ್ಲೇ ಇವರೂ ಒಂದು ನಾಲ್ಕೆಕರೆ ಜಮೀನು ಮಾಡಿಕೊಂಡು ಯೋಗ, ಧ್ಯಾನ, ಪೂಜೆ ಇತ್ಯಾದಿ ನಡೆಸಿಕೊಂಡಿದ್ದಾರೆ. ವಿನುತಾ ಶ್ರೀನಿವಾಸ್ ಎಂಬುವರು ಇಲ್ಲಿ ಯೋಗ, ಧ್ಯಾನದ ಪಾಠ ಹೇಳಿಕೊಟ್ಟರೆ ಸುಂಕ ಪದ್ಮನಾಭ ಎಂಬ ಅಗರಬತ್ತಿ ಕಂಪನಿ ಮಾಲೀಕರು ಟ್ರಸ್ಟ್‌ನ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ.



ಪದ್ಮನಾಭ

ಶಿವಪುರಿ ಸತ್ತ ನಂತರ ಇವರಿಗೆ ಯಾರು ಗೀತೋಪದೇಶ ಕೊಟ್ಟರೋ ಏನೋ ಪದ್ಮನಾಭ ನೇರ ಕುಮಾರಸ್ವಾಮಿ ಹತ್ತಿರ ಒಂದು ಅರ್ಜಿ ಹಿಡಿದುಕೊಂಡು ಹೋಗಿ ಓಂಕಾರಾಶ್ರಮದ ಉಸ್ತುವಾರಿಯನ್ನು ತಮಗೇ ವಹಿಸಿಕೊಡುವಂತೆ ಕೇಳಿದ್ದಾರೆ. 1993 ರಲ್ಲಿ ಶಿವಪುರಿಸ್ವಾಮಿ ಆಶ್ರಮ ಶುರು ಮಾಡಿದಾಗ ಅವರಿಗೆ ದುಡ್ಡು ಕೊಟ್ಟು ಸಹಾಯ ಮಾಡಿದ್ದೀವಿ. ಹಾಗಾಗಿ ನಮಗೂ ಆಶ್ರಮದ ಮೇಲೆ ಹಕ್ಕಿದೆ ಅಂತ ಇವರ ಅಂಬೋಣ. ಇವೆಲ್ಲಾ ನಡೆಯೋ ಮಾತಾ ಹೇಳಿ.

ಎಂಬುದೂ ಗೊತ್ತಿರದ ದಿಕ್ಕಿಲ್ಲ ಪರದೇಶಿ ಆತ. ಅಂಥವನು ಹೀಗೆ ರಾತ್ರೋರಾತ್ರಿ ಪ್ರತ್ಯಕ್ಷನಾಗಿ ವಿಲ್ ತೋರಿಸುತ್ತಾ ನಾನೇ ಓಂಕಾರಾಶ್ರಮದ ಉತ್ತರಾಧಿಕಾರಿ ಅಂತ ಬಂದರೆ ಅನುಮಾನ ಬರದಿರುತ್ತಾ ಹೇಳಿ? ನಾಳೆ ಇದೇರೀತಿ ಬ್ರಾಹ್ಮಣರ ಮಠಾಧೀಶನೊಬ್ಬ ಸತ್ತರೆ ಅವನ ಜಾಗಕ್ಕೆ ಉಪ್ಪಾರ ಸ್ವಾಮಿಯೋ ಅಥವಾ ಶೂದ್ರ ಗುರುಗಳ್ಯಾರಾದರೂ ಹೋಗಿ 'ನಾನೇ ಉತ್ತರಾಧಿಕಾರಿ, ಜಾಗ ಬಿಡಿ' ಅಂದರೆ ಬ್ರಾಹ್ಮಣರು ಒಪ್ಪುತ್ತಾರಾ?

ಒಪ್ಪುವುದಿಲ್ಲ ಮಾತ್ರವಲ್ಲ, ಭೂಮಿ-ಆಕಾಶ ಒಂದು ಮಾಡುವಂತೆ ಗಲಾಟೆ ಮಾಡಿ, ಪತ್ರಿಕೆ ಟಿವಿಗಳೂ ರಾದ್ಧಾಂತವೆಬ್ಬಿಸಿ ಅಲ್ಲೋಲ-ಕಲ್ಲೋಲ ಮಾಡಿಬಿಡುತ್ತವೆ. ಆದರೆ ಇದು ಶೂದ್ರರಾದ ಉಪ್ಪಾರರ ಆಶ್ರಮ. ಅವರಿಗೆ ರಾಜಕೀಯ ಬಲ ಇಲ್ಲ, ಬಲಿಷ್ಠ ಸಂಘಟನೆಯೂ ಇಲ್ಲ... ಹಾಗಾಗಿ ಇದೀ ಆಶ್ರಮ ಮತ್ತದರ 100 ಕೋಟಿ ಆಸ್ತಿ ಸೇರಿಸಿಕೊಂಡು ಗುಳುಂ ಮಾಡಲು ಮಧುಸೂದನ ಎಂಬಾತನನ್ನು ತಂದು ಕೂರಿಸಲಾಗಿದೆ.

ಲೇಟೆಸ್ಟ್ ರೂಮರ್ ಏನೆಂದರೆ ಬಾಲಗಂಗಾಧರ ಸ್ವಾಮಿಯ ಶಿಷ್ಯ ಶೇಖರ್ ಸ್ವಾಮಿ ಹಾಗೂ ತಿರುಚ್ಚಿ ಕೈಲಾಸಾಶ್ರಮದ ಜಯೇಂದ್ರ ಪುರಿ ಈ ಮಧುಸೂದನನ ಹಿಂದಿರುವ ಜನ ಎಂಬುದು. ಇವರ ಹಿಂದೆ ಕೆಲ ಜೆಡಿಎಸ್ ಪುಢಾರಿಗಳು, ರಿಯಲ್ ಎಸ್ಟೇಟ್ ಖದೀಮರು, ಆಂಧ್ರದ ಭೂಗಳ್ಳ ರೆಡ್ಡಿಗಳ ನೆರಳೂ ಇದೆ.

ಕೆಲವರಿಗಷ್ಟೇ ಗೊತ್ತಿದ್ದ ಸಂಗತಿ ಏನೆಂದರೆ, ಶಿವಪುರಿ ಆಧ್ಯಾತ್ಮಕ್ಕಿಂತಾ ಲ್ಯಾಂಡ್ ಡೀಲ್, ಲೇವಾದೇವಿಗಳಲ್ಲೇ ಜಾಸ್ತಿ ಮುಳುಗಿದ್ದವರು. ಅವರ ಮಧ್ಯಸ್ಥಿಕೆಯಲ್ಲಿ ಕೋಟ್ಯಂತರ ರೂಪಾಯಿ ಕಪ್ಪು ಹಣ ಕೈ ಬದಲಾಗುತ್ತಿತ್ತು, ಹಾಗೇನೇ ಆಶ್ರಮದಲ್ಲೂ ಯಾರ್‍ಯಾರದೋ ಹಣ ಎಲ್ಲಿಂದಲೋ ಬಂದು ಇನ್ನೆಲ್ಲಿಗೋ ತಲುಪಿಸುವ ಕೆಲಸವೂ ನಡೆಯುತ್ತಿತ್ತು. ಒಟ್ಟಾರೆ ದೋ ನಂಬರ್ ಜನರೇ ಇಲ್ಲಿ ಒಡನಾಟ ಇಟ್ಟುಕೊಂಡಿದ್ದವರು. ನೈಸ್ ಕಂಪನಿಯ ಖೇಣಿಯಿಂದ ಹಿಡಿದು ಆಂಧ್ರ ರೆಡ್ಡಿಗಳ ತನಕ ಶಿವಪುರಿಗೆ ಲಿಂಕುಗಳಿದ್ದವು. ಈ ಎಲ್ಲಾ ಹಿನ್ನೆಲೆಯಲ್ಲಿ ಆರೋಗ್ಯವಾಗೇ ಇದ್ದ ಶಿವಪುರಿ ಏಕಾಏಕಿ ಸತ್ತದ್ದನ್ನು ಅನುಮಾನಿಸಬೇಕಿದೆ. ಜುಲೈ 15ರ ಬೆಳಗಿನ ಜಾವ ಶಿವಪುರಿಗೆ ಉಸಿರಾಟದ ತೊಂದರೆ ಬಂದರೂ ಸಕಾಲದಲ್ಲಿ ಚಿಕಿತ್ಸೆ ಕೊಡಿಸಲಿಲ್ಲ ಯಾಕೆ? ಶಿವಪುರಿ ಸತ್ತುಹೋಗಲೆಂದು ಕಾದಿದ್ದವರು ಯಾರು?

ಸಿಸಿಬಿಯ ಇನ್ಸ್‌ಪೆಕ್ಟರ್ ಗಚ್ಚಿನಕಟ್ಟಿ ಹಾಗೂ ಸಿದ್ಧರಾಮಯ್ಯ ಈ ಪ್ರಕರಣದ ತನಿಖೆ ನಡೆಸುತ್ತಿದ್ದಾರೆ. ಪೊಲೀಸರಿಗೆ ಪೂರ್ತಿ ಸ್ವಾತಂತ್ರ ಸಿಕ್ಕರೆ ಮಧುಸೂದನ ಸ್ವಾಮಿ ಆಶ್ರಮ ಬಿಟ್ಟು ಓಡಬೇಕಾಗುತ್ತದೆ.

ಉಪ್ಪಾರ ಸಮುದಾಯ ಈಗ ಮೈಮರೆತರೆ ಶಿವಪುರಿ ಸ್ವಾಮಿ ಬಾಯಿಗೆ ವಿಷ ಬಿದ್ದಷ್ಟೇ ಸಲೀಸಾಗಿ ಅವರ ಬಾಯಿಗೂ ಮಣ್ಣು ಬೀಳುವುದು ಗ್ಯಾರಂಟಿ. ■

# ದೇಹ ಇಲ್ಲಿ-ಆತ್ಮ ಫ್ರಿಜ್‌ನಲ್ಲಂತೆ!

ಈ ಬ್ರಾಹ್ಮಣ ಮಠಾಧೀಶರು-ಗುರುಗಳ ಲಾಬಿ ಹೇಗಿದೆ ಎಂದರೆ ಕೆಲಸಕ್ಕೆ ಬಾರದವನೂ ಇಲ್ಲಿ ಮಹಾನ್ ಸಾಧಕ ಎನಿಸಿಕೊಂಡುಬಿಡುತ್ತಾನೆ.

ಮಧುಸೂದನ ಸ್ವಾಮಿಯೂ ಇದಕ್ಕೆ ಹೊರತಲ್ಲ. ಅಡ್ರೆಸ್ಸೇ ಇರದ ಇವನನ್ನು ಓಂಕಾರಾಶ್ರಮದಲ್ಲೇ ಬಿಗಿಯಾಗಿ ಕೂರಿಸುವ ಪ್ರಯತ್ನವನ್ನು ಎಲ್ಲಾ ಜನಿವಾರಿಗಳು ಸೇರಿಕೊಂಡು ಮಾಡುತ್ತಿದ್ದಾರೆ.

ಅದರಲ್ಲೂ ಆರ್‌ಎಸ್‌ಎಸ್‌ನ ಕೇಂದ್ರದಂತಿರುವ, ವಿಪ್ರೋತ್ತಮರೇ ನಡೆಸುತ್ತಿರುವ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಬಂದ ಅಂತಹ ಒಂದು ಹಾಸ್ಯಾಸ್ಪದ ಪ್ರಯತ್ನದ ವಿವರ ಇದು.

ಈ ಮಧುಸೂದನ ಒಬ್ಬ ಮಹಾನ್ ಸಾಧಕನು, ಅಸೇತು ಹಿಮಾಲಯವನ್ನೆಲ್ಲಾ ಓಡಾಡಿ ಬಂದಿದ್ದಾನೆಂದು ಬಣ್ಣಿಸಿ ವಿ.ಕ.ದಲ್ಲಿ ಮೊನ್ನೆ ಒಂದು ಲೇಖನ ಪ್ರಕಟವಾಗಿದೆ.


ಈ ಮಧು ಒಂದು ದಿನ ಯಾತಕ್ಕೋ ಏನೋ ರೆಫ್ರಿಜರೇಟರ್ ಬಾಗಿಲು ತೆಗೆದಾಗ ಅವನ ಆತ್ಮ ಫ್ರಿಜ್‌ನೊಳಗಿತ್ತಂತೆ. 'ನನ್ನ ದೇಹ ಹೊರಗಿದೆ. ಆತ್ಮ ಫ್ರಿಜ್‌ನಲ್ಲಿದೆಯಲ್ಲ, ಅಂದರೆ ಈ ಶರೀರ ನನ್ನದಲ್ಲ ಅಂತ ಅವನಿಗೆ ಅವತ್ತೇ ಜ್ಞಾನೋದಯ ಆಯಿತಂತೆ'..... ಇದನ್ನು ನಾವೆಲ್ಲಾ ನಂಬಬೇಕಂತೆ!

# ಉಪ್ಪಾರರ ರ್‍ಯಾಲಿ



ಓಂಕಾರಾಶ್ರಮದಿಂದ ನಕಲಿ ಸ್ವಾಮಿ ಮಧುಸೂದನನನ್ನು ಓಡಿಸಿ ಆಶ್ರಮವನ್ನು ಜನಾಂಗದ ವಶಕ್ಕೆ ಮರಳಿ ಪಡೆಯಲು ನವೆಂಬರ್ ತಿಂಗಳಿನಲ್ಲಿ ಉಪ್ಪಾರ ಸಮುದಾಯ ಒಂದು ಬೃಹತ್ ರ್‍ಯಾಲಿ ನಡೆಸಲು ನಿರ್ಧರಿಸಿದೆ. ರಾಜ್ಯಾದ್ಯಂತ ಇದಕ್ಕಾಗಿ ತಯಾರಿಗಳೂ ನಡೆಯುತ್ತಿವೆ. ಅಷ್ಟರಲ್ಲಿ ಸಿಸಿಬಿಯ ತನಿಖಾ ವರದಿಯೂ ಬಂದು ಮಧುಸೂದನನ ಜಾತಕ ಏನೆಂದು ಗೊತ್ತಾಗಿರುತ್ತದೆ. ಅಕಸ್ಮಾತ್ ಪೊಲೀಸರೇನಾದರೂ ಮೇಲ್ಜಾತಿ ಲಾಬಿಗೆ, ರಾಜಕಾರಣಿಗಳಿಗೆ, ರಿಯಲ್ ಎಸ್ಟೇಟ್ ಖದೀಮರ ಒತ್ತಡಕ್ಕೆ ಮಣಿದರೆ ಆಶ್ರಮದ ಉತ್ತರಾಧಿಕಾರಿ ವಿವಾದ ಅಧಿಕಾರ ಹಸ್ತಾಂತರ ವಿವಾದದಂತೆಯೇ ಭುಗಿಲೇಳುವುದು ಖಚಿತ.

# ರೆಡ್ಡಿಗಳ ಕೈಗೊಂಬೆ 'ನಾಯಕ' ಶ್ರೀರಾಮುಲು




ಬಳ್ಳಾರಿ ಗಣಿ ರೆಡ್ಡಿಗಳ ಜೊತೆ ರಾಜ್ಯಮಟ್ಟದಲ್ಲಿ ಆಗಾಗ ಸುದ್ದಿಗೆ ಗ್ರಾಸವಾಗುವ ಶ್ರೀರಾಮುಲು ಎಂಬ ರಾಜಕಾರಣಿ ತನ್ನ ಹೇಳಿಕೆಗಳು, ಐಲು-ಪೈಲು ನಡವಳಿಕೆಗಳಿಂದ ರಾಜ್ಯದ ಜನರ ಗಮನ ಸೆಳೆಯುತ್ತಿರುವುದು ಹೊಸದೇನಲ್ಲ.

ಬಳ್ಳಾರಿಯ ಗಣಿ ರೆಡ್ಡಿ ಸಹೋದರರು ಶ್ರೀರಾಮುಲು ಅನ್ನು ನಮ್ಮಲ್ಲೊಬ್ಬ ಅಂತ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಇವತ್ತು ಇಡೀ ರಾಜ್ಯ ರಾಜಕೀಯವನ್ನೇ ತಮ್ಮತ್ತ ತಿರುಗಿಸಿಕೊಳ್ಳುವಷ್ಟು ಧನಿಕರಾಗಿರುವ ಗಣಿ ರೆಡ್ಡಿ ಸಹೋದರರು ಶ್ರೀರಾಮುಲು ಅನ್ನು ರಾಜಕೀಯವಾಗಿ ಬೆಳೆಸಿದ ಗಾಡ್‌ಫಾದರ್‌ಗಳು.

ಹಾಗೆ ನೋಡಿದರೆ ಶ್ರೀರಾಮುಲುಗೆ ರಾಜಕೀಯ ಚಾಣಾಕ್ಷತೆಯಾಗಲೀ, ಪವರ್ ಪಾಲಿಟಿಕ್ಸ್‌ನಲ್ಲಿ ದೊಡ್ಡ ಜವಾಬ್ದಾರಿಗಳನ್ನು ನಿರ್ವಹಿಸಬಲ್ಲ ಬುದ್ಧಿವಂತಿಕೆಯಾಗಲೀ ಇಲ್ಲ. ಆತನಿಗಿರುವುದು ಮುಖ್ಯವಾಗಿ ಜನಾಕರ್ಷಣೆ. ಬಳ್ಳಾರಿ ರಾಜಕೀಯದಲ್ಲಿ ನಿರ್ಣಾಯಕ ಪಾತ್ರ ವಹಿಸುವ ದೊಡ್ಡ ಸಮುದಾಯವೆಂದರೆ ಅದು 'ನಾಯಕ' ಸಮುದಾಯ. ಬಳ್ಳಾರಿಯ ಯಾವುದೇ ರಾಜಕೀಯ ನಾಯಕ ತಮ್ಮ ಮಿಲಿಟೆಂಟ್ ಕಾರ್ಯಾಚರಣೆಗಳಿಗೆ ದಾಳವಾಗಿ ಬಳಸಿಕೊಳ್ಳುವುದು ನಾಯಕ ಸಮುದಾಯದ ಯುವಕರನ್ನೇ.

ತಮ್ಮ ಚಾಣಾಕ್ಷ ನಡೆಗಳು, ತಂತ್ರಗಾರಿಕೆಗಳಿಂದಲೇ ಇವೊತ್ತು ಅಗಾಧವಾಗಿ ಬೆಳೆದಿರುವ ಗಣಿ ರೆಡ್ಡಿಗಳು ಬಳ್ಳಾರಿ ರಾಜಕೀಯದ ಆಗು-ಹೋಗುಗಳನ್ನು ಎಲ್ಲಾ ಆಯಾಮಗಳಿಂದ ವಿಶ್ಲೇಷಿಸಿಯೇ 'ನಾಯಕ' ಜನಾಂಗದ ಶ್ರೀರಾಮುಲು ಅನ್ನು ತಮ್ಮ ರಾಜಕೀಯದ ಬ್ರಾಂಡ್ ಅಂಬಾಸಿಡರ್ ಆಗಿ ಚಲಾವಣೆ ಮಾಡುತ್ತಿದ್ದಾರೆ.

ಗಣಿ ರೆಡ್ಡಿಗಳು ಹಾಗೂ ಶ್ರೀರಾಮುಲು ನಡುವಿನ ನಂಟು ಇಂದು ನಿನ್ನೆಯದಲ್ಲ, ಗಣಿ ರೆಡ್ಡಿಗಳು ತಮ್ಮ ಬೆಳವಣಿಗೆಯ ಜೊತೆಜೊತೆಗೆ ಶ್ರೀರಾಮುಲುವನ್ನೂ ಪೋಷಿಸಿಕೊಂಡು ಬರುತ್ತಿದ್ದಾರೆ. ಶ್ರೀರಾಮುಲುವಿನ ರಾಜಕೀಯ ಬೆಳವಣಿಗೆಯೆಂಬುದು ಪಕ್ಕಾ ತೆಲುಗು ಕಮರ್ಷಿಯಲ್ ಸಿನಿಮಾ ಶೈಲಿಯದು. ಅಲ್ಲಿನ ಸಿನಿಮಾಗಳಲ್ಲಿ ಫ್ಯೂಡಲ್ ದೊರೆಗಳ ಪರವಾಗಿ ಎಂಥಾ ತ್ಯಾಗಕ್ಕೂ ಸಿದ್ಧರಿರುವ ಯುವಕರನ್ನು ಬಿಂಬಿಸುವಂತೆಯೇ ಇಲ್ಲಿ ಗಣಿ ರೆಡ್ಡಿಗಳ ಹಿತಾಸಕ್ತಿಗಳಾಗಿ ಯಾವುದೇ ತ್ಯಾಗಕ್ಕೆ ಸಿದ್ಧವಿರುವ ಯೋಧನಂತೆ, ನಿಷ್ಠನಂತೆ ಶ್ರೀರಾಮುಲು ಅವರನ್ನು ಬಿಂಬಿಸಲಾಗುತ್ತಿದೆ.



ಬಳ್ಳಾರಿಯ ರಾಜಕೀಯದಲ್ಲಿ ಲಾಗಾಯ್ತಿನಿಂದಲೂ ಅಜಾತಶತ್ರುಗಳಂತೆ ಮೆರೆಯುತ್ತಿದ್ದ ಮುಂಡ್ಲೂರು ಫ್ಯಾಮಿಲಿಗೆ ಸೆಡ್ಡು ಹೊಡೆದಂತೆ, ಪವಾಡಸದೃಶ ರೀತಿಯಲ್ಲಿ ಬೆಳೆದ ಗಣಿ ರೆಡ್ಡಿ ಸಹೋದರರು ಇವೊತ್ತಿನ ಅಜಾತಶತ್ರುಗಳು. ಬರೀ ಹಣಬಲವೇ ಪ್ರಧಾನವಾಗಿದ್ದ ಈ ರೆಡ್ಡಿ ಸಹೋದರರಿಗೆ ಜನಬಲದ ಶಕ್ತಿಯನ್ನು ಸಂಚಯಿಸುತ್ತಿರುವುದು ಇದೇ ಶ್ರೀರಾಮುಲು.

ಶ್ರೀರಾಮುಲುವಿನದು ಹೇಳಿಕೊಳ್ಳುವಂತ ಯಾವ ವಿಶೇಷತೆಯೂ ಇಲ್ಲದ ತೀರಾ ಸಾಧಾರಣ ಕೌಟುಂಬಿಕ ಹಿನ್ನೆಲೆ. ಒಟ್ಟು ನಾಲ್ಕು ಜನ ಸಹೋದರರಲ್ಲಿ ಗೋವಿಂದು ಎಂಬಾತ ರೈಲ್ವೇ ಇಲಾಖೆಯಲ್ಲಿ ಗ್ಯಾಂಗ್‌ಮನ್ ಕೆಲಸ ಮಾಡುತ್ತಿದ್ದರೆ, ಶೀನು ಎಂಬಾತನದು ಈಗಲೂ ಮೀಟರ್ ಬಡ್ಡಿ ದಂಧೆ. ಮಲ್ಲಿಕಾರ್ಜುನ ಎಂಬಾತನದು ಅಟಕ್ಕುಂಟು ಲೆಕ್ಕಕ್ಕೆ ಇಲ್ಲ ಎಂಬ ಪರಿಸ್ಥಿತಿ.

ಆರಂಭದಿಂದಲೇ ಕಾಂಗ್ರೆಸ್ ಜೊತೆ ಬೆಳೆದ ಶ್ರೀರಾಮುಲು, ವಿಧಾನಸಭಾ ಚುನಾವಣೆಯೊಂದರಲ್ಲಿ ಅಧಿಕೃತ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಡಾ. ವೆಂಕಟ್‌ಮಹಿಪಾಲ ಪರವಾಗಿ ಪ್ರಚಾರ ಮಾಡುತ್ತಲೇ ಕೊನೆಗಳಿಗೆಯಲ್ಲಿ ಪ್ರತಿಸ್ಪರ್ಧಿಯಾಗಿದ್ದ ದಿವಾಕರ ಬಾಬು ಪರವಾಗಿ ಕೆಲಸ ಮಾಡಿ ಮುಂಡ್ಲೂರು ಫ್ಯಾಮಿಲಿಗೆ ಹತ್ತಿರವಾದ. ನಂತರ ಕಾಂಗ್ರೆಸ್ಸಿನಿಂದ ಸ್ಪರ್ಧಿಸಿ ಬಳ್ಳಾರಿ ನಗರಸಭೆಯ ಕೌನ್ಸಿಲರ್ ಆದ.

ರೆಡ್ಡಿ ಸಹೋದರರ ಕುಟುಂಬದೊಂದಿಗೆ ಶ್ರೀರಾಮುಲು ನಂಟು ಪ್ರಾರಂಭವಾದದ್ದೇ ಹುಡುಗಿಯೊಬ್ಬಳ ಪಂಚಾಯ್ತಿ ಪ್ರಕರಣದಲ್ಲಿ ಎಂಬುದು ಹತ್ತಿರದಿಂದ ಬಲ್ಲವರ ಅಭಿಪ್ರಾಯ. ಇದರ ಸತ್ಯಾಸತ್ಯತೆ ಏನೇ ಇರಲಿ. ನಂತರ ಎನ್ನೋಬಲ್ಸ್ ಫೈನಾನ್ಸ್ ವ್ಯವಹಾರದೊಂದಿಗೆ ಗಣಿ ರೆಡ್ಡಿಗಳು ಶ್ರೀರಾಮುಲುವಿನ ಸಂಬಂಧ ಮತ್ತಷ್ಟು ಗಟ್ಟಿಯಾಗಿ 1999 ರ ಸಾರ್ವತ್ರಿಕ ಚುನಾವಣೆಯ ಹೊತ್ತಿಗೆ ಬೇರ್ಪಡಿಸಲಾಗದ ಮೈತ್ರಿಯಾಯಿತು.

ಆ ಚುನಾವಣೆಯಲ್ಲಿ ಸುಷ್ಮಾ ಸ್ವರಾಜ್ ಹಾಗೂ ಸೋನಿಯಾ ಸ್ಪರ್ಧೆಯಿಂದ ಚುನಾವಣಾ ರಾಜಕೀಯದ ಜ್ವರ ತಾರಕಕ್ಕೇರಿತ್ತು. ಆಗಲೇ ದಾಖಲೆ ಮೊತ್ತದ ಚುನಾವಣಾ ನಿಧಿ ಕೊಟ್ಟು ಬಿಜೆಪಿಯಿಂದ ಟಿಕೆಟ್ ತಂದು ಶ್ರೀರಾಮುಲು ಅನ್ನು ಕಣಕ್ಕಿಳಿಸಿದರು. ಏಳೆಂಟು ಸಾವಿರ ಮತಗಳ ಅಂತರದಲ್ಲಿ ಶ್ರೀರಾಮುಲು ಸೋತರೂ ಪೊಲಿಟಿಕಲ್ ಐಡೆಂಟಿಯ ದೃಷ್ಟಿಯಿಂದ ಒಳ್ಳೆಯ ಲಾಭವನ್ನೇ ತಂದುಕೊಟ್ಟಿತು. ಅದು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಶ್ರೀರಾಮುಲು ಗೆಲುವಿಗೂ ಸಹಕಾರಿಯಾಯಿತು.


ಆನಂತರ ಪ್ರತಿ ಹಂತದಲ್ಲೂ ಶ್ರೀರಾಮುಲು ಅನ್ನು ಎಸ್ಟಾಬ್ಲಿಷ್ ಮಾಡಲು ಅಗತ್ಯವಿರುವ ತಂತ್ರಗಾರಿಕೆ-ಸ್ಟಂಟ್‌ಗಳನ್ನು ಗಣಿ ರೆಡ್ಡಿ ಸಹೋದರರ ಥಿಂಕ್‌ಟ್ಯಾಂಕ್ ಜನಾರ್ದನ್ ರೆಡ್ಡಿಯೇ ರೂಪಿಸುತ್ತಾ ಬಂದರು. ಶ್ರೀರಾಮುಲು ಏನೇ ಮಾಡಿದರೂ ಸುದ್ದಿಯಾಗುವಂತೆ ನೋಡಿಕೊಳ್ಳುತ್ತಾ ಬಂದಿದ್ದಾರೆ. ಪರಿಣಾಮವಾಗಿ ಶ್ರೀರಾಮುಲುಗೆ ಹೈದರಾಬಾದ್ ಕರ್ನಾಟಕದ ಕೊಪ್ಪಳ, ರಾಯಚೂರು, ಉತ್ತರ ಕರ್ನಾಟಕದ ಗದಗ, ಧಾರವಾಡ ಜಿಲ್ಲೆಗಳಲ್ಲಿ ಹೆಚ್ಚಾಗಿರುವ 'ನಾಯಕ' ಸಮುದಾಯದ ಮಾಸ್ ಲೀಡರ್ ಎಂಬ ಇಮೇಜು ಪ್ರಾಪ್ತವಾಗಿಬಿಟ್ಟಿದೆ.

ಏನೆಲ್ಲಾ ಪ್ರಭಾವ ಇದ್ದರೂ ಶ್ರೀರಾಮುಲು ರಾಜಕೀಯವೆಂಬುದು ಸ್ವಂತಿಕೆಯ ಆಲೋಚನೆಯಿಲ್ಲದ, ಗಣಿ ರೆಡ್ಡಿಗಳ ಕೃಪಾಪೋಷಿತ ಕೈಗೊಂಬೆ ರಾಜಕಾರಣವಾಗಿಬಿಟ್ಟಿದೆ. ಕೈಗೊಂಬೆ ರಾಜಕಾರಣಕ್ಕೆ ಶ್ರೀರಾಮುಲುಗಿಂತ ಬೇರೆ ಸಮರ್ಥ ಉದಾಹರಣೆ ಸಿಗಲಾರದು.

■ ವರದಿಗಾರ

ಕನ್ನಡ ಕಾವ್ಯ ವಲಯದಲ್ಲಿ 'ವೀಚಿ' ಎಂದೇ ಖ್ಯಾತರಾಗಿದ್ದ ವಿ. ಚಿಕ್ಕವೀರಯ್ಯನವರ ನಿಧನದೊಂದಿಗೆ ಕನ್ನಡನಾಡು ಒಬ್ಬ ಸಜ್ಜನ, ಸರಳ, ವಿನಯವಂತ ಮತ್ತು ಹೃದಯವಂತ ಕವಿಯನ್ನು ಕಳೆದುಕೊಂಡಂತಾಗಿದೆ. ಮಾರ್ಕ್ಸ್‌ವಾದಿ, ಸಮಾಜವಾದಿ ಚಿಂತನೆಯ ಈ ನೆಲದ ಮಗನಂತಿದ್ದ ಕವಿ ಬಹುದೂರ ನಡೆದುಹೋಗಿದ್ದಾರೆ ಎನಿಸಿದರೂ ಅವರ ವಿಶಿಷ್ಟ ಮತ್ತು ಅಪರೂಪದ ಕೃತಿಗಳ ಮೂಲಕ ಪದೇಪದೇ ನೆನಪಾಗುತ್ತಾರೆ.

# ತುಮಕೂರಿನ ಕವಿ ವಿ. ಚಿಕ್ಕವೀರಯ್ಯ



ಕನ್ನಡ ಕಾವ್ಯ ವಲಯದಲ್ಲಿ 'ವೀಚಿ' ಎಂದೇ ಖ್ಯಾತರಾಗಿದ್ದ ವಿ. ಚಿಕ್ಕವೀರಯ್ಯನವರು ತುಮಕೂರಿನ ತಮ್ಮ ಸ್ವಗೃಹದಲ್ಲಿ ದಿನಾಂಕ 28.9.07 ರಂದು ಬೆಳಿಗ್ಗೆ ನಿಧನ ಹೊಂದಿದ್ದಾರೆ. ಅವರ ನಿಧನದೊಂದಿಗೆ ಕನ್ನಡ ಪ್ರಜ್ಞೆಯ ಮನಸ್ಸು-ಹೃದಯವೊಂದು ಇಲ್ಲದಂತಾಗಿದೆ. ಆಧುನಿಕ ಕನ್ನಡ ಕಾವ್ಯಕ್ಕೆ ದೇಶೀಯ ಸೊಗಡು ನೀಡಿ ಸತ್ವ ತುಂಬಿದ ಮಹತ್ವದ ಕವಿಗಳಲ್ಲಿ ವೀಚಿಯವರದು ಪ್ರಮುಖ ಹೆಸರು. ಗ್ರಾಮೀಣ ಪರಿಸರದಲ್ಲಿ ನೆಲೆ ನಿಂತು ಬೆಂಗಳೂರಿನ ಸಮೀಪದಲ್ಲಿ ಇದ್ದರೂ ನಗರದ ಯಾವುದೇ ನಯನಾಜೂಕು, ಬೂಟಾಟಿಕೆಗೆ ಸೋಲದೆ ತಮ್ಮದೇ ಆದ ಮಾರ್ಗವೊಂದನ್ನು ನಿರ್ಮಾಣ ಮಾಡಿಕೊಂಡಿದ್ದು, ಕೊನೆಯವರೆವಿಗೂ ತುಮಕೂರಿನ ಚಿಕ್ಕವೀರಯ್ಯನ ಪಾಳ್ಯದ ತಮ್ಮ ಸ್ವಂತ ತೋಟದಲ್ಲಿ ಕೃಷಿಯೊಂದಿಗೆ ಕಾವ್ಯದೊಂದಿಗೆ ಬದುಕಿದವರು.

1930 ರಲ್ಲಿ ಜನಿಸಿದ ವೀಚಿಯವರು ಬಡತನ, ಹಸಿವು ಜೊತೆಗೆ ಕಟ್ಟಿಕೊಂಡವರು. ಇದ್ದ ಜಮೀನಿನಲ್ಲಿ ತಾವೇ ಉಳುಮೆ ಮಾಡಿ ತೋಟ್ ಕಟ್ಟಿಕೊಂಡರು, ಜೊತೆಜೊತೆಗೆ ಕಾವ್ಯವನ್ನು ಸಮರ್ಥವಾಗಿ ಕಟ್ಟಿಕೊಟ್ಟರು. ಅಂತಹ ಕೃಷಿಚೇತನ ಕವಿಯ ಬಗೆಗೆ ಒಂದೆರಡು ಕಕ್ಕುಲತೆಯ ಮಾತನಾಡಬೇಕೆನಿಸುತ್ತಿದೆ. ಯಾಕೆಂದರೆ 90 ರ ದಶಕದಿಂದ ಕವಿ ವೀಚಿಯವರನ್ನು ಹತ್ತಿರದಿಂದ ಬಲ್ಲವನಾಗಿದ್ದೆ. ಅವರ ಸ್ನೇಹದ, ಮಮತೆಯ ಸವಿ ಉಂಡವನಾಗಿದ್ದು ಅವರ ಕಾವ್ಯ ಓದಿರುವುದರಿಂದಲೂ ಅವರಂತಹವರ ಬದುಕು ಅನುಕರಣೀಯವಾದುದೆನಿಸಿದೆ.

1960 ಮತ್ತು 70 ರ ದಶಕ ಕರ್ನಾಟಕದಲ್ಲಿ ಚಳವಳಿಗಳು ಚಿಗುರೊಡೆಯುತ್ತಿದ್ದ ಕಾಲ. ಮಾರ್ಕ್ಸ್‌ವಾದ, ಸಮಾಜವಾದ, ಎಡಪಂಥಿ ಸಿದ್ಧಾಂತಗಳ ಚರ್ಚೆಯ ಕಾಲ ಅದಾಗಿತ್ತು. ಯುವಕರಾಗಿದ್ದ ವೀಚಿಯವರು ಅದರಿಂದ ಬಿಡಿಸಿಕೊಳ್ಳಲಾಗಲಿಲ್ಲ.

ಮನೆಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮಾಡಲಾಗಲಿಲ್ಲ. ಪಿಯುಸಿ ಹಂತದವರೆಗೆ ಮಾತ್ರ ಶಿಕ್ಷಣ ಪಡೆದರು ಮತ್ತು ನೇಗಿಲಯೋಗಿಯಂತೆ ಮೇಣಿ ಹಿಡಿದು ಜಮೀನು ಹಸನು ಮಾಡಿ-ತೋಟ ಮಾಡಿದರು. ಕಾವ್ಯದಲ್ಲೂ ಅದೇ ರೀತಿ ಕೃಷಿ ಮಾಡಿದರು. ಅದರ ಫಲವಾಗಿ ಪ್ರಥಮ ಕವನ ಸಂಕಲನ 'ಪ್ರಣಯ ಚೈತ್ರ' ನಂತರ 'ವಿಷಾದ ನಕ್ಷೆ' ಹೊರಬಂದವು. ಯುವ ಕವಿಯ ಕವನಗಳು ಅಂದು ಜನಪ್ರಿಯವಾಗಿದ್ದವು. ಕುವೆಂಪು, ಬೇಂದ್ರೆ, ಅಡಿಗರ ಪ್ರಭಾವದಿಂದಾಗಿ ಮತ್ತಷ್ಟು ಅಧ್ಯಯನ, ಕವಿತೆಗಳ ರಚನೆ ಮುಂದುವರೆಯಿತು. ಎಂಭತ್ತರ ದಶಕದ ಹೊತ್ತಿಗೆ ಕವಿ ವೀಚಿ ಸಾಮಾಜಿಕ ಸ್ತರದ ನಾನಾ ಕ್ಷೇತ್ರಗಳಲ್ಲಿ ದುಡಿದಿದ್ದರು. ಸಾಮಾಜಿಕ ಚಿಂತನೆಗಳ ಜೊತೆಗೆ ರಾಜಕೀಯ ಪ್ರವೇಶ ಮತ್ತು ವಿವಿಧ ಸಂಘ, ಸಂಸ್ಥೆಗಳಲ್ಲಿ ಸಂಘಟನಾತ್ಮಕ ದುಡಿಮೆ ಇದೆಲ್ಲವು ವೀಚಿಯವರನ್ನು ಬರೀ ಕವಿಯಾಗಿ ಪರಿಗಣಿಸುವಂತಿರಲಿಲ್ಲ.

ಮಾರ್ಕ್ಸ್‌ವಾದ, ಸಮಾಜವಾದ ಚಿಂತನೆಗಳನ್ನು ರೂಢಿಸಿಕೊಂಡು ಅದರಂತೆಯೇ ಜೀವನ ಸಾಗಿಸುತ್ತಿದ್ದ ವೀಚಿಯವರು ತುಮಕೂರು ನಗರಸಭೆಗೆ ಆಯ್ಕೆಯಾಗಿ ಅಧ್ಯಕ್ಷರಾಗಿದ್ದರು. ಕೈ, ಮನಸ್ಸುಗಳನ್ನು ಹೊಲಸು ಮಾಡಿಕೊಂಡಿದಿಲ್ಲ. ಹೆಚ್ಚಿಗೆ ಓದದಿದ್ದರೂ, ಅಧ್ಯಯನ ನಿರಂತರವಾಗಿತ್ತು. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಗಂಭೀರವಾಗಿ ಓದಿದ್ದರು. ಅಂತೆಯೇ ಎಂಭತ್ತರ ದಶಕದ ನಂತರ ಕವಿಯಾಗಿ ಮಹತ್ವದ ಕವನ ಸಂಕಲನ ಹೊರತಂದರು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ 'ಸಂಕರ ತಳಿ', 'ನವಿಲುಮನೆ' ಮತ್ತು 'ಅಭಿನಯದ ಬಯಲು', 'ನಿತ್ಯಮದುವಣಗಿತ್ತಿ' ಇತ್ಯಾದಿ ಕವನ ಸಂಕಲನಗಳು ಕವಿ ವೀಚಿಯವರನ್ನಾಗಿ ರೂಪಿಸಿದವು. 'ಅಭಿನಯದ ಬಯಲು' ನನ್ನ ದೃಷ್ಟಿಯಲ್ಲಿ ಮಹತ್ವದ ಕವನ ಸಂಕಲನ. ಆ ಸಂಕಲನದಲ್ಲಿ ಬರುವ ಒಂದೆರಡು ಸಾಲುಗಳು ನೆನಪಾಗುತ್ತಿವೆ.

ನಡೆದದ್ದು ಇತಿಹಾಸ ಬರಿಯ ವರದಿ
ನಡೆಯಬೇಕಾದುದ್ದನ್ನು ಒಳಕೊಳ್ಳುವುದು ಕಾವ್ಯ'

ಹೀಗೆ ಕಾವ್ಯ ಕುರಿತು 'ತಮ್ಮ ಧಾಟಿಯಲ್ಲಿ ವೀಚಿ ನಿರೂಪಿಸಬಲ್ಲರು. 'ಬುದ್ಧ ಹೇಳಿದ್ದು' ಎನ್ನುವ ಕವನವೂ ಕೂಡ ಹಾಗೆಯೇ.

*ಇಲ್ಲದಿದ್ದರೆ ನೆಲದ ಧೂಳು*
*ನೆತ್ತಿಯಡರಿದಂತಾಗುವುದು*
*ಅದಕ್ಕೆ ಬುದ್ಧ ಹೇಳಿದ*
*ಅದು ಇದೆ ಎಂದರೆ ಇರುವಲ್ಲಿ ಇದೆ*
*ಇಲ್ಲ ಎಂದರೆ ಇಲ್ಲದಲ್ಲಿ ಇಲ್ಲ ಎಂದು*

'ನಿತ್ಯ ಮದುವಣಗಿತ್ತಿ'ಯಲ್ಲಿ ಬರುವ ಒಂದೆರಡು ಸಾಲುಗಳಿವು

*ಒಳಗೆ ಹಸಿವು ಹೊರಗೆ ತಣ್ಣೆರಲು*
*ಮಾತೃ ವಾತ್ಸಲ್ಯ ಮಡಿಲು*

ಇವು ವೀಚಿಯವರ ಕವನದ ಸಾಲುಗಳ ಒಂದು ಮಾದರಿ. ವೀಚಿ ಕವಿಯಾಗಿ, ವ್ಯಕ್ತಿಚಿತ್ರ ಬರೆಯುವವರಾಗಿ ಪದೇಪದೇ ನೆನಪಾಗುತ್ತಾರೆ. ಅವರ ಗದ್ಯ ಕೃತಿ 'ಸಿದ್ಧರಬೆಟ್ಟ ಒಂದು ದರ್ಶನ' ಎನ್ನುವುದು ಒಂದು ಆಕರ ಗ್ರಂಥ. ತುಮಕೂರಿನ ಪ್ರಸಿದ್ಧ ದೇಶೀಯ ಯಾತ್ರಾ ಸ್ಥಳವಾಗಿರುವ ಸಿದ್ಧರ ಬೆಟ್ಟವನ್ನು ಕುರಿತ ಮಹತ್ವದ ಮಾಹಿತಿ ಕೃತಿ. ಅವರ ಮತ್ತೊಂದು ವ್ಯಕ್ತಿ ಚಿತ್ರ ಒಳಗೊಂಡ ಕೃತಿ 'ಇವರು ನನ್ನವರು'. ತುಮಕೂರು ನೆಲದ ಸ್ನೇಹವಲಯವನ್ನು ನೆನಪಿಸುವಂತೆ ವ್ಯಕ್ತಿ ಚಿತ್ರಣಗಳನ್ನು ಸೊಗಸಾಗಿ ನಿರೂಪಿಸುವ ಕೃತಿ ಇದು. ಇಲ್ಲಿ ಯಾರು ಮಹಾ ಪುರುಷರು, ಅವತಾರ ಪುರುಷರಲ್ಲ, ಸಾಮಾನ್ಯರಾಗಿದ್ದು ತಮ್ಮತಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿದವರು ಮತ್ತು ಮರೆಯಲಾಗದವರು. ಹಾಗಾಗಿ 'ಇವರು ನನ್ನವರು' ಕೃತಿಯಲ್ಲಿ ಗಡಿಯಾರದಂಗಡಿಯ ಸ್ನೇಹಿತರಾದ ನೂರುಲ್ಲಾಖಾನ್, ಶಿಕ್ಷಣ ಪ್ರೇಮಿ ಎನ್. ಮಲ್ಲಪ್ಪ, ವೈದ್ಯರಾದ ಡಾ. ಎಸ್.ಎಚ್. ಕೇಶವಮೂರ್ತಿ, ಡಾ. ಕೆ.ವಿ. ಸುಬ್ಬರಾವ್ ಮುಂತಾದವರ ಬಗೆಗೆ ಮನದುಂಬಿ ಬರೆಯುತ್ತಾರೆ. ವೀಚಿಯವರ ಸ್ನೇಹ ವಲಯವೆಂದರೆ ಅಲ್ಲಿ ಜಾತಿ, ಧರ್ಮ, ಭಾಷೆ ಹಂಗುಗಳಿಲ್ಲದ್ದು ಮತ್ತು ಸ್ನೇಹಕ್ಕೆ ಮಾತ್ರವೇ ಬದ್ಧವಾದದ್ದು.

ಕವಿ ವೀಚಿಯವರ ಗೆಳೆಯರ ಬಳಗ ತುಮಕೂರಿನಲ್ಲಿ ಅಪರಿಮಿತವಾದುದು. ಚಿಕ್ಕಂದಿನಿಂದಲೂ ಅವರ ಒಡನಾಡಿಗಳಾಗಿದ್ದು, ಕೊನೆಯವರೆವಿಗೂ ಸ್ನೇಹಿತರಾಗಿ-ಬಂಧುಗಳಾಗಿ ತಮ್ಮ ಬದುಕು-ಬರಹದ ಎಲ್ಲಾ ಹಂತದಲ್ಲಿ ಕೈ ಜೋಡಿಸಿದವರೆಂದರೆ ಕಾರ್ಮಿಕ ನಾಯಕರಾಗಿದ್ದ ಕೆ.ಆರ್. ನಾಯಕ್, ಕವಿ ಪ್ರಾಧ್ಯಾಪಕರಾಗಿದ್ದ ಎಚ್.ಜಿ. ಸಣ್ಣಗುಡ್ಡಯ್ಯ- ಈ ಇಬ್ಬರು ಗೆಳೆಯರು ಇತ್ತೀಚೆಗೆ ನಿಧನರಾದದ್ದು ಕಾಕತಾಳೀಯವಿರಬಹುದು. ಇವರೆಲ್ಲರೂ 'ಆಪ್ತಮಿತ್ರರಾಗಿದ್ದರು'. 'ಪ್ರಗತಿಪರ' ಚಿಂತನೆಯ ಗೆಳೆಯರಾಗಿದ್ದರು.

ವೀಚಿಯವರಿಗೆ ಓದು, ಬರಹದ ಜೊತೆಗೆ ರಾಜಕೀಯ ಮತ್ತೊಂದು ಕ್ಷೇತ್ರವಾಗಿತ್ತು. ಉತ್ತರದಲ್ಲಿ ಕಾನ್ಶಿರಾಂ ಅವರ ಬಿಎಸ್‌ಪಿ ಪಕ್ಷ ಕರ್ನಾಟಕದಲ್ಲೂ ಕಾಲೂರಿದ್ದ ಕಾಲದಲ್ಲಿ ತುಮಕೂರು ಜಿಲ್ಲೆಯ ಬಿಎಸ್‌ಪಿ ಅಧ್ಯಕ್ಷರಾಗಿ ಕೆಲವು ವರ್ಷ ಅದರ ಹೊಣೆಯನ್ನು ಹೊತ್ತಿದ್ದರು. ನಂತರ ರಾಜಕೀಯದಿಂದ ದೂರ ಸರಿದರು. ಸಾಮಾಜಿಕ ಚಟುವಟಿಕೆಗಳಲ್ಲಿ ನಿರತರಾದರು.

ವೀಚಿಯವರದು ತುಂಬು ಬದುಕು. ತುಮಕೂರಿನ ಅವರ ಗೆಳೆಯರು, ಹಿರಿಯರು, ಕಿರಿಯರು ಸೇರಿ ಅರ್ಥಪೂರ್ಣವಾದೊಂದು 'ಅಭಿನಂದನ ಗ್ರಂಥ' ಅರ್ಪಿಸಿದರು. ಅದು ಕೂಡ ವಿಶಿಷ್ಟ ಬಗೆಯದು. "ಹಣ್ಣು ಮೆಟ್ಟಿದ ಅವರೆ" ಎಂಬುದು. ಅದರಲ್ಲಿ ಅವರ ಜೀವನದ ಪ್ರಮುಖ ಘಟ್ಟಗಳು ಮತ್ತು ಬರವಣಿಗೆ ಕುರಿತಂತೆ ಅವರ ಸ್ನೇಹಿತರು, ಬರಹಗಾರರು ಅಭಿಮಾನದಿಂದ ನೆನಪು ಮಾಡಿಕೊಂಡಿದ್ದಾರೆ.

ಅವರ ಆಯ್ದ ಕವನಗಳ ಸಂಕಲನದ ಹೆಸರು 'ಮಹಾಯಾನ'. ಕನ್ನಡ ಪುಸ್ತಕ ಪ್ರಾಧಿಕಾರ ಈ ಸಂಗ್ರಹವನ್ನು ಹೊರತಂದಿತು. ತುಮಕೂರಿನ ಶ್ರಮ ಸಂಸ್ಕೃತಿ ಪ್ರಕಾಶನವು ವೀಚಿಯವರ 'ಸಮಗ್ರ ಕಾವ್ಯ'ವನ್ನು ಪ್ರಕಟಿಸಿದೆ. ಇದೆಲ್ಲವೂ ವೀಚಿಯವರ ಬದುಕು-ಬರಹದ ಅದ್ಭುತ ಸಾಧನೆ ಎಂಬಂತಿರುವುದು. ಇವೆಲ್ಲದರ ಹಿನ್ನೆಲೆಯಲ್ಲಿ 1994 ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಗೌರವ ಪ್ರಶಸ್ತಿ ನೀಡಿ ಸಮ್ಮಾನಿಸಿತು. ಜೊತೆಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಜಿಲ್ಲಾ ಹಂತದ ಪ್ರಶಸ್ತಿಗಳು ಸಂದಿವೆ.

ವೀಚಿಯವರ ಬದುಕು ಇದೆಲ್ಲವನ್ನು ಮೀರಿದ್ದು. 75 ವರ್ಷಗಳ ಬದುಕಿನಲ್ಲಿ 60 ವರ್ಷಗಳಿಗೂ ಹೆಚ್ಚುಕಾಲ ಕೃಷಿ ಚಟುವಟಿಕೆ, ಕಾವ್ಯದ ಕ್ರಿಯಾಶೀಲತೆಯಲ್ಲಿ ಶ್ರಮಿಸಿದವರು. ಯಾವುದೇ ಸಂದರ್ಭದಲ್ಲಿ ಬದುಕನ್ನು ಕಹಿ ಮಾಡಿಕೊಂಡವರಲ್ಲ. ಅವರಿಗೆ ಅಪಾರವಾದ ಪುಸ್ತಕ ಪ್ರೀತಿ ಇತ್ತು. ಬರವಣಿಗೆ ಒಂದು ಉದ್ಯೋಗದಂತಿರಲಿಲ್ಲ, ಅದೊಂದು ಜೀವನ ಶೈಲಿಯಾಗಿತ್ತು. ವೀಚಿಯವರಿಗೆ ವೀಚಿಯವರೇ ಸಾದೃಶ್ಯ ಎಂಬಂತಿದ್ದರು.

ವೀಚಿಯವರ ನಿಧನದೊಂದಿಗೆ ಕನ್ನಡನಾಡು ಒಬ್ಬ ಸಜ್ಜನ, ಸರಳ, ವಿನಯವಂತ ಮತ್ತು ಹೃದಯವಂತ ಕವಿಯನ್ನು ಕಳೆದುಕೊಂಡಂತಾಗಿದೆ. ಮಾರ್ಕ್ಸ್‌ವಾದಿ, ಸಮಾಜವಾದಿ ಚಿಂತನೆಯ ಈ ನೆಲದ ಮಗನಂತಿದ್ದ ಕವಿ ಬಹುದೂರ ನಡೆದುಹೋಗಿದ್ದಾರೆ ಎನಿಸುವುದಾದರೂ ಅವರ ಮಹಾಯಾನ-ಹಣ್ಣು ಮೆಟ್ಟಿದ ಅವರೆ, ನಿತ್ಯ ಮಧುವಣಗಿತ್ತಿ, ಅಭಿನಯದ ಬಯಲು, ಇವರು ನನ್ನವರು ಮುಂತಾದ ಕೃತಿಯ ಮೂಲಕ ಪದೇಪದೇ ನೆನಪಾಗುತ್ತಾರೆ. ಪ್ರಧಾನವಾಗಿ ಬೇಂದ್ರೆ, ಅಡಿಗರ ಪ್ರಭಾವ, ಪ್ರೇರಣೆ ಇವರ ಕವಿತೆಯ ಮೇಲಾದರೂ ವೀಚಿಯವರದು ಒಂದು ವಿಶಿಷ್ಟವಾದ ನೆಲದ ಭಾಷೆಯದು ಮತ್ತು ಬದುಕಿನದು. ಮೆಟ್ರಿಕ್ಯೂಲೇಷನ್ ಹಂತದವರೆಗೆ ಮಾತ್ರ ಶಿಕ್ಷಣ ಪಡೆದರೂ ಸಾಂಪ್ರದಾಯಿಕ, ಪರಂಪರೆಯ ಶಿಕ್ಷಣವನ್ನು ಮೀರಿ ಜೀವನಶೈಲಿ ರೂಪಿಸುವ ಮತ್ತು ಜೀವನಕ್ಕೆ ಹತ್ತಿರವಾದ ಶಿಕ್ಷಣ ಪಡೆದರು, ಅದರಂತೆಯೇ ಬದುಕಿದರು. ಹಳೆಯ ತಲೆಮಾರಿನ ಯಜಮಾನರಂತಿದ್ದ ಮತ್ತು ಯುವಜನತೆಗೆ ಆಶಯ ಮತ್ತು ಆಶ್ರಯದಂತಿದ್ದ ಕವಿ ವೀಚಿಯವರ ನಿಧನ ನಿಜಕ್ಕೂ ತುಂಬಲಾರದ ನಷ್ಟ. ಮತ್ತೆಮತ್ತೆ ನಷ್ಟ ತುಂಬಿ ಕೊಡುವ ಇಂತಹ ಕವಿಗಳು ಹುಟ್ಟಿ ಬರಲಿ.

■ ಎ.ಕೆ. ಹಂಪಣ್ಣ

## ವೀಚಿ

ಅಲ್ಲಿಂದ ಇಲ್ಲಿವರೆಗೆ ಹೆಜ್ಜೆ
ಗುರುತರಿಯದ ಕೋಟಿ ಕೋಟಿಗಳಲ್ಲಿ
ಸಾಟಿ ಹಾಕಿದ ಹಾಗೆ ಬಯಲು ತುಂಬಿದ ರಾಗಿ

ಸಾಲ್ವೈದರಕ್ಕಡಿಗೆ
ಅಕ್ಕರೆಯ ಜವನ ಲಗ್ನ
ಸಾಲಸೋಲಿವ ಸಂಕರದ ಬೆಳಗು
ಲೋಕ ಕಡ್ತೆರದ ಒಳಗಿಸೊಳಗಿವ ಬೆರಗು

ಆರೆಂದರೆ ಹಿಗ್ಗದೆ
ಮೂರೆಂದರೆ ಕುಗ್ಗದೆ
ಗೊಬ್ಬರಗೊಡನೂಡಿಸಿ
ನೀರುಣಿಸುವ ಜೀವ

ಉತ್ತ ಹೊಲ ಮಾಲದಲಿನೆತ್ತಿ ಕುಕ್ಕುವ ಹಗಲು
ರಾಟೆನೂಲಿನ ಕುಲಕಿ ಮೇಟಿ ತಿರುಗುವ ಮೈಯಿ

ಸರಿಸಾಟಿ ಇಲ್ಲೆಂಬ ಹೊತ್ತಿಗೆಯ ಬಿಳಿಜೋಳ
ಕಾಗೆಗುಬ್ಬಿ ಗೊರವ ಗೀಜುಗ
ಸೀಗೆ ಬೇಲಿಯ ನಡುವೆ ಸಿರಿಗಂಧ

ಹಾಲು ಕರೆಯುವ ತಳಿಗೆ
ಸಾವಿರದ ರಸಬಯಕೆ
ಬಂದುಣುವ ಬಂಧುಣಿಗೆ
ಪರವನಿಳಿಗೆಳಿತರುವ ಬಾವುಣಿಕೆ
ವೀಚಿ

■ ಎಸ್.ಜಿ. ಸಿದ್ಧರಾಮಯ್ಯ



# ಸುನೀಲನ ಸ್ಕೋಡಾ ಕಾರು, ರಬ್ಬರ್ ಎಸ್ಟೇಟ್!


ಓಡಾಟಕ್ಕೆ ಸ್ಕೋಡಾ ಕಾರು. ತಲೆ ಕಾಯಲು ಜರ್ಮನ್ ಮೇಡ್ ರಿವಾಲ್ವರು. ಹಿಂದೆ ಮುಂದೆಲ್ಲ ಹುಡುಗರ ಹಿಂಡು. ಬೆನ್ನಿಗೇ ಕಾಡುವ ಪೊಲೀಸರ ದಂಡು!

ಚಿಕ್ಕನ್‌ಕಣ್ ರಾಜೇಂದ್ರನ ಹಂತಕ, ಬೆಂಗಳೂರು ಕಂಡ ಅತ್ಯಂತ ಕಿರಿವಯಸ್ಸಿನ ಡಾನ್ ಸೈಲೆಂಟ್ ಸುನೀಲನ ಸದ್ಯದ ಪರಿಸ್ಥಿತಿಯಿದು. ಆತ ಜೈಲಿಂದ ಹೊರಬಿದ್ದು ತಿಂಗಳುಗಳೇ ಕಳೆದಿವೆ. ರೈಟ್‌ಹ್ಯಾಂಡ್ ಒಂಟೆ, ಪರಮಾಪ್ತರಾದ ಪಿಟಿ ಸಂತೋಷ, ಪೀಸಿ ವಿಜಯ್ ಕುಮಾರ್, ಮಾರ್ಕೆಟ್ ವೇಡಿ, ಅನಾಲಿ ಅರುಣ, ಲಚ್ಚಿ, ಬೋಂಡಾ ನಾಗ, ಕ್ಯಾಪ್ಟನ್ ರಾಜ ಎಲ್ಲರೂ ಒಟ್ಟೊಟ್ಟಿಗೇ ಜೈಲಿಂದ ಹೊರಬಿದ್ದಿದ್ದಾರೆ. ದುಡ್ಡು-ಡೀಲು ಯಥೇಚ್ಛವಾಗಿಯೇ ಇದೆ. ಜೊತೆಗೇ ಸಾವೆಂಬುದು ನೆರಳಿನಂತೆ ಹಿಂಬಾಲಿಸುತ್ತಿದೆ!


ಸುನೀಲ ಹಿಡಿದ ದಾರಿಯೇ ಅಂಥಾದ್ದು. ಕೊಂದವನು ಒಂದಲ್ಲಾ ಒಂದು ದಿನ ಕೊಲೆಯಾಗಲೇಬೇಕು. ಅದು ಅಂಡರ್‌ವರ್ಲ್ಡ್‌ನ ಅಧಿನಿಯಮ. ಚಿಕ್ಕನ್‌ಕಣ್ ರಾಜೇಂದ್ರನನ್ನು ಅನಾಯಾಸವಾಗಿ ಕೊಂದವನಿಗೆ, ಜೈಲಲ್ಲಿದ್ದುಕೊಂಡೇ ಬ್ರೇಕ್ ಜಗ್ಗಿಯ ತಮ್ಮ ಪ್ರಸಾದಿಯನ್ನು ಮುಗಿಸಿದವನಿಗೆ, ಗೋರಿಪಾಳ್ಯದ ಅಲ್ತಾಫ್‌ನ ಇಬ್ಬರು ನಿಷ್ಪಾಪಿ ತಮ್ಮಂದಿರ ಕಗ್ಗೊಲೆಯಲ್ಲಿ ಕೈಜೋಡಿಸಿದವನಿಗೆ; ಸಾವಿನಿಂದ ಬಚಾವಾಗುವುದು ಸಣ್ಣ ಮಾತಾ?

## ಮಾರ್ಕೆಟ್ ವೇಡಿಯ ಅಡ್ಡೆ!

ಒಂದೋ ಶಾಶ್ವತವಾಗಿ ಬೆಂಗಳೂರನ್ನೇ ಬಿಡಬೇಕು ಅಥವಾ ಸಾವಿಗೆ ಸಿದ್ಧನಾಗಿಯೇ ಹೆಣಗಲು ಬಲಿಯಾಗಬೇಕು. ಈ ಎರಡರ ಪೈಕಿ ಯಾವುದನ್ನೇ ಆಯ್ದುಕೊಂಡರೂ ಕಷ್ಟ ತಪ್ಪಿದ್ದಲ್ಲ. ಒಂದು ಮೂಲದ ಪ್ರಕಾರ ಸುನೀಲ ಮತ್ತು ಒಂಟೆ ಸೇರಿಕೊಂಡು ಕೇರಳದ ಮನ್ನಾರ್‌ನಲ್ಲಿ ಮೂರು ಕೋಟಿ ರೂಪಾಯಿಗಳ ಬೆಲೆ ಬಾಳುವ ರಬ್ಬರ್ ತೋಟವೊಂದನ್ನು ಖರೀದಿಸಿದ್ದಾರೆ. ಇನ್ನು ಕೆಲವೇ ದಿನಗಳಲ್ಲಿ ಅಲ್ಲಿಗೆ ಹೋಗಿ ನೆಲೆಗೊಳ್ಳಲು ಎಲ್ಲಾ ವ್ಯವಸ್ಥೆಯನ್ನೂ ಮಾಡಿಕೊಂಡಿದ್ದಾರೆ.



ಸುನೀಲ



ಒಂಟೆ

ಹಾಗಂತ ಒಮ್ಮೆಗೇ ಬೆಂಗಳೂರು ಅಂಡರ್‌ವರ್ಲ್ಡ್‌ಗೆ ಗುಡ್‌ಬೈ ಹೇಳಿಬಿಟ್ಟರೆ ಅದೇ ತಮ್ಮ ಪ್ರಾಣಕ್ಕೆ ಕುತ್ತಾಗುತ್ತದೆ ಎಂಬ ಅಳುಕು ಸುನೀಲನನ್ನು ಕಾಡುತ್ತಿದೆ. ಅದಕ್ಕೆಂದೇ ಜೈಲಿಂದ ಹೊರಬಿದ್ದವನು ಬೆಂಗಳೂರಿನ ಟಫ್ ಕಾಪ್‌ಗಳಾದ ಚಿಕ್ಕಪೇಟೆ ಇನ್ಸ್‌ಪೆಕ್ಟರ್ ನಂಜುಂಡೇಗೌಡ ಮತ್ತು ಮಾರ್ಕೆಟ್ ಇನ್ಸ್‌ಪೆಕ್ಟರ್ ರೇವಣ್ಣರ ಕಾಲಿಗೆ ಬಿದ್ದು 'ನನ್ನನ್ನು ಬಿಟ್ಟು ಬಿಡಿ, ನನಗಿನ್ನು ಅಂಡರ್‌ವರ್ಲ್ಡ್ ಸಹವಾಸ ಸಾಕು. ಇಲ್ಲೇ ಕಲಾಸಿಪಾಳ್ಯದ ಮಾರ್ಕೆಟ್‌ನಲ್ಲೊಂದು ಆಫೀಸ್ ಮಾಡಿಕೊಂಡು ಇದ್ದುಬಿಡ್ತೀನಿ' ಎಂದು ಗೋಗರೆದ.

ಆದರೆ ಕಲಾಸಿಪಾಳ್ಯದ ಮಾರ್ಕೆಟ್ ಬರುವುದು ನಿಷ್ಠುರಿ ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್ ವ್ಯಾಪ್ತಿಗೆ. ಸುನೀಲನ ಬಂಟ ವೇಡಿಯನ್ನು ಈಗಾಗಲೇ ಊರು ಬಿಡಿಸಿರುವ ಉಮೇಶ್ ಇನ್ನು ತನ್ನ ಬುಡಕ್ಕೇ ಬಂದು ಅಡ್ಡೆ ಹಾಕಲು ಬಿಡುತ್ತಾರಾ? ಇಡೀ ಸುನೀಲನ ನೆಟ್‌ವರ್ಕ್ ಬಗ್ಗೆ ಬೆಂಗಳೂರಿನ ಬೇರೆಲ್ಲ ಪೊಲೀಸ್ ಅಧಿಕಾರಿಗಳಿಗಿಂತಲೂ ಹೆಚ್ಚಿನ ಮಾಹಿತಿ ಉಮೇಶ್‌ಗಿದೆ. ಸುನೀಲನ ಪಡೆಯಲ್ಲೇ ಇನ್ಸ್‌ಪೆಕ್ಟರ್ ಉಮೇಶ್‌ಗೆ ಬೇಕಾಬಿಟ್ಟಿ ಇನ್ಫಾರ್ಮೆಂಟುಗಳಿದ್ದಾರೆ. ತಾನಿನ್ನು ರೌಡಿಸಂ ಬಿಟ್ಟುಬಿಡ್ತೀನಿ ಎಂದು ಬೇರೆ ಯಾರೇ ಪೊಲೀಸ್ ಅಧಿಕಾರಿಗಳನ್ನು ನಂಬಿಸಿದ ಹಾಗೆ ಇನ್ಸ್‌ಪೆಕ್ಟರ್ ಉಮೇಶ್‌ರನ್ನು ನಂಬಿಸುವುದು ಸುಲಭದ ಮಾತಲ್ಲ. ಇಲ್ಲಿಗೆ ತಿಂಗಳ ಹಿಂದೆ 'ಇಲ್ಲೇ ಮಾರ್ಕೆಟ್ಟಿನಲ್ಲೇ ಆಫೀಸ್ ಮಾಡಿಕೊಂಡು ಇದ್ದುಬಿಡ್ತೀವಿ' ಎಂದು ಉಮೇಶರನ್ನು ನಂಬಿಸಲೆಂದು ಬಂದಿದ್ದ ಒಂಟೆ, ಪೀಸಿ, ಪಿಟಿ ಸಂತೋಷ ಇತ್ಯಾದಿ ಸುನೀಲನ ಬಂಟರನ್ನು ಉಮೇಶ್ ತಮ್ಮ ಛೇಂಬರಿನೊಳಕ್ಕೂ ಬಿಟ್ಟುಕೊಳ್ಳಲಿಲ್ಲ.

## ಕಪಾಲಿ ನಾಗನ ಲಿಂಕ್

ಅಲ್ಲಿಗೆ ಕಲಾಸಿಪಾಳ್ಯದ ವೇಡಿಯ ಅಡ್ಡೆಯನ್ನೇ ತಮ್ಮ ನೆಲೆಯನ್ನಾಗಿ ಮಾಡಿಕೊಳ್ಳುವ ಸುನೀಲನ ಉದ್ದೇಶವೇ ಪಲ್ಟಾಯಿಸಿದಂತಾಯ್ತು. ಹಾಗಂತ ಬೆಂಗಳೂರನ್ನು ತೊರೆದು ಕೇರಳದ ಮನ್ನಾರ್‌ನ ಎಸ್ಟೇಟ್ ಸೇರಿಕೊಳ್ಳುವುದೂ ಸುಲಭವೇನಲ್ಲ. ಜೈಲಲ್ಲಿರುವಾಗಲೇ ಬೆಂಗಳೂರಿನ ಇಸ್ಪೀಟ್ ಕ್ಲಬ್‌ಗಳು, ಹೈಟೆಕ್ ಪಿಂಪ್‌ಗಳು ಮತ್ತು ರಿಯಲ್ ಎಸ್ಟೇಟ್ ದಂಧೆಯಿಂದ ತಿಂಗಳೊಂದಕ್ಕೆ ಐದು ಲಕ್ಷದ ಆದಾಯ ಸುನೀಲನಿಗಿತ್ತು.

ಈ ಪೈಕಿ ಬೆಂಗಳೂರಿನ ಹೈಟೆಕ್ ಪಿಂಪ್‌ಗಳ ಜಾತಕವನ್ನು ಸುನೀಲನಿಗೆ ಒದಗಿಸಿಕೊಡುತ್ತಿದ್ದವನು

**ರಾ. ಸೋಮನಾಥ್**

ಕಪಾಲಿ ಗಲ್ಲಿಯ ಲಾಟರಿ ರಾಜ ಉರ್ಫ್ ಕುಳ್ಳರಾಜ ಅಲಿಯಾಸ್ ಕಪಾಲಿ ನಾಗ!

ಶುರುವಿನಲ್ಲಿ ಸಿಂಗಲ್ ನಂಬರ್ ಲಾಟರಿ ದಂಧೆಯಲ್ಲಿದ್ದ ಕುಳ್ಳರಾಜನಿಗೆ ಚಿಕ್ಕಪೇಟೆಯ ಅನೇಕ ಶೋಕಿಲಾಲ ಮಾರ್ವಾಡಿಗಳ ಲಿಂಕಿದೆ. ಅಂಥವರಿಗೆ ಮಾಡೆಲ್ ಹುಡುಗಿಯರನ್ನು ಒದಗಿಸುವ ಹೈಟೆಕ್ ಪಿಂಪ್‌ಗಳ ಮೊಬೈಲ್ ನಂಬರನ್ನು ಹೇಗೋ ಸಂಪಾದಿಸುವ ಕುಳ್ಳರಾಜ ಅದನ್ನು ಜೈಲಲ್ಲಿದ್ದ ಸುನೀಲನ ಬಂಟ ಪೀಸಿಗೆ ಮುಟ್ಟಿಸುತ್ತಿದ್ದ. ಜೈಲಲ್ಲಿ ಕೂತೇ ಕ್ವಾಲೀಸ್ ಗಾಡಿಯ ತುಂಬ ಹುಡುಗರನ್ನು ರೆಡಿ ಮಾಡಿ ಅದು ಹೈಟೆಕ್ ಪಿಂಪ್‌ನ ಮನೆ ಮುಂದೆ ನಿಂತಿರುವಾಗಲೇ ಅತ್ತಲಿಂದ ಪೀಸಿಯ ಬೆದರಿಕೆ ಕರೆ ಬರುತ್ತದೆ. 'ನೋಡು ನಿನ್ನ ಮನೆ ಮುಂದೇನೇ ಇಂಥಾ ನಂಬರ್ ಗಾಡಿಯಲ್ಲಿ ನಮ್ಮ ಹುಡುಗರಿದ್ದಾರೆ. ಒಂದೇ ಫೋನು, ಈಗ್ಲೇ ನುಗ್ಗಿಬಿಡ್ತಾರೆ!' ಎಂದಿದ್ದೇ ಆ ಹೈಟೆಕ್ ಪಿಂಪ್ ಡೀಲು ಕುದುರಿಸುತ್ತಾನೆ.

ಹೀಗೆ ಡಜನ್ನುಗಟ್ಟಲೇ ಪಿಂಪ್‌ಗಳನ್ನು ಪಳಗಿಸಿದ ಕುಳ್ಳರಾಜ ಮತ್ತು ಪೀಸಿ ಇದೊಂದರಿಂದಲೇ ತಿಂಗಳೊಂದಕ್ಕೆ ಸರಿಸುಮಾರು ಎರಡು ಲಕ್ಷದಷ್ಟು ಮಂತ್ಲಿ ಎತ್ತಿ ಅದನ್ನು ಜೈಲಲ್ಲಿದ್ದ ಸುನೀಲನಿಗೆ ಮುಟ್ಟಿಸುತ್ತಿದ್ದರು. ಇಷ್ಟೇ ಮೊತ್ತದ ಮಂತ್ಲಿಯನ್ನು ಬೆಂಗಳೂರಿನ ಎರಡು ಸ್ಮಶಾನಗಳಿಂದ ಎತ್ತುವಳಿ ಮಾಡಿ ಜೈಲಿಗೆ ಮುಟ್ಟಿಸುತ್ತಿದ್ದ ಇಬ್ಬರು ಪಾಖಂಡಿಗಳ ಪೈಕಿ ಒಬ್ಬನ ಹೆಸರು ಬೋಂಡಾ ನಾಗ. ಈತ ಶ್ರೀರಾಂಪುರದ ಹರಿಶ್ಚಂದ್ರ ಘಾಟ್ ಸ್ಮಶಾನದ ಕಾಂಟ್ರಾಕ್ಟ್ ಹಿಡಿದಿದ್ದಾನೆ. ಸಲ್ಯೂಷನ್ ಎಂಬ ಇನ್ನೊಬ್ಬ ಪೀಣ್ಯದ ಸ್ಮಶಾನಕ್ಕೆ ವೀರಬಾಹುಕ!

ಇವರಿಬ್ಬರೂ ಪಾಲಿಕೆಯಿಂದ ಟೆಂಡರ್ ಹಿಡಿದು ಸ್ಮಶಾನವನ್ನು ಸಂಭಾಳಿಸುತ್ತಾರೆ. ವಿಲ್ಸನ್ ಗಾರ್ಡನ್ ಮತ್ತು ಗೋರಿಪಾಳ್ಯದ ಸ್ಮಶಾನಗಳನ್ನು ಬಿಟ್ಟರೆ ಶ್ರೀರಾಂಪುರದ ಹರಿಶ್ಚಂದ್ರ ಘಾಟ್ ಮತ್ತು ಪೀಣ್ಯದ ಸ್ಮಶಾನಗಳು ಸದಾ ಬಿಜಿಯಾಗಿರುತ್ತವೆ. ಬೆಂಗಳೂರಿನಲ್ಲಿ ಯಾರೇ ಸತ್ತರೂ ಕ್ರಿಯಾಕರ್ಮಾದಿಗಳಿಗಾಗಿ ಜನಕ್ಕೆ ಈ ಬೋಂಡಾನಾಗ ಮತ್ತು ಸಲ್ಯೂಷನ್ನುಗಳೇ ಬೇಕು. ಸತ್ತವರಿಗೆ ಚಟ್ಟ, ಬ್ಯಾಂಡು, ಬ್ರಾಹ್ಮಣರು, ಪೂಜಾ ಸಾಮಗ್ರಿಗಳು, ಸೌದೆ ಇತ್ಯಾದಿ ಎಲ್ಲವನ್ನೂ ಸೇರಿಸಿದರೆ ಅದು ಐದು ಸಾವಿರಕ್ಕಿಂತ ಹೆಚ್ಚಿಗೆ ಆಗುವುದಿಲ್ಲ. ಆದರೆ ಸ್ಮಶಾನದ ಕಾಂಟ್ರಾಕ್ಟ್ ಹಿಡಿದ ಈ ವೀರಬಾಹುಕರಿಬ್ಬರೂ ಅದೂ ಇದೂ ಲೆಕ್ಕ ಹೇಳಿ ಮಿನಿಮಮ್ ಐವತ್ತು ಸಾವಿರ ಬೇಕೇಬೇಕು ಎನ್ನುತ್ತಾರೆ.

## ಸ್ಮಶಾನಗಳ ಉತ್ಪತ್ತಿ

ಕನಿಷ್ಠ ಮೂವತ್ತು ಸಾವಿರಕ್ಕೆ ಡೀಲು ಕುದುರಿದರೂ ಸಾಕು. ದಿನವೊಂದಕ್ಕೆ ಒಂದೇ ಒಂದು ಅಂತ್ಯಕ್ರಿಯೆಯಿಂದ 25 ಸಾವಿರ ಸಿಗುತ್ತದೆ. ದಿನಕ್ಕೆ ಕನಿಷ್ಠ ಐದು ಹೆಣ ಬಂತೆಂದರೆ ಇದೇ ಲಕ್ಷವಾಗುತ್ತದೆ. ಬೇಡ ದಿನಕ್ಕೊಂದೇ ಅಂತ ಲೆಕ್ಕ ಹಾಕಿದರೂ ಪೀಣ್ಯ ಮತ್ತು ಶ್ರೀರಾಂಪುರದ ಎರಡು ಸ್ಮಶಾನಗಳಿಂದ ತಿಂಗಳಿಗೆ ಎಷ್ಟಾಯಿತು?

ಪ್ರಾರಂಭದಲ್ಲಿ ಸ್ಮಶಾನದಲ್ಲಿ ಗೋರಿ ತೋಡಿಕೊಂಡಿದ್ದ ಬೋಂಡಾ ನಾಗ ಇವತ್ತು ಕುಬೇರ. ಹಾಗೇ

(12ನೇ ಪುಟಕ್ಕೆ)

# ಗೋಪಾಲಯ್ಯನೋ ಜೇಕೆಯೋ?

ಸದ್ಯ ಬೆಂಗಳೂರು ಪಾಪಕೂಪದಲ್ಲಿ ಇಂಥಾದ್ದೊಂದು ಸುದ್ದಿಯಂತೂ ಹೊಗೆಯಾಡುತ್ತಲೇ ಇದೆ. ಅದು ಸುನೀಲನ ಮುಂದಿನ ಟಾರ್ಗೆಟ್ ಜೇಕೆಯೋ ಗೋಪಾಲಯ್ಯನೊ?

ಇಂಥದ್ದೇ ಅನುಮಾನ ಪೊಲೀಸರನ್ನೂ ಕಾಡುತ್ತಿದೆ. ಇಷ್ಟರಲ್ಲೇ ಬೆಂಗಳೂರು ಅಂಡರ್‌ವರ್ಲ್ಡ್ ದೊಡ್ಡ ತಲೆಯೊಂದಕ್ಕೆ ಸುನೀಲನ ಗ್ಯಾಂಗ್ ಕೈಹಾಕಲಿದೆ ಎಂಬ ಬಗ್ಗೆ ಎರಡು ತಿಂಗಳ ಹಿಂದೆಯೇ ಪತ್ರಿಕೆಗಳಲ್ಲಿ ಸುದ್ದಿಯಾಯಿತು. ಅದಕ್ಕೆ ತಕ್ಕಂತೆ ಗೋರಿಪಾಳ್ಯದ ಮಾಜಿ ಕೌನ್ಸಿಲರ್ ಆರಿಫ್ ಪಾಷಾನ ಮಗ ಇಮ್ರಾನ್ ಬಳಿಯಿದ್ದ ಎರಡೂ ರಿವಾಲ್ವರ್‌ಗಳನ್ನು ಸುನೀಲ ಬಳಸುತ್ತಿದ್ದಾನೆಂಬ ಮಾಹಿತಿ ಸಿಸಿಬಿ ಪೊಲೀಸರಿಗೆ ಸಿಕ್ಕಿತ್ತು. ನಿಜಕ್ಕೂ, ಕಾಮಾಕ್ಷಿಪಾಳ್ಯದ ಗೋಪಾಲಯ್ಯ ಅಥವಾ ಜೇಕೆಯನ್ನು ಮುಗಿಸುವುದು ಸುನೀಲ ಉದ್ದೇಶವೆ?

ಹಾಗೆ ನೋಡಿದರೆ ಕಾಮಾಕ್ಷಿಪಾಳ್ಯದ ಗೋಪಾಲಯ್ಯನಿಗೂ ಸುನೀಲನಿಗೂ ಏನೇನೂ ಸಂಬಂಧವಿಲ್ಲ. ಮಚ್ಚಿ ಮುಗಿದ ಮೇಲೆ ಆ ಕಾರಣಕ್ಕೆ ಕೊರಂಗು ಮತ್ತು ಮುಲಾಮರ ಮಧ್ಯೆ ಗ್ಯಾಂಗ್‌ವಾರ್ ಭುಗಿಲೆದ್ದಿದ್ದು ಬಿಟ್ಟರೆ ಎಲ್ಲೂ ಗೋಪಾಲಯ್ಯನ ಹೆಸರು ಕೇಳಿಬರಲಿಲ್ಲ. ಇನ್ನು ಜೇಕೆಯ ಹೆಸರು ಅಂಡರ್‌ವರ್ಲ್ಡ್ ಮಟ್ಟಿಗೇ ಅಪರೂಪವಾಗುತ್ತಿದೆ. ಅತ್ತ ಮಾಗಡಿಯ ರಾಜಕೀಯದಲ್ಲಿ ಬಿಜಿಯಾಗಿರುವ ಜೇಕೆಯ ಜೊತೆಗಿದ್ದ ತಿಮ್ಮೇಹಳ್ಳಿಯ ಗೋವಿಂದನ ಶಿಷ್ಯರಾದ ಸೀರಾನೆ ಹರೀಶ, ಬಸವ, ಪ್ರದೀಪ, ಶಿವು ಮುಂತಾದ ಸೂರಿ ಶಿಷ್ಯರೆಲ್ಲ ಸದ್ಯ ಸುನೀಲನ ಗ್ಯಾಂಗ್ ಸೇರಿಕೊಂಡಿದ್ದಾರೆ.

ಹೀಗೆ ಅಂಡರ್‌ವರ್ಲ್ಡ್ ಉಸಾಬರಿ ಬಿಟ್ಟು ರಾಜಕೀಯದತ್ತ ವಾಲುತ್ತಿರುವವರನ್ನೇ ತಾನೆ ಸುನೀಲ ಟಾರ್ಗೆಟ್ ಮಾಡುವುದು?

ಚಿಕ್ಕನ್‌ಕಣ್ ರಾಜೇಂದ್ರನನ್ನು ಮುಗಿಸಿದ ಹಾಗೆ ಈ ಇಬ್ಬರ ಪೈಕಿ ಯಾರಾದರೂ ಒಬ್ಬರನ್ನು ಮುಗಿಸುವುದು ಸುನೀಲನ ಮುಂದಿನ ಗುರಿಯೇ?



ಆರಿಫ್ ಪಾಷಾ



ಜೇಡರಹಳ್ಳಿ



ಗೋಪಾಲಯ್ಯ

# ಅಗ್ರಹಾರ ಎಂಬ ತಗಡು ಸಿನಿಮಾ

'ಅಗ್ರಹಾರ' ಎಂಬ ತಗಡು ಚಿತ್ರಕ್ಕೂ ಸುನೀಲನಿಗೂ ಯಾವ ಹಂಗಿತ್ತೋ ಗೊತ್ತಿಲ್ಲ, ಧನಂಜಯ್ ಕುಂದಾಪುರ ಎಂಬ ಸಿನಿಮಾ ನಿರ್ದೇಶಕನೊಬ್ಬ ಇದು ಸುನೀಲನದೇ ಕತೆ, ಅದನ್ನು ಸುನೀಲನ ಸಂದರ್ಶನ ಮಾಡಿಯೇ ತಾನು ಬರೆದಿದ್ದೆ, ಆದರೆ ತನಗೆ ಸಂಭಾವನೆ ಕೊಡದೇ ನನ್ನ ಹೆಸರನ್ನು ತೆಗೆದು 'ಅಕ್ಷಯ್' ಎಂಬಾತ ತನ್ನ ಹೆಸರನ್ನು ಹಾಕಿಕೊಂಡಿದ್ದಾನೆಂದು ಇಲ್ಲಿಗೆ ತಿಂಗಳ ಹಿಂದೆ ಫಿಲ್ಮ್ ಛೇಂಬರ್‌ಗೆ ದೂರು ಕೊಟ್ಟ.

ಇದೇ ಹೊತ್ತಿಗೆ ಸುನೀಲನ ತಂಗಿ 'ದಿವ್ಯಾ' ಜೈಲಲ್ಲಿದ್ದ ತನ್ನ ಅಣ್ಣ ಸುನೀಲನ ಕತೆ ಆಧರಿಸಿ ಚಿತ್ರ ನಿರ್ಮಿಸಿದ್ದಾರೆಂದು ಮತ್ತೊಂದು ದೂರು ಕೊಡುತ್ತಾಳೆ. ಯಾವುದೂ ಪ್ರಯೋಜನವಾಗದೇ ಹೋದಾಗ ಸುನೀಲನೇ ಹೈಕೋರ್ಟಿಗೆ ಅಪೀಲು ಹೋಗಿ 'ಅಗ್ರಹಾರ' ಚಿತ್ರವನ್ನು ನಿಲ್ಲಿಸುವಂತೆ ತಡೆಕೋರುತ್ತಾರೆ. ಕೋರ್ಟು ಕೂಡ ಸುನೀಲನಿಗೆ ಮಣೆ ಹಾಕದೇ 'ಅಗ್ರಹಾರ' ಬಿಡುಗಡೆಯಾಗುತ್ತದೆ.

ಸದ್ಯ ತೆರೆ ಕಂಡಲ್ಲೆಲ್ಲ ನೊಣ ಹೊಡೆಯುತ್ತಿರುವ 'ಅಗ್ರಹಾರ' ಒಂದೇ ವಾರಕ್ಕೆ ಸುಸ್ತು ಹೊಡೆದಿದೆ. ಆದರೆ ನಿರ್ಮಾಪಕ ಗಜ ಉರ್ಫ್ ಗೋರಿಪಾಳ್ಯದ ಗಜೇಂದ್ರ ಮಾತ್ರ ಸೇಫಾಗಿ ಬಿಟ್ಟಿದ್ದಾನೆ. ಏಕೆಂದರೆ ಬಿಡುಗಡೆಗೆ ಮೊದಲೇ ಇದು ಸುನೀಲನ ಕತೆಯುಳ್ಳ ಚಿತ್ರ ಎಂಬ ಪ್ರಚಾರದಿಂದಾಗಿ ಅದು ಒಂದೂವರೆ ಕೋಟಿಗೆ ಮಾರಾಟವಾಗಿತ್ತು!

ಪ್ರೊಡ್ಯೂಸರ್ ಗಜ ಈಗಾಗಲೇ ಸುನೀಲನನ್ನು ಸರಿ ಮಾಡಿಕೊಂಡಿದ್ದಾನೆಂಬ ಸುದ್ದಿಯೂ ಹಬ್ಬಿದೆ. ಹೆಸರಿಗೆ ಹೆಸರೂ ಬಂತು. ದುಡ್ಡಿಗೆ ದುಡ್ಡೂ ಬಂತು. ಏನಾದರೂ ಲಾಭ ಸುನೀಲನಿಗೇ ತಾನೆ?



# CM ಯಾರು?



ದೇವೇಗೌಡ ಈದ ಹುಲಿಯಂತಾಗಿದ್ದಾರೆ.... ತನ್ನ ಟಿರಿಟಿರಿ ಮರಿಗಳನ್ನು ರಕ್ಷಿಸಲು ಯಾರ ಮೇಲೆ ಬೇಕಾದರೂ ಎರಗಿ ಹೋಗಬಲ್ಲ ಧೈರ್ಯ ತೋರುವ ಹೆಣ್ಣು ಹುಲಿ ಥರ!

ಮುಂದಿನ ಹತ್ತು ದಿನ ರಾಜ್ಯ ರಾಜಕೀಯದಲ್ಲಿ ನಡೆಯಲಿರುವ ಎಲ್ಲಾ ಬೆಳವಣಿಗೆಗಳು, ನಾಟಕೀಯ ತಿರುವುಗಳು ಗೌಡ ಬಯಸಿದಂತೆ ನಡೆದಲ್ಲಿ ಮಾತ್ರ ಬಿಜೆಪಿಯ ಶಾಸಕನೊಬ್ಬ ಕರ್ನಾಟಕದ ಹೊಸ ಮುಖ್ಯಮಂತ್ರಿಯಾಗಬಹುದು.


ಆದರೆ ಆ ವ್ಯಕ್ತಿ ಯಡಿಯೂರಪ್ಪನೇ ಹೌದು ಎಂಬುದು ಮಾತ್ರ ಈ ಕ್ಷಣದವರೆಗೂ ದೃಢಪಡುತ್ತಿಲ್ಲ. ಆಕಸ್ಮಾತ್ ಯಡ್ಡಿಯೇ ಸಿಎಂ ಆದರೂ ಆತ ಆ ಕುರ್ಚಿಯಲ್ಲಿ ನೂರು ದಿನ ಪೂರೈಸುವುದಿಲ್ಲ.

ಇದು ಗೌಡರ ಖಡಕ್ ನಿರ್ಧಾರ. ಆದರೆ ಈ ಹಂತ ತಲುಪುವ ಮುನ್ನ ಬಿಜೆಪಿಯನ್ನು ಹಣ್ಣುಗಾಯಿ ನೀರುಗಾಯಿ ಮಾಡಲು ಯಾವ್ಯಾವ ಅಸ್ತ್ರಗಳನ್ನು ಪ್ರಯೋಗಿಸಬೇಕು ಎಂಬುದನ್ನು ಗೌಡ ನಿರ್ಧರಿಸಿಕೊಂಡಿದ್ದಾರೆ. ಅಷ್ಟೇ ಅಲ್ಲ ಅಕ್ಟೋಬರ್ ಮೊದಲ ವಾರದಲ್ಲಿ ಇಡೀ ರಾಜಕೀಯ ಬೆಳವಣಿಗೆಗಳ ಕೇಂದ್ರ ಬಿಂದುವಾಗಿ ವಿಜೃಂಭಿಸಲಿರುವ ದೇವೇಗೌಡ ತಮ್ಮ ಹಿಂದಿನ 50 ವರ್ಷಗಳ ರಾಜಕೀಯ ಅನುಭವ, ತಿಳುವಳಿಕೆ ಬಳಸಿಕೊಳ್ಳುತ್ತಾರೆ. ಅದು ಜೆಡಿಎಸ್ ಪಾರ್ಟಿಯ ಹಾಗೂ ತನ್ನ ಮಕ್ಕಳ ಮುಂದಿನ 20 ವರ್ಷಗಳ ರಾಜಕೀಯ ಭವಿಷ್ಯದ ಬುಡ ಭದ್ರ ಮಾಡುವಂತಹ ನಡೆಗಳಾಗಿರುತ್ತವೆ.



ದೇವೇಗೌಡ ಈದ ಹೆಣ್ಣು ಹುಲಿಯಂತಾಗಿದ್ದಾರೆ ಎನ್ನಬೇಕಿರುವುದು ಈ ಕಾರಣದಿಂದಲೇನೆ. ಈಗ ತಾನೆ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಜೆಡಿಎಸ್ ನಿರೀಕ್ಷೆಗೂ ಮೀರಿದ ಗೆಲುವು ಸಾಧಿಸಿದೆ. ಗೌಡರ ಆತ್ಮವಿಶ್ವಾಸವನ್ನು ಹೆಚ್ಚಿಸಿರುವ ಅಂಶಗಳಲ್ಲಿ ಇದೂ ಒಂದಾಗಿದೆ.

ಅಧಿಕಾರ ಹಸ್ತಾಂತರದ ವೇಳೆ ಯಾವುದೇ ಹೊಸ ಷರತ್ತುಗಳನ್ನು ತಾನು ಒಪ್ಪುವುದಿಲ್ಲ ಎಂದು ಬಿಜೆಪಿ ಹೇಳುತ್ತಿದೆಯಾದರೂ ಗೌಡ ಹೊಸ ಷರತ್ತುಗಳನ್ನು ವಿಧಿಸದೆ ಇರುವುದಿಲ್ಲ, ನಾಳೆ ಒಂದು ವೇಳೆ ಇದೇ ರೀತಿ ಘಟನಾವಳಿಗಳು ನಡೆದಲ್ಲಿ ಯಾವ್ಯಾವ ಸಾಧ್ಯತೆಗಳಿರುತ್ತವೆ ಎಂದರೆ ಇದುವರೆವಿಗೂ ಸೀನ್‌ನಲ್ಲೇ ಇರದಿದ್ದ ಬಿಜೆಪಿ ನಾಯಕರಾದ ಜಗದೀಶ್ ಶೆಟ್ಟರ್,



ಕೆ.ಎಸ್. ಈಶ್ವರಪ್ಪ ರಮೇಶ್ ಜಿಗಜಿಣಗಿಯವರ ಹೆಸರುಗಳೂ ಮುಂದಿನ ಮುಖ್ಯಮಂತ್ರಿಯಾಗಬಹುದಾದವರ ಪಟ್ಟಿಗೆ ಸೇರಿ ಬಂದಿವೆ.

ಇದು ಯಾಕೆಂದರೆ...

ಯಡಿಯೂರಪ್ಪನ ಆಕ್ರಮಣಕಾರಿ ಪ್ರವೃತ್ತಿ, ಯಡ್ಡಿಯದು ಇಡೀ ಜೀವಿತದಲ್ಲೇ ಆತ ತಾಳ್ಮೆ-ಬುದ್ಧಿ ತೋರಿಸುತ್ತಿರುವುದು ಕಳೆದ ಒಂದೂವರೆ ತಿಂಗಳಿನಿಂದೀಚೆಗೆ! ಅದೂ ಸಿಎಂಗಿರಿ ದಕ್ಕದೇ ಹೋದೀತೆಂಬ ಭಯದಿಂದ ಮಾತ್ರ. ಇದೇ ಯಡ್ಡಿ ನಾಳೆ ಸಿಎಂ ಆಗೇಬಿಟ್ಟರೆ ಹೀಗಿರುವುದಿಲ್ಲ ಎಂಬುದು ದೇವೇಗೌಡರಿಗೆ ಗೊತ್ತು. ಅಕಸ್ಮಾತ್ ಬಿಜೆಪಿ ಅಧಿಕಾರ ವಂಚಿತವಾಗಿ ಬಿಟ್ಟರಂತೂ ಯಡ್ಡಿ ಇನ್ನೂ ಆಕ್ರಮಣಕಾರಿಯಾಗಿ ರಾಜ್ಯಾದ್ಯಂತ ಓಡಾಡಬಲ್ಲರೆಂಬುದೂ ಗೌಡರಿಗೆ ಅರ್ಥವಾಗಿದೆ. ಹಾಗಾಗಿ ಬಿಜೆಪಿಗೆ ಕೆಲದಿನಗಳ ಕಾಲ ಸಿಎಂಗಿರಿ ಹಸ್ತಾಂತರವಾಗಲಿ ಆದರೆ ಯಡ್ಡಿ ಬದಲು ಹೊಂದಿಕೊಂಡು ಹೋಗುವವರು- ಅಂದರೆ ಜೆಡಿಎಸ್ ಹಿತಾಸಕ್ತಿಗಳಿಗೆ ಧಕ್ಕೆ ಬಾರದಂತೆ ನಡೆದುಕೊಳ್ಳುವವರು- ಸಿಎಂ ಆಗಲಿ ಎಂಬುದು ಗೌಡರ ಇರಾದೆ.

ಅಕ್ಟೋಬರ್ 1ರ ಸಂಜೆ ನಡೆಯಲಿರುವ ಜೆಡಿಎಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಈ ವಿಚಾರಗಳು

**ಜೆಡಿಎಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ 'ಕುಮಾರಸ್ವಾಮಿಯೇ ಮುಖ್ಯಮಂತ್ರಿಯಾಗಿ ಮುಂದುವರೆಯಲಿ, ಸ್ಥಳೀಯ ಸಂಸ್ಥೆ ಚುನಾವಣಾ ಫಲಿತಾಂಶ ಕೂಡ ಕುಮಾರಸ್ವಾಮಿ ಕೆಲಸಕ್ಕೆ ಜನ ಆಶೀರ್ವಾದ ಮಾಡಿದ್ದಾರೆ ಎಂಬುದಾಗಿದೆ' ಎಂದು ಬಿಂಬಿಸಲಾಗುತ್ತದೆ. ಆದರೆ 'ಕೊಟ್ಟ ಭಾಷೆಗೆ ತಪ್ಪಲಾರೆನು' ಎಂದು ಕುಮಾರಸ್ವಾಮಿ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡುವ ನಿರ್ಧಾರ ಪ್ರಕಟಿಸುತ್ತಾರೆ. ಆದರೆ ಅವರ ರಾಜೀನಾಮೆ ತಲುಪುವುದು ರಾಜ್ಯಪಾಲ ರಾಮೇಶ್ವರ ಠಾಕೂರ್‌ಗಲ್ಲ, ಬದಲಾಗಿ ಜೆಡಿಎಸ್ ವರಿಷ್ಠ ದೇವೇಗೌಡರಿಗೆ!**
**ಅಲ್ಲಿಂದಾಚೆಗೆ ಮುಂದಿನ ಆಗುಹೋಗುಗಳೆಲ್ಲಾ ಗೌಡರ ಕೈಯಳತೆಗೆ ಹೋಗುತ್ತದೆ.**

### ಬಿಳಿದಾಳೆ ಈಶ

ಖಂಡಿತಾ ಚರ್ಚೆಯಾಗಲಿವೆ. ಅಲ್ಲಿ ಬಹುತೇಕ ಶಾಸಕರು 'ಕುಮಾರಸ್ವಾಮಿಯೇ ಮುಖ್ಯಮಂತ್ರಿಯಾಗಿ ಮುಂದುವರೆಯಲಿ, ಸ್ಥಳೀಯ ಸಂಸ್ಥೆ ಚುನಾವಣಾ ಫಲಿತಾಂಶ ಕೂಡ ಕುಮಾರಸ್ವಾಮಿ ಕೆಲಸಕ್ಕೆ ಜನ ಆಶೀರ್ವಾದ ಮಾಡಿದ್ದಾರೆ ಎಂಬುದಾಗಿದೆ' ಎಂದು ಬಿಂಬಿಸಲಾಗುತ್ತದೆ. ಆದರೆ 'ಕೊಟ್ಟ ಭಾಷೆಗೆ ತಪ್ಪಲಾರೆನು' ಎಂದು ಕುಮಾರಸ್ವಾಮಿ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡುವ ನಿರ್ಧಾರ ಪ್ರಕಟಿಸುತ್ತಾರೆ. ಆದರೆ ಅವರ ರಾಜೀನಾಮೆ ತಲುಪುವುದು ರಾಜ್ಯಪಾಲ ರಾಮೇಶ್ವರ ಠಾಕೂರ್‌ಗಲ್ಲ, ಬದಲಾಗಿ ಜೆಡಿಎಸ್ ವರಿಷ್ಠ ದೇವೇಗೌಡರಿಗೆ!

ಅಲ್ಲಿಂದಾಚೆಗೆ ಮುಂದಿನ ಆಗುಹೋಗುಗಳೆಲ್ಲಾ ಗೌಡರ ಕೈಯಳತೆಗೆ ಹೋಗುತ್ತದೆ. ಬಿಜೆಪಿಗೆ ಗೌಡರ ಷರತ್ತುಗಳು ಏನೇನಿರುತ್ತವೆಂಬ ಲೆಕ್ಕಾಚಾರ ಹಾಗೂ ಮುಂದಿನ ಸಿಎಂ ಯಾರೆಂಬ ಬಗ್ಗೆ ಅಂದಾಜಿನ ಸಾಧ್ಯತೆಗಳು ಹೀಗಿವೆ.

## ಸಾಧ್ಯತೆ 1: ಜಗದೀಶ್ ಶೆಟ್ಟರ್ ಮತ್ತು ಡಿ. ಮಂಜುನಾಥ್

ಗೌಡರು ಲಿಂಗಾಯತ ಯಡ್ಡಿಗೆ ಅವಕಾಶ ತಪ್ಪಿಸಿದರೆಂಬ ಅಪವಾದ ಇದರಿಂದ ನಿವಾರಣೆಯಾಗುತ್ತದೆ. ಶೆಟ್ಟರ್ ಸಹ ಲಿಂಗಾಯತರೇ ಆಗಿರುವುದು, ಯಡ್ಡಿಯಷ್ಟು ಆಕ್ರಮಣಕಾರಿ ಪ್ರವೃತ್ತಿ ಹೊಂದಿಲ್ಲದಿರುವುದು ಇದಕ್ಕಿರುವ ಒಂದು ಕಾರಣ. ಅಲ್ಲದೆ ಯಡ್ಡಿ ವಿರೋಧಿಗಳಾದ ಅನಂತ್‌ಕುಮಾರ್ ಗುಂಪಿಗೂ ಇದು ಒಪ್ಪಿಗೆಯಾಗುತ್ತದೆ. ಆದರಿಂದಾಗಿ ಬಿಜೆಪಿಯೊಳಗೆ ಹೊಗೆಯಾಡುತ್ತಿರುವ ಗುಂಪುಗಾರಿಕೆ, ಒಳಜಗಳವನ್ನು ಜೀವಂತವಾಗಿಟ್ಟಂತೆಯೂ ಆಗುತ್ತದೆ.

ನಾಳೆ ಗೌಡರ ಕೃಪೆಯಿಂದ ಸಿಎಂ ಆದಲ್ಲಿ ಶೆಟ್ಟರ್ ಗೌಡರ ಅಂಕೆಯಲ್ಲೇ ಇರುತ್ತಾರೆ. ಇದರೊಂದಿಗೆ ಮಾದಿಗ ಸಮುದಾಯದ ಡಿ. ಮಂಜುನಾಥ್‌ರನ್ನು ಉಪಮುಖ್ಯಮಂತ್ರಿ ಮಾಡಿದರೆ ಬಹುಸಂಖ್ಯಾತ ದಲಿತರ ವಿಶ್ವಾಸವನ್ನು ಜೆಡಿಎಸ್ ಗಳಿಸಬಲ್ಲದು ಎಂಬುದು ಗೌಡರ ಮುಂದಾಲೋಚನೆ. ಸಿದ್ಧರಾಮಯ್ಯ ಉಚ್ಚಾಟನೆಯಿಂದ ಜೆಡಿಎಸ್‌ಗೆ ನಷ್ಟವಾಗಿರುವ ಕುರುಬರ ಓಟ್ ಬ್ಯಾಂಕ್‌ಅನ್ನು ಮಂಜುನಾಥ್ ಮೂಲಕ ಭರ್ತಿ ಮಾಡಿಕೊಳ್ಳಬಹುದಲ್ಲ.


## ಸಾಧ್ಯತೆ 2: ಈಶ್ವರಪ್ಪ ಮತ್ತು ಪ್ರಕಾಶ್

ಕುರುಬ ಸಮುದಾಯ ಸೇರಿದಂತೆ ಹಿಂದುಳಿದ ವರ್ಗಗಳ ವಿಶ್ವಾಸ ಮತ್ತೆ ಗೆದ್ದುಕೊಳ್ಳುವುದು, ಎಂ.ಪಿ. ಪ್ರಕಾಶ್‌ರನ್ನು ಡಿಸಿಎಂ ಆಗಿಸುವ ಮೂಲಕ ಲಿಂಗಾಯತರಲ್ಲಿ ಕೆಲವರಿಗೆ ಉಂಟಾಗಬಹುದಾದ ಅಸಮಾಧಾನವನ್ನು (ಯಡ್ಡಿ ಕಾರಣಕ್ಕೆ) ಕೊಂಚ ಶಮನಗೊಳಿಸುವ ಪ್ರಯತ್ನ ಮಾಡುವುದು ಈ ಸಾಧ್ಯತೆಯ ಹಿಂದಿರುವ ಲೆಕ್ಕಾಚಾರ. ಈಶ್ವರಪ್ಪರನ್ನೇ ಆರಿಸಿಕೊಂಡರೆ ಆತನೂ ಗೌಡರ ಮಾತಿಗೆ ಎದುರಾಡುವ ಪೈಕಿಯಲ್ಲ, ಪಕ್ಷ ಸಿದ್ಧಾಂತಗಳಿಗೆ ಎಳ್ಳುನೀರು ಬಿಟ್ಟು ಚೆನ್ನಾಗಿ ದುಡ್ಡು ಬಾಚಿಕೊಂಡಿರುವ ಈಶ್ವರಪ್ಪ ತಾನು ಕದ್ದಿದ್ದನ್ನು ಮರೆಮಾಚಿಕೊಳ್ಳುವಷ್ಟು ಚಾಣಾಕ್ಷನಲ್ಲ, ಜೊತೆಗೆ ಇತರರ ಕಳ್ಳತನ ಪತ್ತೆಹಚ್ಚಬಲ್ಲ ಚುರುಕುಮತಿಯೂ ಅಲ್ಲ.

ಗೌಡರಿಗೆ ಈಗ ಬೇಕಿರುವುದು ಇಂಥವರೇ ತಾನೆ?

ಬಿಜೆಪಿ ಈ ಪ್ರಸ್ತಾಪಕ್ಕೆ ವಿರೋಧ ವ್ಯಕ್ತಪಡಿಸಿದರೆ ಆ ಪಕ್ಷ ಶೂದ್ರ ವಿರೋಧಿ ಎಂದಾಗುತ್ತದೆ ಎಂಬುದೂ ಸತ್ಯ ತಾನೆ.

## ಸಾಧ್ಯತೆ 3: ರಮೇಶ್ ಜಿಗಜಿಣಗಿ



"ಏನ್ ಸಾರ್, ಹೀಗೊಂದು ಮಾತು ಕೇಳಿಬರುತ್ತಿದೆಯಲ್ಲ" ಅಂತ ಕೇಳಿದರೆ ಜಿಗಜಿಣಗಿ ಸಾಹೇಬರು "ಹೌದೇನ್ರಿ.... realiable source ಸಾ' ಅಂ... ಸುಖಾಸುಮ್ಮನೆ ಆಶ್ಚರ್ಯ ನಟಿಸುತ್ತಾರೆ. ಮಾದಿ... ಜನಾಂಗದ ನಾಯಕ, ಹಾಲಿ ಚಿಕ್ಕೋಡಿಯ ಬಿಜೆ... ಸಂಸದರಾಗಿರುವ ಜಿಗಜಿಣಗಿಯವರಿಗೆ ಸಚಿವ ಗೋವಿಂ...



ಕಾರಜೋಳರೊಂದಿಗೆ ದೇವೇಗೌಡ


ಕಾರಜೋಳ ಗುರುವಿದ್ದಂತೆ. ಈ ಕಾರಜೋಳ ಬಿಜೆಪಿಯ... ಳಗಿದ್ದರೂ ದೇವೇಗೌಡರ ದಾಳದಂತೆ ಕೆಲಸ ಮಾಡು... ಪೈಕಿ. ಕಳೆದ ತಿಂಗಳಲ್ಲಿ ಕಾರಜೋಳ ಗೌಡರ ಮನೆ... ಹೋಗಿದ್ದಾಗ ನಡೆದ ಮಾತುಕತೆಯಲ್ಲಾ ಈ ಸಾಧ್ಯತೆ... ಸಂಬಂಧಿಸಿದ್ದೇ ಆಗಿತ್ತು, ಮಾದಿಗ ಜನಾಂಗದವರೊಬ್ಬರ... ಮುಖ್ಯಮಂತ್ರಿ ಮಾಡಬೇಕೆಂದು ದೇವೇಗೌಡ ... ಮಾಡಿದರೆ ಬಿಜೆಪಿ ಪರಿಸ್ಥಿತಿ ಹೇಗಾಗಬಹುದೋ... ಯೋಚಿಸಿ. ಬೇಡ ಅಂದರೆ ದಲಿತ ವಿರೋಧಿಪ... ಆಗಲಿ ಅಂದರೂ ಅದರ credit ಸಿಗುವುದು... ಗೌಡರಿಗೇ ವಿನಃ ಬಿಜೆಪಿಗಲ್ಲ. ಇದರಲ್ಲಿ ಗೌಡರಿಗಿರು... ರಿಸ್ಕ್, ಏನೆಂದರೆ ಲಿಂಗಾಯತ ಯಡ್ಡಿಗೆ ಸಿಎಂಗಿ... ತಪ್ಪಿಸಿದಾರೆಂಬ ಅಪವಾದ ಬ... ವುದು. ಆದನ್ನು ಡಿಸಿಎಂ ಹು... ಮೂಲಕ ಸರಿಪಡಿಸಿಕೊ... ಬಹುದು. ತೀರಾ ಮಿತಿ ಮೀರಿ... ಲಿಂಗಾಯತರ ಬೆಂಬಲ ಸಿ... ದ್ದರೂ ಒಕ್ಕಲಿಗ, ಹಿಂದುಳಿ... ವರ್ಗ, ಮಾದಿಗ ಸಮುದಾ... ಹಾಗೂ ಮುಸ್ಲಿಮರ ಓಟುಗಳ... ನೆಚ್ಚಿ ಜೊತೆಗೆ ರಾಶಿರಾಶಿ ದುಡ್ಡು... ಚೆಲ್ಲಿ ಚುನಾವಣಾ ರಾಜಕೀ... ನಡೆಸಬಹುದೆಂಬ ಭಂಡ ಧೈರ್ಯ... ಗೌಡರಿಗೆ ಬಂದುಬಿಟ್ಟಿದೆ.

ಇದರಲ್ಲಿ ಯಾವುದೂ ಕೈಗೂ... ದದೆ ಹೋದರೆ ಹಳೇ ಗಂ...

...ಾವರೇ ಗತಿ ಎಂಬಂತೆ ಯಡಿಯೂರಪ್ಪನೆಂಬ ...ನಿವಾರ್ಯ ಅಯ್ಕೆ ಗೌಡರ ಮುಂದಿದೆ. ಅಂತ ...ಂದರ್ಭವೇನಾದರೂ ಬಂದೇಬಿಟ್ಟರೆ ಗೌಡರು ಅದಕ್ಕೊ ...ಂದು ಮದ್ದು ಅರೆದಿಟ್ಟುಕೊಂಡಿದ್ದಾರೆ.

ಅಂತಿಮ ಅನಿವಾರ್ಯ ಸಾಧ್ಯತೆ ಯಡ್ಡಿ ಮತ್ತು ಕುಮಾರಸ್ವಾಮಿ.

ಪರಸ್ಪರ ಕುರ್ಚಿ ಬದಲಾಯಿಸಿಕೊಳ್ಳುವ ಈ ...ರ್ಕೆಸ್‌ನಲ್ಲೂ ಗೌಡರ ದುರಾಲೋಚನೆಯಿದೆ. ಇದರಂತೆ ಯಡ್ಡಿ ಸಿಎಂ ಆಗಲೇಬೇಕಾದ ಸಂದರ್ಭ ಬಂದರೆ ...ತ ಕುಮಾರಸ್ವಾಮಿ ಗಳಿಸಿದ್ದ ...ಾಪ್ಯುಲಾರಿಟಿ ಮೀರಿಸುವಂತೆ ...ಿಮಿಕ್ ಮಾಡಬಲ್ಲಾತ. ಯಡ್ಡಿಯಂತೂ ಸಿಎಂ ಆದೇಟಿಗೆ ...ಆಕ್ರಮಣಕಾರಿಯಾದ ರಭಸದ ...ಆಡಳಿತ ಶೈಲಿ ಅನುಸರಿಸುವ ...ಾಧ್ಯತೆ ಇದೆ. ಈಗ ಸಿಗುವ ಕೆಲ ...ಂಗಳ ಅಧಿಕಾರ ಬಳಸಿಕೊಂಡೇ ಮುಂದಿನ ಎಲೆಕ್ಷನ್‌ನಲ್ಲಿ ಬಿಜೆಪಿ ...ಹೆಚ್ಚು ಸೀಟ್ ಗೆಲ್ಲುವಂತೆ ಮಾಡಿ ...ಆಮೇಲೂ ತಾನೇ ಸಿಎಂ ಆಗಿ ಮುಂದುವರೆಯಲು ಯಡ್ಡಿ ...ಯೋಚಿಸಿಯೇ ತೀರುತ್ತಾರೆ. ...ಗೌಡರು ಅಂತದ್ದನ್ನು ನಿಯಂತ್ರಿಸಲಾ...ರರು. ಹಾಗಾಗಿ ಯಡ್ಡಿಗೆ ಅಡೆತಡೆ ...ಸೃಷ್ಟಿಸುವ ಕಷ್ಟದ ಕೆಲಸಕ್ಕಿಂತ ಯಡ್ಡಿಯ ಸಮಕ್ಕೇ ...ಮಿಂಚಬಲ್ಲವರು ಜೆಡಿಎಸ್‌ನಿಂದ ಡಿಸಿಎಂ ಆಗ...ಬೇಕಾಗುತ್ತದೆ. ಅದಕ್ಕೆ ಕುಮಾರಸ್ವಾಮಿಯೇ ಸರಿಯಾದ ...ನಾಯಕನೆಂಬ ನಂಬಿಕೆ ಬಹುತೇಕ ಜೆಡಿಎಸ್ ...ಶಾಸಕರಿಗಿದೆ. ಹಣಕಾಸು, ಅಬಕಾರಿಯಂಥ ಪ್ರಮುಖ ...ಖಾತೆಗಳಿರುವ ಉಪಮುಖ್ಯಮಂತ್ರಿ ಇನ್ನಿತರ ಇಲಾಖೆ...ಗಳನ್ನು ಹತೋಟಿಯಲ್ಲಿಟ್ಟುಕೊಳ್ಳಬಹುದು. ಹೇಗೋ ಮುಂದಿನ ಮಾರ್ಚ್‌ನವರೆಗೂ ಇದನ್ನೇ ನಡೆಸಿ ಕುಮಾರಸ್ವಾಮಿ ಮೂಲಕ ಒಂದು ನಾಟಕೀಯ ರೈತ ಪರ, ದಲಿತ ಪರ, ಮುಸ್ಲಿಂ ಪರ ಬಜೆಟ್ ಮಂಡಿಸಿ ಅದನ್ನೇ ಟ್ರಂಪ್ ಕಾರ್ಡ್ ಆಗಿ ಬಳಸಿಕೊಂಡರೆ ಹೇಗೆಂದು ಜೆಡಿಎಸ್ ಯೋಚಿಸುತ್ತಿದೆ. ಜೊತೆಗೆ ಯಡ್ಡಿ ಸಿಎಂ ಆಗಿರುವಾಗಲೇ ಹಲವೆಂಟು ಜನಪರ ಕಾರ್ಯಕ್ರಮಗಳ ಪ್ರಸ್ತಾಪವಿಟ್ಟು, ಬಿಜೆಪಿಯ ಕೋಮುವಾದಿ ಅಜೆಂಡಾಗಳಿಗೆ ವಿರೋಧದ ದನಿ ಎತ್ತುತ್ತಾ ಜೆಡಿಎಸ್‌ನ ಅಸ್ತಿತ್ವ ಉಳಿಸಿ ಬೆಳೆಸುವ ಚಿಂತನೆ ಇದರಲ್ಲಿದೆ.




ಒಂದು ವೇಳೆ ಯಡ್ಡಿ ಸಿಎಂ ಆದರೂ ಸಹ ಅವರು 2008 ರ ಮಾರ್ಚ್‌ನಿಂದಾಚೆಗೆ ಅಲ್ಲಿರಲು ಗೌಡರಂತೂ ಬಿಡುವುದಿಲ್ಲ.

ಈಗಿನ ಇಡೀ ರಾಜಕೀಯ ಚಿತ್ರಣ ಒಂದು ರೀತಿ social engineering ಥರ ಇದೆ. ಉತ್ತರ ಪ್ರದೇಶದಲ್ಲಿ ಮಾಯಾವತಿ ಮಾಡಿದ್ದನ್ನೇ ಗೌಡರು ಕರ್ನಾಟಕ ರಾಜಕೀಯದಲ್ಲಿ ಬಳಸಲು ನೋಡುತ್ತಿದ್ದಾರೆ. ಯಾವುದೇ ಕಾರಣಕ್ಕೂ, ಎಂತದ್ದೇ ಸಂದರ್ಭ ಬಂದರೂ ಬಿಜೆಪಿಗಳು ಜೆಡಿಎಸ್ ಮೀರಿಸಿ ಬೇರು ಬಿಡಲು ಗೌಡರು ಬಿಡುವುದಿಲ್ಲ. ಅಷ್ಟೇ ಅಲ್ಲ, ಗೌಡರಿರುವವರೆಗೂ ಯಾವುದೇ ಹೊಸ ರಾಜಕೀಯ ಬೆಳವಣಿಗೆಗಳಾದರೂ ಮೊದಲ ದಾಳ ಉರುಳಿಸುವುದು ಗೌಡರೇ ಆಗಿರುತ್ತಾರೆ, ಅಂತಿಮ ಫಲಿತಾಂಶ ಕೂಡ ತಮ್ಮ ಲೆಕ್ಕಾಚಾರದಂತೆ ಇರಬೇಕೆಂದು ಗೌಡ ಇಚ್ಛಿಸುತ್ತಿದ್ದಾರೆ.

ಹಾಗಾಗಿ ಯಡ್ಡಿ ಹಾದಿ ಅಷ್ಟು ಸುಗಮವಂತೂ ಅಲ್ಲ. ■

## ಸೊಂಭೇರಿ ಕಾಂಗ್ರೆಸ್ ಲೀಡರ್‌ಗಳು



ರಾಜ್ಯ ಕಾಂಗ್ರೆಸ್‌ನಲ್ಲಿರುವ ಎಲ್ಲಾ ಅತಿರಥ ಮಹಾರಥರಿಗಿದ್ದಾ, ಸ್ಥಳೀಯ ಸಂಸ್ಥೆ ಚುನಾವಣೆ ಮುಖಭಂಗ ಮಾಡಿದೆ. ಖರ್ಗೆ, ಧರಂಸಿಂಗ್, ಡಿಕೆ, ಮಾರ್ಗರೇಟ್ ಆಳ್ವ, ಅಸ್ಲರ್, ಸಿದ್ದರಾಮಯ್ಯ, ಜಾಲಪ್ಪ... ಹೀಗೆ ಸಾಲುಸಾಲು ನಾಯಕರ ಸ್ವಕ್ಷೇತ್ರಗಳಲ್ಲೇ ಕಾಂಗ್ರೆಸ್ ಹೀನಾಯವಾಗಿ ಸೋತಿದೆ. ಇಲ್ಲೆಲ್ಲಾ ಜೆಡಿಎಸ್ ಅಥವಾ ಬಿಜೆಪಿ ಶಾಸಕರಿಲ್ಲದಿದ್ದಾಗಲೂ ಕಾಂಗ್ರೆಸ್ ಸೋಲುತ್ತದೆಂದರೆ ಏನು ಹೇಳಬೇಕು.

ಒಂದು ವಾಸ್ತವಾಂಶವೇನೆಂದರೆ ಈ ಎಲೆಕ್ಷನ್‌ಗೆಂದು ಜೆಡಿಎಸ್ ಹತ್ತಿರತ್ತಿರ ನಾನ್ನೂರು ಕೋಟಿಯಷ್ಟು ಹಣ ಹರಿಸಿತ್ತು, ಪ್ರತಿ ವಾರ್ಡಿನಲ್ಲೂ ತನ್ನ ಅಭ್ಯರ್ಥಿಗಳಿಗೆ ತಲಾ 5 ಲಕ್ಷದಂತೆ ಪಾರ್ಟಿ ಹಣ ನೀಡಲಾಗಿತ್ತು, ಮತ್ತೊಂದೆಡೆ ಬಿಜೆಪಿಯೂ ಕೋಟಿಗಟ್ಟಲೆ ಖರ್ಚು ಮಾಡಿದೆ. ಆದರೆ ಡಿಕೆ ಬಿಟ್ಟರೆ ಉಳಿದ ಕಾಂಗ್ರೆಸ್ ನಾಯಕರ್‍ಯಾರು ತಮ್ಮ ಬಂಗಲೆಗಳಿಂದಾಚೆಗೆ ಹೆಜ್ಜೆ ಇಡಲಿಲ್ಲ, ಇದರಿಂದ ಪಾರ್ಟಿ ಕಾರ್ಯಕರ್ತರ ಉತ್ಸಾಹವೇ ಬತ್ತಿ ಹೋಗಿತ್ತು, ಕಾಂಗ್ರೆಸ್ ಧೋರಣೆ ಹೇಗಿತ್ತೆಂದರೆ ಹೇಗೂ ಆಳುವ ಪಕ್ಷದ ವಿರುದ್ಧ ಜನಾಭಿಪ್ರಾಯವಿದೆ, ಆ ಓಟುಗಳೆಲ್ಲಾ ಕಾಂಗ್ರೆಸ್‌ಗೆ ಬರದೆ ಇನ್ನೆಲ್ಲಿ ಹೋಗುತ್ತದೆ ಎಂಬುದಾಗಿತ್ತು,

ಆದರೆ ಕಾಂಗ್ರೆಸ್ ವಿರೋಧ ಪಕ್ಷದಂತೆ ಕೆಲಸ ಮಾಡಿದ್ದರೆ ತಾನೆ ಮತದಾರನ ಅರಿವಿಗೆ ಬರುವುದು?

ಕಾಂಗ್ರೆಸ್ ಒಂದೋ ಆಡಳಿತ ಪಕ್ಷವಾಗಷ್ಟೇ ಇರುತ್ತದೆ. ಇಲ್ಲಾ ಅಧಿಕಾರ ತಂತಾನೆ ಕೈಗೆ ಬರುವ ತನಕ ಕಾದುಕೊಂಡು ನಿಷ್ಕ್ರಿಯವಾಗಿ ಬಿದ್ದುಕೊಂಡಿರುತ್ತದೆ. ಇಂಥ ಬೂಸಾ ಪಾರ್ಟಿಗೆ ಜನ ಯಾಕೆ ಓಟು ಹಾಕುತ್ತಾರೆ ಹೇಳಿ?



ಕಾಂಗ್ರೆಸ್‌ನೊಂದಿಗೆ ಮರುಮೈತ್ರಿಗಾಗಿ ದೇವೇಗೌಡ ಅಂಗಲಾಚುತ್ತಿದ್ದರು. ಸಕಾರಣಗಳಿಗಾಗಿಯೇ ಕಾಂಗ್ರೆಸ್ ಅದನ್ನು ಒಪ್ಪಿರಲಿಲ್ಲ, ಬಿಜೆಪಿ-ಜೆಡಿಎಸ್ ಮೈತ್ರಿಕೂಟ ತಂತಾನೆ ಕುಸಿದುಬೀಳಲಿ ಎಂದು ಕಾಂಗ್ರೆಸ್ ಕಾಯುತ್ತಿತ್ತು, ಆದರೆ ಈಗ ಬಹುತೇಕ ಸ್ಥಳೀಯ ಸಂಸ್ಥೆಗಳಲ್ಲಿ ಕೋ-ಜಾ ಪಕ್ಷಗಳು ಒಂದಾದರೆ ಅಲ್ಲೆಲ್ಲಾ ಅವರ ಪಕ್ಷಗಳ ಕೈಗೇ ಅಧಿಕಾರ ಹೋಗಲಿದೆ. ಕಾಂಗ್ರೆಸ್ ಕಣ್ಣುಬಾಯಿ ಬಿಟ್ಟು ಕೂತಿರಬೇಕಷ್ಟೇ.

ವಿಧಾನಸಭಾ ಮಧ್ಯಂತರ ಚುನಾವಣೆಗೆ ತಾನು ಸದಾ ಸಿದ್ಧ ಎಂದು ಹೇಳಿಕೊಂಡೇ ಬರುತ್ತಿದ್ದ ಕಾಂಗ್ರೆಸ್ ಬೊಗಳೆ ಈಗ ಬಂದ್ ಆಗಲೇಬೇಕು, ಹಾಗಿದೆ ಎಲೆಕ್ಷನ್ ಫಲಿತಾಂಶ.

# ಸನ್ಮಾನಿಸಲು ಬಂದ ಮಹಿಳೆಯರಿಗೆ ಯಡ್ಡಿಯಿಂದ ಅವಮಾನ

ಮುಖ್ಯಮಂತ್ರಿ ಹುದ್ದೆಗೇರುವ ಕನಸು ಕಾಣುತ್ತಿರುವ ಬಿಜೆಪಿಯ ದೊಡ್ಡ ನಾಯಕ ಯಡಿಯೂರಪ್ಪ ಯಾನೆ ಯಡ್ಡಿಯ ಬುದ್ಧಿ ಸೀಮಿತದಲ್ಲಿಲ್ಲ ಎಂಬುದಕ್ಕೆ ಇಲ್ಲೊಂದು ಸ್ಪಷ್ಟ ಉದಾಹರಣೆ. ತಮಗೆ ಸನ್ಮಾನ ಮಾಡಲೆಂದು ಮನೆಬಾಗಿಲಿಗೆ ಬಂದ ಮಹಿಳೆಯರನ್ನು ಹೀನಾಯವಾಗಿ ಅವಮಾನಿಸಿರುವ ಚಡ್ಡಿ ಯಡ್ಡಿ ನಾಳೆ ತಾವು ಮುಖ್ಯಮಂತ್ರಿಯಾದರೆ ಹೇಗೆ ವರ್ತಿಸುತ್ತಾರೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಅಂದು ನಡೆದಿದ್ದಿಷ್ಟೇ: ಹೆಬ್ಬಾಳದ ಶಿವಶಕ್ತಿ ಮಹಿಳಾ ಸಂಘದ ಸದಸ್ಯೆಯರು ಸಮ್ಮಿಶ್ರ ಸರಕಾರವು ಸಾರಾಯಿ ಮತ್ತು ಲಾಟರಿ ನಿಷೇಧಿಸಿದ್ದರಿಂದ ಮತ್ತು ಆ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿನ ಮಹಿಳೆಯರ ಬದುಕಿನಲ್ಲಿ ಒಂದಿಷ್ಟು ನೆಮ್ಮದಿ ತಂದಿದ್ದರಿಂದ ಯಡ್ಡಿಯವರನ್ನು ಅಭಿನಂದಿಸಬೇಕೆಂದು ತೀರ್ಮಾನಿಸಿದರು. ಅದಕ್ಕೆ ಕಾಲಾವಕಾಶ ನೀಡುವಂತೆ ಉಪಮುಖ್ಯಮಂತ್ರಿಗಳ ಕಚೇರಿಗೆ ಮನವಿ ಸಲ್ಲಿಸಿ, 27ನೇ ತಾರೀಖಿನಂದು ಯಡ್ಡಿಯ ಭೇಟಿಗೆ ಅನುಮತಿ ಪಡೆದಿದ್ದರು.

ಉಪಮುಖ್ಯಮಂತ್ರಿಗಳನ್ನು ಅಭಿನಂದಿಸಲು ಅವಕಾಶ ಸಿಕ್ಕಿದ್ದರಿಂದ ಥ್ರಿಲ್ ಆದ ಮಹಿಳಾ ಸಂಘದ ಸದಸ್ಯರು, ಈ ಸಂದರ್ಭದಲ್ಲಿ ಅವರಿಗೆ ಸಲ್ಲಿಸಬೇಕಾದ ಕೆಲ ಮನವಿಗಳನ್ನು ಸಿದ್ಧಪಡಿಸಿಕೊಂಡು, ಒಳ್ಳೆ ಸೀರೆ ಉಟ್ಟು, ಬಸವಣ್ಣ, ಅಂಬೇಡ್ಕರ್, ಕಿತ್ತೂರು ರಾಣಿ ಚೆನ್ನಮ್ಮ ಮತ್ತು ರಾಜ್‌ಕುಮಾರ್‌ರವರ ಚಿತ್ರಗಳನ್ನು ಉಡುಗೊರೆಯಾಗಿ ನೀಡಲು ಹೊತ್ತು, ವಿಶೇಷ ಹಾರಗಳನ್ನು ಮಾಡಿಕೊಂಡು ಹೇಳಿದ ಸಮಯಕ್ಕೆ ಸರಿಯಾಗಿ ಉಪ ಮುಖ್ಯಮಂತ್ರಿಗಳ ಮನೆಯೆದುರು ಹಾಜರಾದರು.

ಆದರೆ ರಾಜಕೀಯದ ಗಂಧಗಾಳಿಯೂ ಗೊತ್ತಿಲ್ಲದ, ತಮ್ಮ 'ಜನನಾಯಕರು' ಹೇಗೆ ನಡೆದುಕೊಳ್ಳುತ್ತಾರೆಂಬ ಸ್ಪಷ್ಟ ಚಿತ್ರಣವೂ ಇಲ್ಲದ ಅವರಿಗೆ ಅಲ್ಲೊಂದು ಶಾಕ್ ಕಾದಿತ್ತು.

ಮನೆ ಮುಂದೆ ಕಾದಿದ್ದ ಅವರೆಲ್ಲಗೆ ಹೊರಬಂದು ಯಡ್ಡಿ ದರ್ಶನ ಸಿಗುವುದಿಲ್ಲವೆಂದು ಹೇಳಲಾಯಿತು. ಆದರೆ ಸಮಯ ಸಿಗದಿ... ...ದಿದ್ದರಿಂದ ಅವರನ್ನು ಕೆಲಕ್ಷಣವಾದರೂ ಭೇಟಿ ಆಗಬೇಕೆಂದು ಕೇಳಿಕೊಂಡರು. ಕೊನೆಗೂ ಯಡ್ಡಿ ಪ್ರತ್ಯಕ್ಷರಾದರು. ಹಾಗೆ ಪ್ರತ್ಯಕ್ಷವಾದವರೇ "ಏನು?" ಎಂದು ಗದರಿದರು. "ನಾವು ಅಭಿನಂದಿಸಲು ಬಂದಿದ್ದೇವೆ.



ಸನ್ಮಾನಿಸಲು ಬಂದ ಮಹಿಳೆಯರಿಗೆ ಬೈಯ್ಯುತ್ತಿರುವ ಯಡ್ಡಿ

ಇನ್ನೂ ಅನೇಕ ಮಹಿಳೆಯರು ಬರುತ್ತಿದ್ದಾರೆ" ಎಂದೊಡನೆ "ಅದಕ್ಕೆಲ್ಲಾ ಟೈಮಿಲ್ಲ" ಎಂದು ಸಿಡುಕುತ್ತಾ ಹೊರಟೇಬಿಟ್ಟರು.

ಅದೂ ಎಲ್ಲಿಗೆ ಗೊತ್ತೆ? ಧರ್ಮಸ್ಥಳಕ್ಕೆ. ಮುಖ್ಯಮಂತ್ರಿಯಾಗುವ ಅವಕಾಶ ತಪ್ಪದಿರಲೆಂದು ವಿಶೇಷ ಹೋಮ ಮಾಡಿಸಲಿಕ್ಕೆ. "ನನಗೆ ಬೇರೆ ಕೆಲಸ ಇದೆ. 9.30 ಹೆಲಿಕಾಪ್ಟರ್ ಹೊರಡಬೇಕು" ಎಂದೆಲ್ಲಾ ಗೊಣಗುತ್ತ, ಸಿಡುಕುತ್ತಾ ಹೊರಟ ಯಡ್ಡಿಗೆ ಅಲ್ಲಿದ್ದ ಮಹಿಳೆಯರು ಹಿಡಿಶಾಪಹಾಕಿದ್ದು ಕೇಳಿಸಲೇ ಇಲ್ಲ, ಕಾರನ್ನೇರಿದ ಯಡ್ಡಿಯನ್ನು ತಡೆದ ಮಹಿಳೆಯರು ಕೊನೇ ಪಕ್ಷ ತಮ್ಮ ಮನವಿ ಪತ್ರವನ್ನಾದರೂ ಸ್ವೀಕರಿಸುವಂತೆ ಕೇಳಿಕೊಂಡರು. ಅಷ್ಟೊತ್ತಿಗಾಗಲೇ ಕಾರಿನಲ್ಲಿ ಕೂತಿದ್ದ ಯಡ್ಡಿ ಅದನ್ನು ಕೈಗೆ ತಗೆದುಕೊಂಡು ಮಹಿಳೆಯರ ಕಣ್ಣಮುಂದೆಯೇ ಅವರ ಮನವಿಪತ್ರವನ್ನು ಅಸಡ್ಡೆಯಿಂದ ಬಿಸಾಡಿದರು. ಸಹಜವಾಗಿಯೇ ಇದು ಮಹಿಳೆಯರನ್ನು ಕೆರಳಿಸಿತು. "ನಾವು ಯಾವ ಸ್ವಾರ್ಥ ಬೇಡಿಕೆಯನ್ನು ಇಟ್ಟುಕೊಂಡು ಬಂದಿಲ್ಲ. ನಮ್ಮ ಮನವಿ ಪತ್ರವನ್ನು ಹೀಗೇಕೆ ಬಿಸಾಡುತ್ತೀರಿ? ಜನರ ಮನವಿ ಬಗ್ಗೆ ನಿಮಗೆ ಗೌರವ ಎಂಬುದೇ ಇಲ್ಲವೇ?" ಎಂದು ತಕರಾರೆತ್ತಿದರು. ಆಗಲಾದರೂ ಯಡ್ಡಿ ವಿವೇಚನೆಯಿಂದ ವರ್ತಿಸಬಹುದಿತ್ತು. ಆದರೆ ಆತನಿಗೆ ಅಂತಹದ್ದೊಂದು ಇದ್ದರೆ ತಾನೆ?

"ನೀವು ಹೇಳಿದ್ದನ್ನು ಕೇಳಿಸಿಕೊಂಡು ನಾನು ಕೆಲ್ಸ ಮಾಡಕ್ಕಾಗಲ್ಲ" ಎಂದು ಮನವಿ ಮಾಡಿದವರನ್ನೇ ಮತ್ತೆ ಗದರಿಸಿದರು. ಅಷ್ಟಕ್ಕೂ ಈ ಮಹಿಳೆಯರು ಕೇಳಿದ್ದಾದರೂ ಏನು? ಮುಂದಿನ ಸಚಿವ ಸಂಪುಟದಲ್ಲಾದರೂ ಮಹಿಳೆಯರಿಗೆ ಅವಕಾಶ ಕೊಡಿ, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಸವಣ್ಣನ ಹೆಸರಿಡಿ, ಡಿ. ರಾಜ್‌ಕುಮಾರ್‌ಗೆ ಸ್ಮಾರಕ ನಿರ್ಮಿಸಿ ಎಂದಷ್ಟೇ ಅವರು ಕೇಳಿದ್ದು. ಯಾವುದೇ ವರ್ಗಾವಣೆ, ಕಾಂಟ್ರಾಕ್ಟು ಇತ್ಯಾದಿಗಳನ್ನು ಬಯಸಿ ಅವರು ಬಂದಿರಲಿಲ್ಲ, ಆದರೆ ಅಂತಹ ಘನಕಾರ್ಯಗಳಲ್ಲೇ ತೊಡಗಿರುವ ಯಡ್ಡಿ ಮತ್ತು ಆತನ ಸಂತತಿಗೆ ಅದೆಲ್ಲ ಅರ್ಥವಾಗಬೇಕಲ್ಲ...

ಯಡ್ಡಿ ಹೊರಟುಹೋದ ಮೇಲೆ ಮನೆಮುಂದೆ ತಮಗೆ ಅವಮಾನ ಮಾಡಿದ್ದಕ್ಕೆ ಶಪಿಸುತ್ತಾ ನಿಂತಿದ್ದ ಈ ಮಹಿಳೆಯರನ್ನು ಮಾತನಾಡಿಸಲು ಬಂದ ಯಡ್ಡಿಯ ಮಗಳು ಅರುಣಾದೇವಿಯಾದರೂ ಒಂದಿಷ್ಟು ಸಮಾಧಾನ ಮಾಡಬಹುದಿತ್ತು. ಅದನ್ನೂ ಮಾಡದೆ, ಅಪ್ಪನಿಗೆ ತಾನು ತಕ್ಕ ಮಗಳು ಎಂದು ತೋರಿಸಿಕೊಟ್ಟಳು.

ತಮ್ಮನ್ನು ಭೇಟಿ ಮಾಡಲು ಬಂದವರನ್ನು ಸಹನೆಯಿಂದ ಮಾತನಾಡಿಸಲು ಬಾರದ ಈತ ಅದೆಂತಹ ಜನನಾಯಕ ಎಂದು ಮಹಿಳೆಯರು ಹಿಡಿಶಾಪ ಹಾಕುತ್ತಾ ಪ್ರೆಸ್‌ಕ್ಲಬ್‌ಗೆ ಹೋಗಿ ಅಲ್ಲಿ ಯಡ್ಡಿಯ ವಿರುದ್ಧ ಧಿಕ್ಕಾರ ಕೂಗಿ ಪತ್ರಿಕಾಗೋಷ್ಠಿ ಕೂಡ ನಡೆಸಿದರು. ಉಪ ಮುಖ್ಯಮಂತ್ರಿಯಾಗಿರುವಾಗಲೇ ಹೀಗೆ ನಡೆದುಕೊಳ್ಳುವ ಯಡ್ಡಿ ಮುಂದೆ ಮುಖ್ಯಮಂತ್ರಿಯಾದರೆ ಏನು ಗತಿ ಎಂದು ಈ ಮಹಿಳೆಯರು ಪ್ರಶ್ನಿಸುತ್ತಿದ್ದದ್ದು ಅವರ ಮುಗ್ಧತನಕ್ಕೆ ಸಾಕ್ಷಿಯಾಗಿತ್ತು.



ಒಬ್ಬ ಮನವಿ ಪತ್ರವನ್ನು ಎಸೆಯುತ್ತಿರುವುದು

ಅಂದಹಾಗೆ ಅವತ್ತು ಯಡ್ಡಿಯಿಂದ ಅವಮಾನಕ್ಕೆ ಒಳಗಾಗಿ ತಮ್ಮ ಮನೆಗಳಿಗೆ ಹಿಂದಿರುಗಿದ ಮಹಿಳೆಯರೊಂದಿಗೆ ಅವರು ತಂದಿದ್ದ ಅಂಬೇಡ್ಕರ್, ರಾಜ್‌ಕುಮಾರ್, ಬಸವಣ್ಣ ಮತ್ತು ಕಿತ್ತೂರು ರಾಣಿ ಚೆನ್ನಮ್ಮನ ಫೋಟೋಗಳೂ [illegible].

ಇದು ಯಡ್ಡಿಯನ್ನು ಕುರಿತಂತೆ ಯಾವ ಪ್ರಸಂಗವನ್ನು ನೆನಪಿಸುತ್ತಿದೆ ಹೇಳಿ.

ಇಂತಹ ಮನುಷ್ಯ ಸದ್ಯದಲ್ಲೇ ಈ ರಾಜ್ಯದ ಮುಖ್ಯ ಮಂತ್ರಿಯಾಗಲಿದ್ದಾರೆ ಈ ರಾಜ್ಯಕ್ಕೆ ಇನ್ನೇನು ಬರಬೇಕೋ... ■

# ಭಜರಂಗಿಗಳ ಕರಪತ್ರ ಕರಾಮತ್ತು!

ಮಂಗಳೂರು

ಈ ಬಾರಿಯ ಮಂಗಳೂರು ಮ.ನ.ಪಾ ಚುನಾವಣೆಯ ಸ್ಪರ್ಧಿಗಳ ಪೈಕಿ 'ಟಾಕ್ ಆಫ್ ದಿ ಟೌನ್' ಆಗಿ ಮಿಂಚಿದ್ದು ಮಾತ್ರ ಬಿಜೆಪಿ ಬಂಡಾಯಗಾರ್ತಿ ಮರಿಯಮ್ಮ ಥೋಮಸ್. ಬಿಜೆಪಿಯ ಕಾರ್ಪೊರೇಟರ್ ಆಗಿ, ವಿರೋಧ ಪಕ್ಷದ ನಾಯಕಿಯಾಗಿ ಕೌನ್ಸಿಲ್ ಸಭೆಗಳಲ್ಲಿ ಹೂಂಕರಿಸುತ್ತಾ ಗಮನ ಸೆಳೆಯುತ್ತಿದ್ದ ಈ ಮಲಯಾಳಿ ಕಿರಿಸ್ತಾನ ಹೆಂಗಸಿಗೆ ಬಿಜೆಪಿಯೇ ಮುಳುಗು ನೀರು ತರಲು ಯತ್ನಿಸಿತ್ತು.

ಆರೋಗ್ಯ ಇಲಾಖೆಯಲ್ಲಿನ ಭ್ರಷ್ಟ ಅಧಿಕಾರಿಯೋರ್ವನನ್ನು ತರಾಟೆಗೆ ತೆಗೆದುಕೊಳ್ಳುವ ಭರದಲ್ಲಿ ಈಕೆ ರಾಣಿ ಅಬ್ಬಕ್ಕನಂತೆ ಅಬ್ಬರಿಸುತ್ತಾ ಆತನ ಕೊರಳಪಟ್ಟಿಗೆ ಕೈ ಹಾಕಿ ಜಗ್ಗಿದಾಗ ಒಳಗಿದ್ದ ಜನಿವಾರವೇ ಕಡಿದು ಹೋದದ್ದು ಪ್ರಮಾದವಾಯಿತು. ಆ ಭಟ್ಟ ಸೀದಾ ಆರ್‌ಎಸ್‌ಎಸ್ ಕಮ್ಯಾಂಡರ್ ಕಲ್ಲಡ್ಕ ಪ್ರಭಾಕರ ಭಟ್ಟರಲ್ಲಿಗೆ ಧಾವಿಸಿ ಗೋಳೋ ಎಂದು ಅತ್ತ. ಅದಕ್ಕೆ ಹಲವು ದಿನಗಳ ಮುನ್ನ ಕುಂದಾಪುರದಲ್ಲಿ ಪಾದ್ರಿಗಳ ಮೇಲಿನ ಹಲ್ಲೆ ಪ್ರಕರಣದ ವಿರುದ್ಧದ ಪ್ರತಿಭಟನಾ ಸಭೆಯಲ್ಲಿ ಮರಿಯಮ್ಮ ಭಾಗವಹಿಸಿದ್ದೇ ಭಟ್ಟರಿಗೆ ಕೋಪತಂದಿತ್ತು. ಇದಕ್ಕೆ ಸರಿಯಾಗಿ ಈ ಜನಿವಾರ ಪ್ರಕರಣ ಬೆಂಕಿಗೆ ತುಪ್ಪ ಸುರಿದಂತಾಯಿತು. ಆದರ ಫಲವೇ ಈ ಬಾರಿ ಮರಿಯಮ್ಮನಿಗೆ ಬಿಜೆಪಿಯಿಂದ ಟಿಕೆಟ್ ನಿರಾಕರಣೆ.

ಇದರಿಂದ ಕೆರಳಿದ ಮರಿಯಮ್ಮ ಬಿಜೆಪಿಗೆ ಸೆಡ್ಡು ಹೊಡೆದು ಪಕ್ಷೇತರ ಅಭ್ಯರ್ಥಿಯಾಗಿ ಪದವು ವಾರ್ಡ್‌ನಿಂದ ಕಣಕ್ಕಿಳಿದಳು. ಆನಂತರ ಪದವು ವಾರ್ಡ್‌ನ ಕ್ರಿಶ್ಚಿಯನ್ ಮನೆಗಳ ಮುಂದೆ ಮತ ಯಾಚಿಸಲು ನಿಂತ ಮರಿಯಮ್ಮ ಪಾಪ ನಿವೇದನೆಯ ಶೈಲಿಯಲ್ಲಿ "ಹೌದು ಈ ಭಜರಂಗಿಗಳ ಮನಪರಿವರ್ತನೆ ಮಾಡಲು ಸಾಕಷ್ಟು ಪ್ರಯತ್ನಿಸಿದೆ. ಆದರೆ ಅವರು ಕೇಳಲಿಲ್ಲ. ಈ ನಿಮ್ಮ ಸಹೋದರಿಗೆ ಅನ್ಯಾಯವಾಗಿದೆ" ಎಂದೆಲ್ಲಾ ಡೈಲಾಗ್ ಬಿಟ್ಟು ಸಿಂಪಥಿ ಗಿಟ್ಟಿಸಲು ಯತ್ನಿಸಿದಳು. ಪತ್ರಿಕೆ, ಟಿವಿಗಳಲ್ಲಿ ತನ್ನ ವಾಕ್ ಬಾಣದಿಂದ ಬಿಜೆಪಿಯನ್ನು ತಿವಿಯಲು ತೊಡಗಿದಳು.


ಇಷ್ಟಾಗುತ್ತಲೇ 'ಕ್ರೈಸ್ತ ಕ್ರಿಯಾ ಸಮಿತಿ, ಶಕ್ತಿನಗರ' ಹೆಸರಲ್ಲಿ ಏಸು ಶಿಲುಬೆ ಹೊತ್ತ ಚಿತ್ರವಿರುವ ಕರಪತ್ರವೊಂದು ತೀರಾ ಗುಪ್ತವಾಗಿ ಪದವು ಕ್ಷೇತ್ರದ ಕ್ರೈಸ್ತರ ಮನೆಗಳಲ್ಲಿ ಪ್ರತ್ಯಕ್ಷವಾಯಿತು. ಆ ಪತ್ರದಲ್ಲಿ "ನಮ್ಮ ಸಹೋದರಿ ಕ್ರೈಸ್ತ ಸಮಾಜದ ಹಿತರಕ್ಷಣೆಗಾಗಿ ಪ್ರಭು ಯೇಸುವಿನ ರಾಜ್ಯ ಸ್ಥಾಪಿಸುವ ಪವಿತ್ರ ಕಾರ್ಯದಲ್ಲಿ ನಮ್ಮ ಪ್ರತಿನಿಧಿಯಾಗಿ ಚುನಾವಣೆಗೆ ಸ್ಪರ್ಧಿಸುತ್ತಿದ್ದಾರೆ.... ಶಕ್ತಿನಗರ ಪ್ರದೇಶವನ್ನು ಕ್ರೈಸ್ತರ ಪವಿತ್ರ ನೆಲವಾಗಿ ಪರಿವರ್ತಿಸುವ ಕಾರ್ಯದಲ್ಲಿ ತೊಡಗಿದ್ದಾರೆ.... ಅಜ್ಞಾನಿಗಳಾದ, ಮೂಢನಂಬಿಕೆಗಳಿಂದ ತುಂಬಿರುವ ಹಿಂದುಗಳ ಮನಪರಿವರ್ತನೆ ಮಾಡಿ ಪ್ರಭು ಯೇಸು ತೋರಿಸಿದ ದಾರಿಯಲ್ಲಿ ಪವಿತ್ರರನ್ನಾಗಿ ಮಾಡುವ ದೀಕ್ಷೆಯನ್ನು ಶ್ರೀಮತಿ ಮರಿಯಮ್ಮ ಹೊಂದಿದ್ದಾರೆ..." ಎಂದೆಲ್ಲ ಪ್ರಕಟಿಸಲಾಗಿತ್ತು.

ಈ ಪತ್ರದ ಒಕ್ಕಣೆ ನೋಡಿದರೆ ಇದು ಭಜರಂಗಿಗಳ ಕೃತ್ಯ ಎಂದು ಗೊತ್ತಾಗುತ್ತದೆ. ಈ ಕರಪತ್ರವನ್ನು ಪ್ರಕಟಿಸಿ, ಎಲ್ಲರ ಮನೆಗೆ ತಾವೇ ಹಂಚಿ, ಆನಂತರ ಅದನ್ನೇ ಕಾರಣವಾಗಿಟ್ಟುಕೊಂಡು ರಾದ್ಧಾಂತ ಎಬ್ಬಿಸುವುದು ಭಜರಂಗಿಗಳ ಯೋಜನೆಯಾಗಿತ್ತು. ಆ ಮೂಲಕ ಮರಿಯಮ್ಮನಿಗೆ ನೀರಿಳಿಸುವುದೂ ಅವರ ಉದ್ದೇಶ ವಾಗಿತ್ತು. ಆದರೆ ಮರಿಯಮ್ಮ ಥೋಮಸ್ ಈಗ ಚುನಾವಣೆಯಲ್ಲಿ ಗೆಲ್ಲುವ ಮೂಲಕ ಭಜರಂಗಿಗಳಿಗೇ ನೀರುಣಿಸಿದ್ದಾರೆ!

ಇದೆಲ್ಲ ಒಂದು ಕಡೆ ನಡೆಯುತ್ತಿದ್ದರೆ, ಇನ್ನೊಂದೆಡೆ ಬಿಜೆಪಿಗೆ ಮರಿಯಮ್ಮ ಥೋಮಸ್ ಬೇಡವಾಗಿ ಖಾಲಿ ಬಿದ್ದ ಸ್ಥಾನವನ್ನು ಭರ್ತಿ ಮಾಡಲು ಬಂದವನೇ ಲಫಂಗ ಜೇಮ್ಸ್. ಸತತ ಮೂರು ಬಾರಿ ಕಾಂಗ್ರೆಸ್ ಕಾರ್ಪೊರೇಟರ್ ಆಗಿ ಸಾಕಷ್ಟು 'ಬರಕತ್ತಾದ' ಜೇಮ್ಸ್ ಡಿಸೋಜ ಕೌನ್ಸಿಲರ್‌ನ ಕೊನೆಯ ಅವಧಿಯಲ್ಲಿ ಪಕ್ಷಕ್ಕೇ ದೋಖಾ ಮಾಡಿ, ಬಿಜೆಪಿ ಜತೆ ಕೈಜೋಡಿಸಿ, ಕವಿತಾ ಸನಿಲ್‌ಳನ್ನು ನಗರ ಸ್ಥಾಯಿ ಸಮಿತಿ ಅಧ್ಯಕ್ಷೆಯನ್ನಾಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಆದ್ಮಿ ಈತ.

ಇದೀಗ ಕಾಂಗ್ರೆಸ್‌ನಿಂದ ಉಚ್ಚಾಟಿತನಾಗಿದ್ದು ಮತ್ತದೇ ಮರೋಳಿ ವಾರ್ಡ್‌ನಿಂದ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದ ಜೇಮ್ಸ್‌ನ ಮಂಗಾಟಗಳನ್ನು ನೋಡಿ ಮತದಾರರಂತೂ ನಗಬೇಕೋ-ಅಳಬೇಕೋ... ಎಂಬ ಕನ್‌ಫ್ಯೂಷನ್‌ಗೆ ಬಿದ್ದಿದ್ದರು. ಹಿಂದೂಗಳ ಮನೆಗೆ ಮತಯಾಚನೆಗೆ ಹೋಗುವಾಗ ಕಾವಿ ಶಾಲನ್ನು ಹೆಗಲೇರಿಸಿಕೊಳ್ಳುವ ಜೇಮ್ಸ್, ಸ್ವಜಾತಿಯ ಕ್ರಿಶ್ಚಿಯನ್ನರ ಮನೆಗೆ ಹೋದಾಗ ಶಾಲಾ ಮಾಯ!

ಕುಂದಾಪುರದ ಪಾದ್ರಿಗಳ ಮೇಲೆ ಹಲ್ಲೆ ನಡೆದಾಗಲಂತೂ ಆಗತಾನೇ ಕಾಂಗ್ರೆಸ್‌ನಿಂದ ಔಟ್ ಆಗಿದ್ದ ಜೇಮ್ಸ್ ಚೆಡ್ಡಿಗಳ ನಡುವೆ ನಿಂತು "ಒಳ್ಳೆದಾಯಿತು, ಮತ್ಯಾಕೆ ಇವರು ಮತಾಂತರ ಮಾಡಬೇಕು" ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದ. ಆದರೆ ಅದೇ ಹೊತ್ತು ಚರ್ಚ್‌ನಲ್ಲಿ ಪಾದ್ರಿಗಳ ಮುಂದೆ ನಿಂತು ಭಜರಂಗಿಗಳಿಗೆ ಹಿಡಿಶಾಪ ಹಾಕುತ್ತಾ ತನ್ನ ಗೋಸುಂಬೆತನವನ್ನು ಪ್ರದರ್ಶಿಸಿದ್ದ. ಸಮಯಸಾಧಕ ಜೇಮ್ಸ್‌ಗೆ ಯಾವುದರಲ್ಲಿ ಇಕ್ಕಬೇಕು ಕಾಲವೇ ನಿರ್ಧರಿಸಬೇಕಷ್ಟೇ! ಆದರೆ ಸದ್ಯಕ್ಕಂತೂ ಈತನೂ ಗೆದ್ದು ಮಂಗಳೂರಿಗೆ ಇನ್ನಷ್ಟು ಕಾಟ ಮತ್ತು ಕಾಮಿಡಿ ಸಿಕ್ಕಲಿದೆ.



ಕ್ರೈಸ್ತಬಾಂಧವರಲ್ಲಿ ವಿನಂತಿ

[illegible]

### [illegible]

ಕಳೆದ ಐದು ವರ್ಷಗಳ ಕಾಲ ಮಂಗಳೂರು ಮ.ನ.ಪಾ. ಅವಧಿಯಲ್ಲಿ ಸಂಘ ಪರಿವಾರದ 'ಭಂಗ'ಕ್ಕೆ ಬಹುವಾಗಿ ಈಡಾಗಿ ಸುದ್ದಿಯಾದ ಕಾರ್ಪೊರೇಟರ್ ಅಂದರೆ ಬಂದರಿನ ಅಶ್ರಫ್. ಮಂಗಳೂರಿನ ಬಂದರಿನಲ್ಲಿ ಬಿಜೆಪಿ ಮಂತ್ರಿ ನಾಗರಾಜ ಶೆಟ್ಟಿಯ ಕುಮ್ಮಕ್ಕಿನೊಂದಿಗೆ ಮ.ನ.ಪಾ. ಸಿಬ್ಬಂದಿಗಳು ಗೂಡಂಗಡಿಗಳಿಗೆ ಬುಲ್ಡೋಜರ್ ನುಗ್ಗಿಸಿ ನೆಲಸಮ ಮಾಡಲು ಹೊರಟಿದ್ದರು. ಆಗ ಮೇಯರ್ ಆಗಿದ್ದ ಅಶ್ರಫ್‌ಗೆ ವಿಷಯ ತಿಳಿಯುತ್ತಲೇ ಹಿಂದು-ಮುಂದು ನೋಡದೇ ದಾವಿಸಿ ಬಂದು, "ಮೊದಲು ಬುಲ್ಡೋಜರ್ ಅನ್ನು ನನ್ನ ಮೇಲೆ ನುಗ್ಗಿಸಿ, ಆಮೇಲೆ ಆ ಬಡಪಾಯಿಗಳ ಹೊಟ್ಟೆಗೆ ಬಡಿಯಿರಿ" ಎಂದು ಅಬ್ಬರಿಸಿದ್ದ. ಇದರಿಂದಾಗಿ ಬಿಜೆಪಿಗೆ ತೀವ್ರ ಮುಖಭಂಗವಾಗಿತ್ತು.

ಒಂದು ಕಾಲದಲ್ಲಿ ಬಂದರಿನ ಮೀನು ಹರಾಜು ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದ ಅಶ್ರಫ್‌ಗೆ ಕನ್ನಡ ಓದಲು ಸರಿಯಾಗಿ ಬರುತ್ತಿರಲಿಲ್ಲ. ಇದನ್ನೇ ಇಷ್ಯೂ ಮಾಡಿದ ಸ್ಥಳೀಯ ಪತ್ರಿಕೆಗಳು 'ಕನ್ನಡ ಬಾರದ ಮೇಯರ್' ಎಂದು ಮಾನ ತೆಗೆಯಲು ತೊಡಗಿದವು. "ಹೌದು ನಾನು ಕನ್ನಡ ಕಲಿಯಲಿಲ್ಲ, ನನ್ನ ತಂದೆ ಉರ್ದು ಶಾಲೆಗೆ ಕಳುಹಿಸಿದರು. ಮೀನು ಮಾರುವವರು ಮೇಯರ್ ಆಗೋದು ತಪ್ಪೆ?" ಎಂದು ಅಶ್ರಫ್ ಅವರೆಲ್ಲರ ಬಾಯಿ ಮುಚ್ಚಿಸಿದ್ದರು. ಅವರವರ ಭಾವಕ್ಕೆ ತಕ್ಕಂತೆ ವರ್ತಿಸುವ ನಾಜೂಕಯ್ಯತನ ಗೊತ್ತಿರದ ಅಶ್ರಫ್ ಪತ್ರಕರ್ತರ ಜತೆ ಒರಟಾಗಿ ವರ್ತಿಸಿದ್ದೇ ಆತನ ತೇಜೋವಧೆಗೆ ಹೇತುವಾಗಿತ್ತು. ಕಳೆದ ನವೆಂಬರ್ ತಿಂಗಳಲ್ಲಿ ಕೋಮುಗಲಭೆಗಳು ನಡೆದಾಗ ಮೇಯರ್ ಅಶ್ರಫ್ ಖುದ್ದು ನಿಂತು ಪರಿಸ್ಥಿತಿ ತಿಳಿಗೊಳಿಸಲು ಪ್ರಯತ್ನಿಸಿದ್ದರು. ಆದರೆ ಮರುದಿನದ ಪತ್ರಿಕಾ ಪುಟಗಳಲ್ಲಂತೂ ಇದು "ಕೋಮುಗಲಭೆಗೆ ಪ್ರಚೋದಿಸುತ್ತಿರುವ ಮೇಯರ್ ಅಶ್ರಫ್" ಎಂಬ ಫೋಟೋ ಸಮೇತದ ಸುದ್ದಿ ಪ್ರಕಟವಾಗಿತ್ತು.

ಅಶ್ರಫ್ ಈ ಬಾರಿ ಬಂದರಿನಲ್ಲಿ ಮೀಸಲಾತಿ ತಪ್ಪಿ, ಪಕ್ಕದ ಪೋರ್ಟ್‌ವಾರ್ಡ್‌ನಲ್ಲಿ ಸ್ಪರ್ಧಿಸಿದ್ದರು. ಅಶ್ರಫ್‌ನನ್ನು ಕಂಡರೆ ಕೆಂಡ ತುಳಿದವರಂತಾಗುವ ಭಜರಂಗಿಗಳು ಅಲ್ಲೂ "ಮಂಗಳೂರಿನ ಮುಶ್ರರಫ್ ಮೇಯರ್ ಅಶ್ರಫ್" ಹೆಡ್ಡಿಂಗ್‌ನ ಬೇನಾಮಿ ಕರಪತ್ರವನ್ನು ಹಂಚಿ ಅದಕ್ಕೂ ಪತ್ರಿಕಾ ಪ್ರಚಾರ ಕೊಟ್ಟಿದ್ದಾರೆ. ಚೆಡ್ಡಿಗಳ ಈ ಕರಪತ್ರ ಮಹಾತ್ಮೆಯೂ ಕೆಲಸ ಮಾಡದೇ ಅಶ್ರಫ್ ಕೂಡ ಗೆದ್ದಿದ್ದಾರೆ.

-ವರದಿಗಾರ

# ಸುನೀಲನ ಸ್ಕೋಡಾ ಕಾರು,.....

(9ನೇ ಪುಟದಿಂದ)

ಪೀಣ್ಯ ಸ್ಮಶಾನದ ಕಸ ಗುಡಿಸುತ್ತಿದ್ದ ಸಲ್ಯೂಪನ್ನು ಕೂಡ ತನ್ನ ಓಡಾಟಕ್ಕೆ ಕಾರಿಟ್ಟಿದ್ದಾನೆ. ಯಕಶ್ಚಿತ್ ಸ್ಮಶಾನಗಳಿಂದ ತಿಂಗಳೊಂದಕ್ಕೆ ಲಕ್ಷಾಂತರ ರೂಪಾಯಿ ಆದಾಯವಿದೆ ಅಂದರೆ ನಂಬುವವರ್‍ಯಾರು?

ಜೈಲಲ್ಲಿದ್ದಷ್ಟೂ ದಿನ ಸುನೀಲನಿಗೆ ತಿಂಗಳೊಂದಕ್ಕೆ ಎರಡರಿಂದ ಮೂರು ಲಕ್ಷದ ತನಕ ಮಂತ್ಲಿ ಮುಟ್ಟಿಸುತ್ತಿದ್ದ ಬೋಂಡಾ ನಾಗ ಉರ್ಫ್ ನಾಗರಾಜ ಮತ್ತು ಪೀಣ್ಯದ ಸಲ್ಯೂಪನ್ನು ಎಂಬ ರೌಡಿಗಳಿಬ್ಬರೂ ಸದ್ಯ ಆತನ ಮಟ್ಟಿಗೆ ಬ್ಯಾಂಕುಗಳಿದ್ದಂತೆಯೇ. ಇದಲ್ಲದೇ ಶ್ರೀರಾಂಪುರ, ಮಲ್ಲೇಶ್ವರ, ರಾಜಾಜಿನಗರ, ಬಸವೇಶ್ವರ ನಗರ, ಪೀಣ್ಯ, ಮಾಗಡಿ ರೋಡ್ ಇತ್ಯಾದಿ ಏರಿಯಾಗಳ ಇಸ್ಪೀಟ್ ಕ್ಲಬ್ಬುಗಳಿಂದ ಸುನೀಲನಿಗೆ ಆತ ಜೈಲಲ್ಲಿದ್ದಾಗಲೇ ಮಂತ್ಲಿ ಹೋಗುತ್ತಿತ್ತು.

ಪೊಲೀಸ್ ಮೂಲಗಳೇ ಹೇಳುವಂತೆ ಹ್ಯಾಟಿ ಎಂಬ ಪ್ರುದಿ ಪಾತಕಿಯೊಬ್ಬ ಸುನೀಲನ ಪರವಾಗಿ ಇಸ್ಪೀಟ್ ಕ್ಲಬ್ಬುಗಳಿಂದ ತಿಂಗಳೊಂದಕ್ಕೆ ಐದು ಲಕ್ಷ ರೂಪಾಯಿಯ ಕಲೆಕ್ಷನ್ ಮಾಡಿಕೊಂಡಿದ್ದ. ಜೈಲಲ್ಲಿದ್ದಷ್ಟೂ ದಿನ ಪ್ರತಿನಿತ್ಯ ಏರಿಯಾಸಿ. ಹುಡುಗರಿಗೆ ಬಟ್ಟೆ, ಜೈಲುಪಾಲಾದ ತನ್ನ ಹುಡುಗರ [illegible]

ವ್ಯವಸ್ಥೆಗಳಿಗೆಲ್ಲ ಸುನೀಲನಿಗೆ ದುಡ್ಡು ಹುಟ್ಟುತ್ತಿದ್ದದ್ದೇ ಇಂಥ ದಂಧೆಗಳಿಂದ.

ಆಟ್ಯಾಯಿ ಬದುಕಿದ್ದಷ್ಟೂ ದಿನ ಸುನೀಲನ ಪಾಲಿಗೆ ಜೈಲೇ ಮನೆಯಂತಿತ್ತು. ಅಟ್ಯಾಯಿ-ಸುನೀಲರ ನಂಟು ಜೈಲೊಳಗೇ ರೌಡಿಗಳ ರೌಡಿಗಳ ಬಡಿದಾಟಕ್ಕೆ ಕಾರಣವಾಯಿತು. ಜೈಲ್ ಎಡಿಜಿ ರಮೇಶ್ ಪರಪ್ಪನ ಅಗ್ರಹಾರದ ಮೇಲೆ ದಾಳಿ ನಡೆಸಿ ಡಜನ್ನುಗಟ್ಟಲೇ ಮೊಬೈಲುಗಳನ್ನು ಜಪ್ತಿ ಮಾಡುತ್ತಿದ್ದಂತೆ ಬಿಜಾಪುರಕ್ಕೆ ರವಾನೆಯಾಗಿದ್ದ ಸುನೀಲನಿಗೆ ಹೊರಬೀಳುವುದು ಅನಿವಾರ್ಯವಾಯಿತು.


### [illegible]

ಮತ್ತೆ ಜೈಲಿಗೆ ಹೋಗುವಂತಿಲ್ಲ, ಹಾಗಂಥ ಮತ್ತೆ ಕ್ರೈಮಿಗೂ ಕೈ ಹಾಕುವಂತಿಲ್ಲ, ಸಣ್ಣದೊಂದು ಹೊಡೆದಾಟವಾದರೂ ಕೂಡ ಪೊಲೀಸರು ಎನ್‌ಕೌಂಟರ್ ಮಾಡದೇ ಬಿಡುವುದಿಲ್ಲ, ಇದು ಸುನೀಲನ ದುರ್ಗತಿ. ವಿಕಟವೆಂದರೆ ಇದೆಲ್ಲಕ್ಕೂ ಮಿಗಿಲಾಗಿ ತಾನು ಬದುಕುಳಿಯುವುದೇ ಸುನೀಲನ ಪಾಲಿಗೆ ಅತೀ ದೊಡ್ಡ ಸವಾಲಾಗಿಬಿಟ್ಟಿದೆ. ಸುನೀಲನ ತಲೆ ತೆಗೆಯುವುದಕ್ಕೆಂದೇ ನಾಲ್ಕು ಅನಾಹುತಕಾರಿ ತಂಡಗಳು ಹಗಲಿರುಳೂ ರೌಂಡಿಂಗ್ ಆರಂಭಿಸಿಬಿಟ್ಟಿವೆ. ಈ ಪೈಕಿ ಅತ್ಯಂತ ಅಪಾಯಕಾರಿ ಪಡೆಯೆಂದರೆ, ಅದು ಗಾಯತ್ರಿನಗರದ ಬ್ರೇಕ್ ಜಗ್ಗಿಯ ಗ್ಯಾಂಗ್. ಇಲ್ಲಿಗೆ ಎರಡು ತಿಂಗಳ ಹಿಂದೆ ಬ್ರೇಕ್ ಜಗ್ಗಿಯ ಬಲಗೈ ಬಂಟ ಗಾಯತ್ರಿನಗರದ ತಿಮ್ಮನನ್ನು ಮುಗಿಸಲೆಂದೇ ಕ್ಯಾಪ್ಟನ್‌ರಾಜ ಮತ್ತು ಲೇಟಿಬ್ ಗುಂಡರ ನೇತೃತ್ವದಲ್ಲಿ ಸುನೀಲನ ಹುಡುಗರನ್ನು ಛೂಬಿಟ್ಟಿದ್ದ. ಆದರೆ ಸಿಕ್ಕವನು ತಿಮ್ಮನ ಗೆಳೆಯ ಶಶಿಧರ. ಅವನನ್ನೇ ಕೊಂದ ಕ್ಯಾಪ್ಟನ್ ರಾಜನ ಪಡೆ ಜೈಲು ಪಾಲಾಯಿತು. ಅಲ್ಲಿಗೆ ತಿಮ್ಮನೂ ನಿಶ್ಚಯಿಸಿಬಿಟ್ಟ. ಆಗಸ್ಟ್ 28ರ ಬೆಳಿಗ್ಗೆ ರಾಜಾಜಿನಗರದ ರಾಮಮಂದಿರದ ಬಳಿಯ ಪ್ರಶಾಂತನ ಅಡ್ಡೆಯಲ್ಲಿ ಸುನೀಲ ಕಾಣಿಸಿ ಕೊಂಡಿದ್ದ. ಜೊತೆಗೆ ಪೀಸಿ, ಪೀಟ, ಒಂಟೆ, ಅನಾಲಿ ಮತ್ತು ದಪ್ಪ ತುಟಿ ಸಂದೀಪನೂ ಇದ್ದ. ಇನ್ನೂ ಹತ್ತು ನಿಮಿಷ ಅಲ್ಲೇ ಉಳಿದಿದ್ದರೆ ತಿಮ್ಮನ ಗ್ಯಾಂಗ್ ದಾಳಿ ಮಾಡಿಬಿಡುತ್ತಿತ್ತು.


ಬಹುಶಃ ಸುನೀಲನ ಆಯುಸ್ಸು ಗಟ್ಟಿಯಿತ್ತೇನೊ. ತಿಮ್ಮನ ಪಡೆ ಹತ್ತು ನಿಮಿಷ ತಡವಾಗಿ ಬಂತು! ಲಗ್ಗೆರೆಯ ತೂತ್‌ರವಿ, ರಾಜಾಜಿನಗರದ ಪ್ರಶಾಂತ, ದಪ್ಪತುಟಿ ಸಂದೀಪನಂಥವರು ದೊಡ್ಡದೊಡ್ಡ ಡೀಲುಗಳನ್ನೇ ತರುತ್ತಿದ್ದಾರೆ. ಅದರಲ್ಲೂ ತೂತ್‌ರವಿ ಸುನೀಲನ ಹೆಸರಲ್ಲೇ ಲ್ಯಾಂಡ್ ಡೀಲಿಗಿಳಿದಿದ್ದಾನೆ. ಅದರಲ್ಲೂ ಕಾಲೇಜು ಹುಡುಗಿಯರಲ್ಲಿ ಸುನೀಲನ ಕ್ರೇಜು ಕೊಂಚ ವಿಪರೀತವೆನಿಸುವಷ್ಟಿದೆ. ಗ್ಯಾಂಗೂ ಬೆಳೆದಿದೆ. ಜೊತೆಗೆ ಸಾವೂ ಹಿಂಬಾಲಿಸುತ್ತಲೇ ಇದೆ.

ಒಂದೋ ಬೆಂಗಳೂರು ಬಿಡಬೇಕು ಅಥವಾ ಸಾವಿನ ಜೊತೆ ಸೆಣಸಾಡಬೇಕು. ಇದು ಸುನೀಲನ ಮುಂದಿರುವ ಸವಾಲುಗಳು. ಆತನ ಓಡಾಟ ಮತ್ತು ನೆಟ್‌ವರ್ಕ್‌ಗಳನ್ನೇ ಲೆಕ್ಕ ಹಾಕಿ ಹೇಳುವುದಾದರೆ ಸುನೀಲ ಸದ್ಯ ರಿಟೈರಾಗಲಾರ ಮತ್ತು ಬೆಂಗಳೂರನ್ನೂ ಬಿಡಲಾರ.


ಆದರೆ ವೈರಿಗಳು ಬಿಡಬೇಕಲ್ಲ? ಯಾರನ್ನು ಯಾರು ಬೇಟೆಯಾಡುತ್ತಾರೆಂಬುದೇ ಪ್ರಶ್ನೆ.




ಶೇಡಿ



ಬೀಟಿ ಸಂತೋಷ್



ಲಚ್ಚಿ



ಬೋಂಡಾ ನಾಗ

# ಗಂಗಾಧರ, ತೋಟೇಂದ್ರರೆಂಬ 'ಡಾನ್' ಸ್ವಾಮಿಗಳು

...ಸವಣ್ಣನವರ ಕರ್ಮಭೂಮಿಯಾದ ಉತ್ತರ ...ಟಕ ವಚನ ಸಾಹಿತ್ಯದ ಉಸಿರಾಗಬೇಕಾಗಿತ್ತು. ...ಣ್ಣನವರ ವಿಚಾರಧಾರೆಯನ್ನು ಮೈಗೂಡಿಸಿಕೊಂಡು ... ಕರ್ನಾಟಕದ ಜನತೆಯನ್ನೇ ತನ್ನ ಬೌದ್ಧಿಕ ...ಂವ ಗುರುತಿಸಿಕೊಳ್ಳಬೇಕಾಗಿತ್ತು. ಆದರೆ ಜಾತಿ ...ಮರ ಕುತಂತ್ರಗಳಿಂದ ಬಸವಣ್ಣ ಬಹಳಷ್ಟು ...ಗಳವರೆಗೆ ಈ ನೆಲದಲ್ಲಿ ನಾಲ್ಕು ಕಾಲಿನ ಪ್ರಾಣಿ ...ೕ ಗುರುತಿಸಿಕೊಳ್ಳಬೇಕಾಗಿ ಬಂದುದು ಇಲ್ಲಿನ ...ಗಳ ದೌರ್ಭಾಗ್ಯ. ಇವತ್ತಿನ ವೈಜ್ಞಾನಿಕ ದಿನಮಾನಗ ...ಲೂ ಬಸವಣ್ಣನವರನ್ನು ತಮ್ಮ ಮಠದ ಗೋಡೆಗೆ ... ಒಡೆದು ಸಿಗಹಾಕಿಕೊಂಡು ಜನರನ್ನು ಸುಲಿಯು...ದ ಸ್ವಾಮಿಗಳು ನಮಗೆ ಈ ಭಾಗದಲ್ಲಿ ಊರಿ...ಟ್ಟರು ಕಾಣಸಿಗುತ್ತಾರೆ.

...ಜಾತಿಜಂಗಮರು ಅದರಲ್ಲೂ ಪಂಚಾಚಾರ್ಯರ ಪೀಠಕ್ಕೆ ...ದವರಾಗಿದ್ದರಂತೂ ಮುಗಿಯಿತು. ಅಲ್ಲಿ ಬಸವಣ್ಣನವರ ...ೕ ಒಂದು ಭಾವಚಿತ್ರವೂ ನಿಮಗೆ ನೋಡಲು ...ಸಿಗುವುದಿಲ್ಲ. ಅವರ ಆಚಾರ ವಿಚಾರಗಳೆಲ್ಲ ಥೇಟ್ ...ತ ಬ್ರಾಹ್ಮಣರಂತೆ. ಒಂದರ್ಥದಲ್ಲಿ ಇವರಿಗೂ ...ಣಶಾಹಿಯನ್ನು ಪೋಷಿಸಿ ಬೆಳೆಸುವ ಪುರೋಹಿತ...ಗೂ ಯಾವುದೇ ಫರಕು ಕಾಣಲಾಗುವುದಿಲ್ಲ. ...ಹ್ಮಣ ಪುರೋಹಿತರು ಮಾಡುವಂತೆ ಇವರೂ ಕೂಡ ... ಮಠದಲ್ಲಿ ಯಜ್ಞ-ಯಾಗಗಳನ್ನು ಮಾಡುತ್ತಾರೆ. ...ೀಪೋತ್ಸವದ ಹೆಸರಿನಲ್ಲಿ ಜನರನ್ನು ಅಕ್ಷರಶಃ ...ಸರಂತೆ ಸುಲಿಗೆ ಮಾಡುತ್ತಾರೆ. ಮಠಗಳಲ್ಲಿ ನಿತ್ಯವೂ ...ದ ದೀಪ ಉರಿಸುತ್ತಾರೆ. ಕಾಯಿ- ಕರ್ಪೂರ ಅಂತ ...ರ ಹೆಸರಿನ ಮೇಲೆ ಭಕ್ತರನ್ನು ಲೂಟಿ ಮಾಡುತ್ತಾರೆ. ...ಭಿಷೇಕ, ರುದ್ರಾಭಿಷೇಕ ಅಂತ ಹೇಳಿ ಭಕ್ತರ ತಲೆಯನ್ನು ...ಗೆ ಬೋಳಿಸುವುದು ನಡೆದೇ ಇದೆ.

...ನ್ನೂ ವಿರಕ್ತ ಮಠಗಳು ಹಾಗೂ ಅಲ್ಲಿಯ ...ಯ ನಡವಳಿಕೆಗಳೂ ಭಿನ್ನವೇನು ಇರುವುದಿಲ್ಲ. ...ವ ಮಠಗಳಲ್ಲಿ ವಚನ ಸಾಹಿತ್ಯದ ಪಠಣ ನಡೆಯ...ತ್ತೋ ಅಲ್ಲಿ ಸಂಸ್ಕೃತ ಪಾಠಶಾಲೆಗಳು ತಲೆ ಎತ್ತಿವೆ. ... ಭಕ್ತರಿಗೆ ತಿಳಿಯದ ಸಂಸ್ಕೃತ ಮಂತ್ರಗಳನ್ನು ... ತಬ್ಬಿಬ್ಬುಗೊಳಿಸುವ ಕೆಲಸದಲ್ಲಿ ತೊಡಗಿದ್ದಾರೆ. ...ಕ್ಕೆ ಒರೆಯ ಕಟ್ಟುವೆ. ತರ್ಕದ ಬೆನ್ನಬಾರನೆತ್ತುವೆ. ...ದ ಮೂಗ ಕೊಯ್ಯುವೆ. ವೇದ ...ದು ಓದಿನ ಮಾತು. ಶಾಸ್ತ್ರವೆಂ...ು ಸಂತೆಯ ಸುದ್ದಿ' ಎಂಬ ...ಣ್ಣನವರ ಆಶಯಗಳನ್ನೇ ಬದಿಗಿಟ್ಟು ...ಶ್ಯ ಪುರಾಣಗಳ ತೌಡು ಕುಟ್ಟಿದ್ದೆ...ದ್ದು.

ಕಲಬುರ್ಗಿ

...ಇದನ್ನೆಲ್ಲ ಕಂಡಾಗ ಅದೇಕೋ ಮತ್ತೆ ಮತ್ತೆ ಉತ್ತಂಗಿ ...ವರು 'ವಿರಕ್ತರು ಬಸವಣ್ಣನವರ ಅಂತರಂಗ ...ಗಳಾದರೆ ಪಂಚಾಚಾರ್ಯರು ಬಸವಣ್ಣನವರ ...ರಂಗದ್ರೋಹಿಗಳು' ಎಂದು ಯಾವತ್ತೋ ಹೇಳಿದ ...ು ನೂರಕ್ಕೆ ನೂರು ಸತ್ಯ ಎಂದು ಅರಿವಾಗುತ್ತದೆ.


...ಲಬುರ್ಗಿ ಜಿಲ್ಲೆಯ ಪ್ರಭಾವಿ ಮಠಗಳಲ್ಲಿ ಅತ್ಯಂತ ...ಖವಾಗಿರುವ ಮಠಗಳು ಎರಡು. ಒಂದು ...ದಗಿರಿ ತಾಲೂಕಿನ ಅಬ್ಬೆತುಮಕೂರಿಗೆ ಸಂಬಂಧಿಸಿ...ದ್ದರೆ, ಇನ್ನೊಂದು ಚಿತ್ತಾಪುರ ತಾಲೂಕಿನ ನಾಲವಾರ. ...ಧರಸ್ವಾಮಿ ಹಾಗೂ ತೋಟೇಂದ್ರಸ್ವಾಮಿ ಎಂಬ ...ಮುದ್ವಯರು ಇಲ್ಲಿನ ಲಿಂಗಾಯತರನ್ನು ದಿಶಾಬೂಲ್ ...ಕೊಂಡು ಹೊರಟಿರುವ ಪರಿ ನೋಡಿದರೆ ...ಗಾದರೂ ಸಹನೆಯ ಕಟ್ಟೆ ಒಡೆಯುತ್ತದೆ. ಆದರೆ ...ು ಮಾತ್ರ ಯಾವ ನಾಚಿಕೆಯೂ ಇಲ್ಲದೆ ಮುಗ್ಧ... ತಲೆಗೆ ಸುಣ್ಣ ತಿಕ್ಕುತ್ತ ನಡೆದಿದ್ದಾರೆ. ಈ ಇಬ್ಬರೂ ...ಗಳ ನಡುವೆ ಅನುಗಾಲದಿಂದಲೂ ಪೈಪೋಟಿ. ...ವಾರದ ಸ್ವಾಮಿ ಬೊಲೇರೋ ಗಾಡಿ ಖರೀದಿಸಿ...ದರೆ, ಅಬ್ಬೆತುಮಕೂರಿನ ಸ್ವಾಮಿಯ ಮಠದ ಅಂಗಳ ...ಮರುದಿನವೇ ಮತ್ತೊಂದು ಬೊಲೇರೋ ಗಾಡಿ ...ಕು. ನಾಲವಾರದ ಮಠಕ್ಕೆ ಪ್ರಧಾನಿಗಳನ್ನು ಕರೆದು...ದರೆ ಅಬ್ಬೆತುಮಕೂರಿನ ಮಠಕ್ಕೆ ರಾಷ್ಟ್ರಪತಿಗಳನ್ನು ...ಬೇಕು. ಒಂದು ಕಡೆ ನಟ ರಾಜಕುಮಾರ ... ಹೋಗಿದ್ದರೆ ಮತ್ತೊಂದು ಕಡೆ ವಿಷ್ಣುವರ್ಧನ ...ಬೇಕು. ನಾಲವಾರದ ಸ್ವಾಮಿ ತನ್ನ ಮಠದಲ್ಲಿ ...ಭಟಯಿಂದ ಸಹೋದರಿಯ ಲಗ್ನ ಮಾಡಿದರೆ ...ನು ಕಡಿಮೆ ಎನ್ನುವಂತೆ ಗಂಗಾಧರ ಸ್ವಾಮಿಯೂ ...ಮಠದಲ್ಲಿ ತನ್ನ ಸಹೋದರಿಯ ಮದುವೆ ಮಾಡಿ ... ತೀರಿಸಿಕೊಳ್ಳುತ್ತಾನೆ. ಬಂಗಾರದ ಉಂಗುರ, ...ಗಳನ್ನು ಹೇರಿಕೊಂಡು ಸವಾರಿ ಹೊರಡುವ ...ಗನ್ನು ಬಸವಣ್ಣ ನೋಡಿದರೆ ಸತ್ತೇ ಹೋಗುತ್ತಿದ್ದ. ...ತಳ್ಳಿ ಥಳಥಳಿಸುವ ರೇಷ್ಮೆ ಬಟ್ಟೆಗಳನ್ನು ...ಕೊಂಡು ಸಿನಿಮಾ ನಟರಿಗಿಂತಲೂ ಹೆಚ್ಚಿನ ...ಗಳಲ್ಲಿ ಹೊರಡುವ ಇವರುಗಳಿಗೆ ಸಮಯದ ...

... ಭಕ್ತರು (?) ಮಾತ್ರ, ಇವರನ್ನು ಮುಕುರಿ...ು, ...ಗ ಹುಟ್ಟಿಸುತ್ತಾರೆ. ತಮ್ಮ ಸುತ್ತಮುತ್ತ...



ತೋಟೇಂದ್ರಸ್ವಾಮಿ

ಈ ಧೂರ್ತಸ್ವಾಮಿಗಳಿಬ್ಬರ ಬಳಿ ಬರುವ ಭಕ್ತರನ್ನು ಹೇಗಾದರೂ ಸೈ ಅನ್ನಿಸಿ ತಮ್ಮ ಬುಟ್ಟಿಗೆ ಹಾಕಿಕೊಳ್ಳಬೇಕೆಂದು ಇಲ್ಲಿನ ರಾಜಕಾರಣಿಗಳೂ ಪೈಪೋಟಿಗೆ ಇಳಿದಿದ್ದಾರೆ. ಬಸವಾದಿ ಶರಣರ ವಿಚಾರಗಳನ್ನು ಮೈಗೂಡಿಸಿಕೊಂಡು ಜನಸಾಮಾನ್ಯರಲ್ಲಿ ಜಾಗ್ರತೆಯನ್ನು ತರಬೇಕಿರುವ ಈ ಮಠಗಳು ಮೌಢ್ಯದ ಕೂಪಗಳಾಗಿವೆ. ಈ ಎರಡೂ ಮಠಗಳ ಸ್ವಾಮಿಗಳು ಮನಸ್ಸು ಮಾಡಿದ್ದರೆ ಇಡೀ ಕರ್ನಾಟಕವೇ ತಿರುಗಿ ತಮ್ಮತ್ತ ನೋಡುವ ವ್ಯಕ್ತಿತ್ವ ಬೆಳೆಸಿಕೊಳ್ಳಬಹುದಿತ್ತು. ಆದರೆ....



ಗಂಗಾಧರಸ್ವಾಮಿ


ಹತ್ತೆಂಟು ಜನರನ್ನು ಸಾಕಿಕೊಂಡಿರುವ ಇವರು ಜಯ ಜಯಕಾರ ಹಾಕಿಸಿಕೊಂಡು ಜನರಲ್ಲಿ ರೇಜಿಗೆ ಹುಟ್ಟಿಸುತ್ತಾರೆ. ಇನ್ನೂ ಹರೆಯದವರಾಗಿಯೇ ಇರುವ ಇವರು ನಡೆದು ಬರುತ್ತಿದ್ದರೆ ಅವರ ಜೊತೆಗೆ ಇರುವವರು ಅದರ ರಟ್ಟೆ ಹಿಡಿದು ನಡೆಸಿಕೊಂಡು ಬರಬೇಕು. ಯಾವುದೇ ಅಂಗಡಿ ಮುಂಗಟ್ಟುಗಳ ಪೂಜೆಗೆ ಹೊರಟರೆಂದರೆ ಕುರುಡುಕಾಂಚಾಣ ಕುಣಿಕುಣಿಯುತ್ತ ಇವರ ಜೋಳಿಗೆ ಸೇರುತ್ತದೆ. ಶುದ್ಧ ಸೊಂಭೇರಿಗಳು, ಹುಟ್ಟಾ ಮುಗ್ಗಲಾಗೇಡಿಗಳಾದ ಸ್ವಾಮಿಗಳ ಪಾದಾರವಿಂದಗಳಿಗೆ ಎರಗುವ ಭಕ್ತರಿಗೆ ಬೇಕೆಂತಲೆ ಪಾದ ದೊರೆಯದಂತೆ ಮಾಡಿ ಕ್ರೇಜಿ ಹುಟ್ಟಿಸಬಲ್ಲರು. ಮಠಕ್ಕೆ ದರ್ಶನಕ್ಕೆಂದು ಬಂದು ಕುಳಿತುಕೊಂಡ ಭಕ್ತನಿಗೆ ದಿನಪೂರ್ತಿ ಗಡದ್ದಾಗಿ ನಿದ್ದೆ ಹೊಡೆಯುತ್ತ ಮಲಗಿಕೊಂಡು 'ಸ್ವಾಮಿಗಳು ಪೂಜೆಯಲ್ಲಿ ತೊಡಗಿದ್ದಾರೆ' ಎಂದು ಹವಾ ಎಬ್ಬಿಸಬಲ್ಲರು.

ಅಮಾವಾಸ್ಯೆ ಹುಣ್ಣಿಮೆಗಳಿಗೆ ಮಠಕ್ಕೆ ಬಂದು ದರ್ಶನ ಪಡೆಯುವ ಭಕ್ತಾದಿಗಳಿಗೆ ತಾಯಿತ-ಕರಿದಾರ ಮಂತ್ರಿಸಿ ಕೊಡುತ್ತಲೆ ಗಿಮಿಕ್ ಮಾಡುವರು.

ಅಬ್ಬೆತುಮಕೂರಿನ ಗಂಗಾಧರ ಸ್ವಾಮಿಯಂತೂ ನಾಲವಾರ ಸ್ವಾಮಿಗಿಂತಲೂ ಒಂದು ಹೆಜ್ಜೆ ಮುಂದು ಹೋಗಿ ತನ್ನನ್ನು ಮುಕುರಿಕೊಂಡಿರುವ ಜನಗಳಿಗೆ ಬಯ್ಯುತ್ತ ಹೋಗುತ್ತಾನೆ. ಅಸಡ್ಡೆಯಿಂದ ಮಾತಾಡುತ್ತಾನೆ. ಜನರಿಗೆ ತಿಳಿಯದಂತೆ ಬೇಕೆಂತಲೆ ಅಸ್ಪಷ್ಟವಾಗಿ ಮಾತಾಡುತ್ತಾನೆ. ಜನ ಇದನ್ನು ಮಟ್ಕಾ ನಂಬರ್ ಎಂದೇ ತಿಳಿದುಕೊಳ್ಳಲಿ ಎಂಬ ದುರುದ್ದೇಶ ಈ ಮನೋಭಾವನೆಗೆ ಮೂಲಕಾರಣವಾಗಿದೆ. ಸಾತ್‌ಲಿಂಗಪ್ಪ ಮೇತ್ರಿ ಎಂಬ ಮಹಾ ರಾಷ್ಟ್ರದ ಮಟ್ಕಾಬುಕ್ಕಿಗೂ ಈ ಮಠಕ್ಕೂ ಅವಿನಾಭಾವ ಸಂಬಂಧವಿದೆ. ಬಲ್ಲವರೆಲ್ಲ ಮಟ್ಕಾದಂಧೆಯನ್ನು ಹಲ್ಕಟ್ ದಂಧೆಯೆಂದು ಜರೆಯುತ್ತಿದ್ದರೆ ಈ ಗಂಗಾಧರಸ್ವಾಮಿ ಅದನ್ನು ತಮ್ಮ ಮಠದಲ್ಲಿ ನೀರೆರೆದು ಸಾಕಿ ಪೋಷಿಸುತ್ತಿದ್ದಾನೆ. ಅಂದಂತೆ ಸಾತ್‌ಲಿಂಗಪ್ಪ ಮೇತ್ರಿಯ ಸಾತಿಯಂತೂ ಈ ಮಠಕ್ಕೆ ಇದ್ದದ್ದು ಎಲ್ಲರಿಗೂ ಗೊತ್ತಿರುವಂಥದ್ದೇ ಆಗಿದೆ. ಮೇತ್ರಿ ಖರೀದಿಸಿದ ಕಾರು, ಮುಂತಾದವುಗಳನ್ನೆಲ್ಲ ಮೊದಲು ಗಂಗಾಧರ ಸ್ವಾಮಿ ಅನುಭವಿಸಬೇಕು. ಅನಂತರವೇ ಮೇತ್ರಿ ಅದನ್ನು ಪಡೆಯುತ್ತಾನಂತೆ. ಜನಸಾಮಾನ್ಯರ ಜೇಬು ಕತ್ತರಿಸಿ ಪಡೆದ ದುಡ್ಡನ್ನು ಈ ಮಠದ ಸ್ವಾಮಿ ಯಾವ ನಾಚಿಕೆ ಇಲ್ಲದೆ ಬಳಸಿಕೊಂಡು ಹಲವಾರು ಕಟ್ಟಡಗಳನ್ನೇ ಕಟ್ಟಿದ್ದಾನೆ. ಮೇತ್ರಿ ಹಾಗೂ ಗಂಗಾಧರ ಸ್ವಾಮಿಯ ಕಳ್ಳಾಟದಲ್ಲಿ ಇಲ್ಲಿನ ಜನರು ಮಾತ್ರ ಮೌಢ್ಯದ ಕೂಪಕ್ಕೆ ಮಾತ್ರವೇ ಅಲ್ಲ ಸಾಂಪತ್ತಿಕ ದಾರಿದ್ರ್ಯದಿಂದ ನಲುಗುತ್ತಿದ್ದಾರೆ.

ಇಂಥ ಕಳ್ಳಾಟ ಅದಿಯೇ ಭೀಮರಾಯನಗುಡಿಯ ಅಧಿಕಾರಿಗಳ ಕಚೇರಿಗೆ ಎದುರಾಗಿಯೇ ಇರುವ ಜಾಗದಲ್ಲಿ ವಿಶ್ವಾರಾಧ್ಯರೆಂಬ ಅವಧೂತರು ಹಾವಾಗಿ ಪ್ರತ್ಯಕ್ಷವಾಗಿದ್ದಾರೆ ಎಂಬ ಗಾಳಿ ಸುದ್ದಿ ಹಬ್ಬಿಸಿ, ಅದಕ್ಕೆ ಪೂರಕವೆಂಬಂತೆ ಅಲ್ಲೊಂದು ಗೊಡಚಿ ಹುಳುವನ್ನು ತಂದುಹಾಕಿದ್ದರು. ತದನಂತರ ಆ ಆಯಕಟ್ಟಿನ ಕೋಟ್ಯಂತರ ಬೆಲೆಬಾಳುವ ಜಾಗವನ್ನು ಪುಕ್ಕಟೆ ಹೊಡೆದ ಘಾತುಕತನ ಯಾರೂ ಮರೆತಿಲ್ಲ. ಈಗ ಅಲ್ಲೊಂದು ವಿಶ್ವಾರಾಧ್ಯ ಶಾಖಾ ಮಠ ಎಂದು ಬೋರ್ಡು ತಗಲಿಸಿ ಅಲ್ಲಿಯೂ ಅದೇ ಲೂಟಿಗೆ ಇಳಿದಿದ್ದಾನೆ. ಜಾತ್ರೆ ಗೀತ್ರೆ ಅಂದು ಹೇಳಿಕೊಂಡು ಈತ ಜನರನ್ನು ತಿಕ್ಕಿ ಮುಕ್ಕಿ ತಿನ್ನುವ ರೀತಿ ಹೇಸಿಗೆ ಹುಟ್ಟಿಸುತ್ತದೆ.

ಬಹಳಷ್ಟು ಜನ ಹೇಳುವಂತೆ ಅಬ್ಬೆತುಮಕೂರಿನ ವಿಶ್ವಾರಾಧ್ಯರು ಅವಧೂತಿಗಳು, ವೇದಾಂತ ಪಂಡಿತರು,



ದೇವೇಗೌಡರೊಂದಿಗೆ ಗಂಗಾಧರಸ್ವಾಮಿ

ಸರಳಜೀವಿಗಳು, ಬಡಬಗ್ಗರನ್ನು ಪ್ರೀತಿಸುತ್ತಿದ್ದ ನಿಗರ್ವಿಗಳು ಆಗಿದ್ದರಂತೆ. ಅವರೆಂದೂ ಚಾಲಬಾಜಿಗಳನ್ನು ಮಾಡಿಕೊಂಡು ಉಪಜೀವನ ನಡೆಸಿದವರಲ್ಲ. ತಮ್ಮ ಅನುಭವ ಹಾಗೂ ಅನುಭಾವಗಳನ್ನು ಜನರಿಗೆ ಹಂಚಿ ಧರೆಗೆ ದೊಡ್ಡವರಾದವರು. ತಾವು ಹೋದ ಕಡೆಗಳಲ್ಲೆಲ್ಲ ಶರಣಬಸವೇಶ್ವರರ ಪುರಾಣ ಹೇಳುತ್ತ ಜನರಲ್ಲಿ ಸಾತ್ವಿಕ ಭಾವವನ್ನು ಹುಟ್ಟುಹಾಕಿದವರು. ಜಂಗಮತನ ಇವರಿಗೆ ದೊಡ್ಡ ಶಿರಪೇಚೇನಾಗಿರಲಿಲ್ಲ. ಅವರು ಅಯ್ಯತನದ ಹಮ್ಮು ಬಿಮ್ಮುಗಳನ್ನು ಎಂದೂ ಪ್ರದರ್ಶಿದವರಲ್ಲವಂತೆ. ಇಂಥ ಮಠಕ್ಕೆ ಶನಿಯಂತೆ ಜಾತಿ ಸಂಬಂಧಿ ಗಂಗಾಧರ ಸ್ವಾಮಿ ತಗಲು ಬಿದ್ದಿದ್ದಾನೆ. ಈತನ ಎಗ್ಗತನದ ನಡವಳಿಕೆ, ಒರಟು ಮಾತುಗಾರಿಕೆ ಮುಂತಾದವನ್ನು ನೋಡಿದ ಜನ ಈತನನ್ನು ಬಾಂಟಿ ಡಾನ್ ಎಂಬ ಹೆಸರಿನಿಂದಲೇ ಕರೆಯುತ್ತಾರೆ.

ಇದ್ದುದರಲ್ಲಿಯೇ ಕೊಂಚ ಒರಟನಲ್ಲದ ಸಭ್ಯನಂತೆ ಕಾಣುವ ನಾಲವಾರದ ತೋಟೇಂದ್ರಸ್ವಾಮಿಯೂ ... ಬಡಂಗಿಯೇ. ಒಂದು ಕಡೆ ವಚನ ಸಾಹಿತ್ಯವನ್ನು ಪ್ರೀತಿಸುವವನಂತೆ, ಅದನ್ನು ಪೋಷಿಸುವವನಂತೆ ಕಾಣಿಸಿದರೂ ಮತ್ತೊಂದು ಕಡೆ ಕರ್ಮಠತನ... ಸಂಕೇತಗಳಾದ ರುದ್ರಾಭಿಷೇಕ, ಪಾದಪೂಜೆ, ತನಾರತಿಯಂಥ ಅವೈಜ್ಞಾನಿಕ ಆಚಾರಗಳನ್ನು ಜನರಲ್ಲಿ ಬೆಳೆಸುತ್ತಾ ನಡೆದಿದ್ದಾನೆ. ತಾನು ಅಕ್ಷರಶಃ ತೋಟೇಂದ್ರರೆಂಬ ಹಿರಿಯ ಸ್ವಾಮಿಗಳ ಪಡೆಯಚ್ಚು ಎಂದೇ ಭ್ರಮಿಸಿಕೊಂಡಿದ್ದಾನೆ. ಅವರ ಪ್ರತಿರೂಪವೇ ತಾನು ಎಂದು ಭಾವಿಸಿರುವ ಈತ ಶೋಕಿಲಾಲ ಎಂಬುದರಲ್ಲಿ ಎರಡು ಮಾತಿಲ್ಲ. ಇಂಥ ಶೋಕಿತನಕ್ಕೆ ಬಿದ್ದೇ ಹಿಂದೊಮ್ಮೆ ನಟ ಪ್ರೇಮಾಳೊಂದಿಗೆ ಶೂಟಿಂಗ್ ತಾಣವೊಂದರಲ್ಲಿ ತೆಗೆಸಿಕೊಂಡ ಚಿತ್ರ ಹಲವಾರು ರಾದ್ಧಾಂತಗಳಿಗೆ ಕಾರಣವಾಗಿತ್ತು.

ತಿಂಗಳಿಗೊಂದು ಸಲ ಮಠದಿಂದಲೇ ಪ್ರಕಟವಾಗುವ ತನಾರತಿಯ ವರ್ಣಪುಟಗಳಲ್ಲಿ ಸ್ವಾಮಿಯು ರಾಜಕಾರಣಿಗಳ ಅಜು-ಬಾಜು ಕುಳಿತು ತೆಗೆಸಿಕೊಂಡ ಫೋಟೋಗಳಲ್ಲಿನ ಪೋಜು ನಟರನ್ನೂ ನಾಚಿಸುವಂತಿರುತ್ತವೆ. ನಾಡಿನ ಸಾಹಿತಿ, ಕಲಾವಿದರು, ಪತ್ರಕರ್ತರನ್ನು ಕರೆ ಕರೆದು ಸನ್ಮಾನಿಸಿ ಪ್ರೀತಿ ತೋರುತ್ತಲೇ ಜನಸಾಮಾನ್ಯರನ್ನು ತಮ್ಮ ಧೂರ್ತ ನಡವಳಿಕೆಗಳ ಮೂಲಕ ಹರಿದು ತಿನ್ನುವುದು ಸರಿಯಲ್ಲ. ಸದಾ ಬಾಯಲ್ಲಿ ಗುಟ್ಕಾ ಹಾಕಿಕೊಂಡು, ಜರಿಯ ಬಟ್ಟೆಗಳಿಂದ ಮಿರಿ-ಮಿರಿ ಮಿಂಚುತ್ತಿರುವ ತೋಟೇಂದ್ರನನ್ನು ಬಹುತೇಕರು ಬೆಂಗಳೂರು ಡಾನ್ ಎಂದು ಕರೆಯುತ್ತಾರೆ.


ಕಲಬುರ್ಗಿ ಜಿಲ್ಲೆಯ ಈ ಧೂರ್ತಸ್ವಾಮಿಗಳಿಬ್ಬರ ಬಳಿ ಸದಾ ಮುಕುರಿಕೊಂಡಿರುವ ಭಕ್ತರನ್ನು ಹೇಗಾದರೂ ಸೈ ತಮ್ಮ ಬುಟ್ಟಿಗೆ ಹಾಕಿಕೊಳ್ಳಬೇಕೆಂದು ಇಲ್ಲಿನ ರಾಜಕಾರಣಿಗಳೂ ಪೈಪೋಟಿಗೆ ಇಳಿದಿದ್ದಾರೆ. ಕೆಲವರಂತೂ ಸುಖಾಸುಮ್ಮನೆ ಮಠಕ್ಕೆ ಭೇಟಿಕೊಟ್ಟು ಸನ್ಮಾನಿಸಿಕೊಂಡು ಪತ್ರಿಕೆಗಳಿಗೆ ಪೋಜು ಕೊಡುತ್ತಾರೆ. ಹಲವರಂತೂ ಜಾತ್ರೆ ಸಮಯಗಳಲ್ಲಿ ಮಿರಿಮಿರಿ ಮಿಂಚುತ್ತಾರೆ. ಈ ಭಾಗಕ್ಕೆ ಯಾವುದೇ ಪಕ್ಷದ ನಾಯಕ ಬಂದರೂ ಅವರನ್ನು ಮಠಕ್ಕೆ ಕರೆತಂದು ಜನರನ್ನು ಕುರಿಗಳನ್ನಾಗಿ ಮಾಡುತ್ತಾ ಹೊರಟಿದ್ದಾರೆ. ಮಠದ ಊಳಿಗಕ್ಕೆ ಬಿದ್ದಿರುವ ಕೆಲವು ಜನ ಪತ್ರಕರ್ತರು ದಿನನಿತ್ಯ ಸ್ವಾಮಿಗಳ ಮೆರವಣಿಗೆ, ಉರವಣಿಗೆಗಳನ್ನು ತಾಜಾ ತಾಜಾ ಸುದ್ದಿಯೆಂಬಂತೆ ಬಿಂಬಿಸುತ್ತ ನಡೆದಿದ್ದಾರೆ.

ಬಸವಾದಿ ಶರಣರ ವಿಚಾರಗಳನ್ನು ಮೈಗೂಡಿಸಿಕೊಂಡು ಜನಸಾಮಾನ್ಯರಲ್ಲಿ ಜಾಗೃತೆಯನ್ನು ತರಬೇಕಿರುವ ಈ ಮಠಗಳು ಮೌಢ್ಯದ ಕೂಪಗಳಾಗಿವೆ. ಬಸವಣ್ಣನನ್ನು ಗುತ್ತಿಗೆ ಹಿಡಿದಂತೆ ವರ್ತಿಸುವ ಮೂಲಕ ಹಿಂದುಳಿದ ಜನಾಂಗದಲ್ಲೂ ಲಿಂಗಾಯತರ ಬಗ್ಗೆ ಕ್ರೋಧ ತುಂಬುತ್ತಿದೆ. ಈ ಎರಡೂ ಮಠಗಳ ಸ್ವಾಮಿಗಳು ಮನಸ್ಸು ಮಾಡಿದ್ದರೆ ಇಡೀ ಕರ್ನಾಟಕವೇ ತಿರುಗಿ ತಮ್ಮತ್ತ ನೋಡುವ ವ್ಯಕ್ತಿತ್ವ ಬೆಳೆಸಿಕೊಳ್ಳಬಹುದಿತ್ತು. ಇದೆಲ್ಲ ಮರೆತಿರುವ ಗಂಗಾಧರ ಹಾಗೂ ತೋಟೇಂದ್ರಸ್ವಾಮಿಗಳು ತಮಗೆ ಸಿಗುತ್ತಿರುವ ಆದರಾತಿಥ್ಯವನ್ನು ತಪ್ಪಾಗಿ ತಿಳಿದಿದ್ದಾರೆ. ಅದನ್ನು ಸರಿಯಾಗಿ ತಿಳಿದುಕೊಂಡು ಆತ್ಮಾವಲೋಕನ ಮಾಡಿಕೊಂಡರೆ [illegible] ಕಲಬುರ್ಗಿಯಿಂದಲೇ ಕ್ರಾಂತಿಯ ಕಿಡಿ ಹೊಮ್ಮಬಲ್ಲರು.

ಆದರೆ ಅದೇ ಪುರೋಹಿತಶಾಹಿಗಳ ಕಪಿಮುಷ್ಠಿಗೆ ... ಮೌಢ್ಯವನ್ನು ಹಂಚುವ [illegible] ಮಠಗಳಿಂದ ಇನ್ನ ... [illegible]

-[illegible]


# ಕ್ರಿಕೆಟ್: ಅಮೆರಿಕಕ್ಕೆ ವಿಶ್ವಕಪ್



"ಇದಕ್ಕೆ ಹುಂಬರು ಎಂಬರು ಯುದ್ಧ" ಇದು ಎರಿಕ್ ಮಾರಿಯಾ ರಿಮಾರ್ಕ್. ಯುದ್ಧದ ದಾರುಣ ಅನುಭವ ಮತ್ತು ಪರಿಣಾಮಗಳನ್ನು ಹೃದಯ ವಿದ್ರಾವಕವಾಗಿ ವಿವರಿಸುವ ಕಾದಂಬರಿಯ ಕನ್ನಡ ಅನುವಾದಕಿಯ ಹೆಸರು. ಇಂದಿನ ಕ್ರಿಕೆಟ್‌ಗೆ ಅನ್ವಯಿಸಿ ಹೇಳುವುದಿದ್ದರೆ "ಇದಕ್ಕೆ ಹುಂಬರು ಎಂಬರು ಕ್ರೀಡೆ". ಯಾಕೆಂದರೆ ಈ ಕ್ರೀಡೆ ಇಂದು ಅಷ್ಟೇ ಹೃದಯವಿದ್ರಾವಕವಾದ್ದು.

ಈಗ ಕೆಲವು ತಿಂಗಳ ಹಿಂದೆ ಕೆರಿಬಿಯನ್ ದ್ವೀಪಗಳಲ್ಲಿ ಜರುಗಿದ ಏಕದಿನ ಕ್ರಿಕೆಟ್‌ನ ವಿಶ್ವಕಪ್‌ನಲ್ಲಿ ಭಾರತ ಮತ್ತು ಪಾಕಿಸ್ತಾನಗಳು ಪ್ರಥಮ ಹಂತದಲ್ಲೇ ನಿರ್ಗಮಿಸಿದಾಗ ನಮ್ಮೆರಡು ದೇಶಗಳ ಕ್ರಿಕೆಟ್ ಅಭಿಮಾನಿಗಳಿಗಿಂತಲೂ ಹೆಚ್ಚು ತೀವ್ರವಾಗಿ ನಿರಾಶೆಗೊಂಡವರು ಪೆಪ್ಸಿ, ಕೊಕೋಕೋಲಾ ಮೊದಲಾದ ವಿದೇಶಿ ಕಂಪನಿಗಳು. ಈ ಕಂಪನಿಗಳು ಕೋಟ್ಯಂತರ ಮೊತ್ತ ನಷ್ಟ ಹೊಂದಿದ ಬಗ್ಗೆ ಪತ್ರಿಕೆಗಳು ವರದಿ ಮಾಡಿದ್ದವು. ಈಗ ಅಷ್ಟೇ ಅನಿರೀಕ್ಷಿತವಾಗಿ ಭಾರತ-ಪಾಕಿಸ್ತಾನ ಟಿ-20 ಫೈನಲ್ಸ್ ತಲುಪಿ ಭಾರತ ಗೆಲ್ಲುವುದರೊಂದಿಗೆ ನಮ್ಮ ಕ್ರಿಕೆಟ್ ಅಭಿಮಾನಿಗಳ ಸ್ಮಶಾನ ವೈರಾಗ್ಯ ನೀಗಿಕೊಂಡಿದೆ; ಮತ್ತೆ ಈ ವಿದೇಶಿ ಕಂಪನಿಗಳು ಕೋಟಿಕೋಟಿ ಹಣವನ್ನು ಬಾಚಿಕೊಳ್ಳಲಿವೆ.

ಈಗ ಕ್ರಿಕೆಟ್ ಒಂದು ದಂಧೆ. ಈ ಆಟವನ್ನಾಡುವ ನಮ್ಮ ಆರಾಧ್ಯದೈವಗಳು ಹಣ ಸಂಪಾದಿಸುವ ಗೀಳಿನಲ್ಲಿ ದಿನನಿತ್ಯ ಮುಳುಗೇಳುತ್ತಿದ್ದಾರೆ. ನಾವೆಷ್ಟು ಅಭಿಮಾನಪರರೆಂದರೆ ನಮ್ಮ ಕ್ರಿಕೆಟ್ ಕಲಿಗಳ ಹೆಸರನ್ನು ರಸ್ತೆಗೆ, ಸರ್ಕಲ್‌ಗೆ, ಮೋರಿಗೆ ಎಲ್ಲೆಲ್ಲೂ ಇಡಲು ಮುಂದಾಗಿದ್ದೇವೆ. ಆದರೆ "ಮೈಸೂರು ಸ್ಯಾಂಡಲ್ ಸೋಪ್ ನಮ್ಮ ಕರ್ನಾಟಕದ ಹೆಮ್ಮೆಯ ಉತ್ಪನ್ನ. ಬಾರಯ್ಯ ಇದಕ್ಕೊಂದು ಜಾಹೀರಾತು ನೀಡು, ಸಾವಿನ ಹೊಸ್ತಿಲಲ್ಲಿರುವ ಸಂಸ್ಥೆಗೆ ಒಂದಿಷ್ಟು ಜೀವ ಕೊಡು" ಅಂದಿದ್ದಕ್ಕೆ ಇದೇ ದ್ರಾವಿಡ್ ಮೂರು ಕೋಟಿ ರೂಪಾಯಿಗಳ ಸಂಭಾವನೆ ಕೇಳಿದ್ದ. ಕೊನೆಗೆ ಉತ್ತರ ದೇಶದ ಜಾರ್ಖಂಡ್‌ನಿಂದ ಧೋನಿಯನ್ನು ಕರೆಸಿ ಅರವತ್ತೇಳು ಲಕ್ಷ ಸುರಿದು ಮೈಸೂರು ಸ್ಯಾಂಡಲ್ ಸೋಪ್‌ನ ರಾಯಭಾರಿಯನ್ನಾಗಿಸಿಯಾಯಿತು!




ಆಂಧ್ರದ ಹೆಮ್ಮೆಯ ಸುಪುತ್ರ ಪುಲ್ಲೇಲ ಗೋಪಿಚಂದ ನಮ್ಮ ದೇಶದ ಆತ್ಮಾಭಿಮಾನದ ಸಂಕೇತವಾಗಬೇಕಿತ್ತು. ಬ್ಯಾಡ್‌ಮಿಂಟನ್ ಆಟಗಾರನೊಬ್ಬ ಜೀವಿತ ಕಾಲದಲ್ಲಿ ಗೆಲ್ಲಲು ಕನಸು ಕಾಣುವ ಆಲ್ ಇಂಗ್ಲೆಂಡ್ ಚಾಂಪಿಯನ್‌ಶಿಪ್‌ಅನ್ನು ಪುಲ್ಲೇಲ ಗೋಪಿಚಂದ ಗೆದ್ದುಕೊಂಡಾಗ ಯಾರು ಹೇಗೆ ಸ್ವಾಗತಿಸಿದರು ಎನ್ನುವ ನೆನಪು ಯಾರಿಗೂ ಇಲ್ಲ. ಹಣದ ಥೈಲಿ ಹಿಡಿದುಕೊಂಡು ಪೆಪ್ಸಿ ಮತ್ತು ಕೊಕೋಕೋಲಾ ಕಂಪನಿಗಳು ಮನೆಗೆ ಬಂದಾಗ ವಿದೇಶಿ ಕಂಪನಿಗಳ ಜಾಹೀರಾತುಗಳಲ್ಲಿ ಭಾಗವಹಿಸುವುದಿಲ್ಲವೆಂದು ಸ್ಪಷ್ಟ ವೈಚಾರಿಕ ಪ್ರಜ್ಞೆಯನ್ನು ವ್ಯಕ್ತಪಡಿಸಿದ ಧೀಮಂತ ಈತ. ಈ ದೇಶದ ಬಡವರ ನೆತ್ತರನ್ನು ಹೀರುವ ಕಂಪನಿಗಳ ಕಾರ್ಯಾಚರಣೆಗಳ ಬಗ್ಗೆ ಈತನಿಗೆ ಖಚಿತ ಅಭಿಪ್ರಾಯವಿತ್ತು.

ನಮ್ಮ ಇಂದಿನ ಕ್ರಿಕೆಟ್ ತಾರೆಗಳಲ್ಲಿ ಅಂತಹ ಯೋಗ್ಯತೆ ಇರುವಾತ ಒಬ್ಬನಿದ್ದರೆ ಹೇಳಿ.

ಅಂತಹ ಮಹಾನ್ ತಾರೆಯೇನೂ ಅಲ್ಲದ ಕನ್ನಡದ ನಟ ಉಪೇಂದ್ರ ಕರ್ನಾಟಕದ ರೈತರಿಗೆ ಕೊಂಚ ನೆರವಾಗಲಿ ಎಂಬ ಉದಾರ ಮನಸ್ಸಿನಿಂದ 'ನಂದಿನಿ' ಉತ್ಪನ್ನಗಳಿಗೆ ಉಚಿತ ಜಾಹೀರಾತು ನೀಡಿದ್ದಾರೆ. ಈ ಬದ್ಧತೆ ಎಲ್ಲ ಕಾಲದಲ್ಲೂ ನೆನಪಲ್ಲಿ ಉಳಿಯಬೇಕಲ್ಲದೆ ನಾಳೆ ಮುರಿಯಲ್ಪಡಲೆಂದೇ ಇಂದು ನಿರ್ಮಿಸಲ್ಪಡುತ್ತಿರುವ ಅಸಂಖ್ಯ ಕ್ರಿಕೆಟ್ ದಾಖಲೆಗಳಲ್ಲ.

ಕೊಕೋಕೋಲಾ ವಿಷಯುಕ್ತವಲ್ಲ ಎಂದು ಶಿಫಾರಸ್ಸು ಮಾಡುವ, 'ಲಗಾನ್' ಖ್ಯಾತಿಯ ಅಮೀರ್ ಖಾನ್ ಮತ್ತು "ಪೆಪ್ಸಿ ಬ್ಯಾನ್ ಆದರೆ ಅದನ್ನು ಕುಡಿಯಲು ಅಮೆರಿಕಕ್ಕೆ ಹೋಗುತ್ತೇನೆ" ಎನ್ನುವ 'ಚಕ್ ದೆ ಇಂಡಿಯಾ' ಪ್ರಸಿದ್ಧಿಯ ಶಾರೂಕ್ ಖಾನ್‌ಗಳನ್ನು ಉಪೇಂದ್ರರ ಮುಂದೆ ನೀವಾಳಿಸಿ ಒಗೆಯಬೇಕು.

ನಮ್ಮ ಎಳನೀರು, ನಿಂಬೆ ಶರಬತ್ತು ಮುಂದೆ ಈ ಪೆಪ್ಸಿ, ಕೋಲಾಗಳೆಲ್ಲ ಅತ್ಯಂತ ಕಡಿಮೆ ಉತ್ಪಾದನಾ ವೆಚ್ಚದ, ಕಡಿಮೆ ಗುಣಮಟ್ಟದ ಅಗ್ಗದ ಪಾನೀಯಗಳು. ಇಂತಹ ಕಚಡಾ ದ್ರವವನ್ನು ಕುಡಿಯಲು ಅಮೆರಿಕಕ್ಕೆ ಹೋಗುವವರೆಲ್ಲ ಹೋಗಲಿ ಬಿಡಿ. ಆದರೆ ಅವರನ್ನು ನಮ್ಮ ಐಕಾನ್‌ಗಳೆಂದು ಪರಿಗಣಿಸುವುದು ನಮಗರಿವಿಲ್ಲದೆ ಮಾಡುವ ಪಾತಕ. ಶಾರೂಕ್ ಖಾನ್ ದಕ್ಷಿಣ ಆಫ್ರಿಕಾಕ್ಕೆ ಭಾರತದ ತಂಡಕ್ಕೆ ಸ್ಫೂರ್ತಿ ತುಂಬಲು ಹೋಗಿದ್ದೆ ಅಂದಿದ್ದಾನೆ. ಆತ ತನ್ನ ಸ್ವಂತ ಖರ್ಚಿನಲ್ಲಿ ಹೋಗಿಬಂದನೋ ಅಥವಾ ಪೆಪ್ಸಿ ಹಣದಲ್ಲೋ ಎನ್ನುವುದು ತನಿಖೆಗೆ ಯೋಗ್ಯವಾದ ವಿಚಾರ.

ನಮ್ಮ ದೇಶದ ಜನ ಹುಚ್ಚು ಪ್ರೀತಿಯಲ್ಲಿ ಪೋಷಿಸುತ್ತಿರುವ ಕ್ರಿಕೆಟ್ ಆಟವನ್ನು ಪ್ರಪಂಚದಾದ್ಯಂತ ನೆಟ್ಟಗೆ ಹತ್ತು ದೇಶಗಳು ಕೂಡ ಆಡುವುದಿಲ್ಲ. ಆಸ್ಟ್ರೇಲಿಯಾ ಖಂಡದಲ್ಲಿ ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ ದೇಶಗಳು ಇದನ್ನು ಆಡಿದರೆ ಸಮಗ್ರ ಅಮೆರಿಕ ಖಂಡದಲ್ಲಿ ಕ್ರಿ... ಆಡುವುದು ವೆಸ್ಟ್ ಇಂಡೀಸ್ ದ್ವೀಪ ರಾಷ್ಟ್ರಗಳು ಮಾ... ಅದೂ ಒಂದು ತಂಡದಾಗಿ. ಮತ್ತೆ ಯುರೋಪ್‌ನ... ಕೇವಲ ಇಂಗ್ಲೆಂಡ್ ದೇಶ ಒಂದರಲ್ಲಿ ಮಾತ್ರ ಈ ಆಟ... ಆಡಲಾಗುತ್ತದೆ. ಆಫ್ರಿಕಾ ಖಂಡದ ದಕ್ಷಿಣ ಆಫ್ರಿಕಾ ಮ... ಜಿಂಬಾಬ್ವೆಗಳಲ್ಲಿ ಇದು ಬಿಳಿತೊಗಲಿನ ಜನರ ಆ... ಅಂತೆಯೇ ವರ್ಣ ತಾರತಮ್ಯದ ಸಂಕೇತ. ಏಷ್ಯಾದ... ಸ್ವಲ್ಪ ಮಾತ್ರವೇ ಬೇರೆಯ ಪರಿಸ್ಥಿತಿ ಇದೆ. ಭಾರ... ಪಾಕಿಸ್ತಾನ, ಶ್ರೀಲಂಕಾ ಮತ್ತು ಬಾಂಗ್ಲಾ ದೇಶಗಳ... ಕ್ರಿಕೆಟ್ ಪ್ರಚಲಿತದಲ್ಲಿರುವುದರಿಂದ ಇದಕ್ಕೆ ಒಂದಿ... ಮನ್ನಣೆ ಸಿಕ್ಕಿದೆ.

ಮುಖ್ಯವಾದ ಅಂಶ ಯಾವುದೆಂದರೆ ಒಲಂಪಿಕ್ಸ್‌ನ... ಮಾನ್ಯತೆ ಪಡೆದುಕೊಳ್ಳಲು ಅಗತ್ಯವಿರುವಷ್ಟು ... ಸಂಖ್ಯೆಯ ದೇಶಗಳಲ್ಲಿ ಇದನ್ನು ಆಡದಿರುವುದರಿಂ... ಕ್ರಿಕೆಟ್‌ಗೆ ವಿಶ್ವಮನ್ನಣೆ ಇಲ್ಲ. ಈ ಸೌಲಭ್ಯವನ್ನು ಹೇಗಾದರ... ದಕ್ಕಿಸಿಕೊಳ್ಳಬೇಕೆಂಬ ಉದ್ದೇಶದಿಂದ ಟಿ-20 ಇಂದು ಹುಟ್ಟಿಕೊಂಡಿದೆ. ಅದರೊಂದಿಗೆ ಹಲವು ದೇಶಗಳ... ಈ ಸ್ವರೂಪದ ಕ್ರಿಕೆಟ್‌ನ ಪ್ರಚಾರದ ಕೆಲಸ ಮುನ್ನಡೆಯಲಿ... ಮತ್ತು ಒಲಂಪಿಕ್ಸ್‌ನಲ್ಲಿ ಮಾನ್ಯತೆ ಪಡೆದುಕೊಳ್ಳಲು ... ನಡೆಯಲಿದೆ. ಈ ಹಿನ್ನೆಲೆಯಲ್ಲಿ ಅಮೆರಿ... ಪ್ರಾಯೋಜಕತ್ವದ ಕಂಪೆನಿಗಳು ಫೀಲ್ಡ್‌ಗೆ ಇಳಿಯುತ್ತ...

ಟಿ-20 ಗೆದ್ದ ತಂಡಕ್ಕೆ ಮುಂಬೈನಲ್ಲಿ ನೀಡಲಾ... ಸ್ವಾಗತ ಸಭ್ಯತೆಯ ಎಲ್ಲೆಯನ್ನು ಮೀರಿತ್ತು. ಇದು ನಮ್ಮ... ಹಾಕಿ ಆಟಗಾರರ ಗಾಯಕ್ಕೆ ಇನ್ನಷ್ಟು ಉಪ್ಪು ಸವರಿ... ಪ್ರತಿಭಟನೆಯ ಮಾತು ಕೇಳಿಬರುತ್ತಿದೆ. ಇದು ಸಹ... ಸಹ. ಹೇಳಿಕೇಳಿ ಹಾಕಿ ನಮ್ಮ ರಾಷ್ಟ್ರೀಯ ಕ್ರೀಡೆ. ಇದ... ಹೇಳಿಕೇಳಿ ಮಾತ್ರ.


ಕ್ರಿಕೆಟ್‌ನ ಹುಚ್ಚುಹೊಳೆಯಲ್ಲಿ ಹಾಕಿ ಮಾತ್ರವ... ಅಥ್ಲೆಟಿಕ್ಸ್, ವಾಲಿಬಾಲ್, ಫುಟ್‌ಬಾಲ್, ನಮ್ಮದೇ ಕಬ... ಹೀಗೆ ಯಾವ ಕ್ರೀಡೆಗೂ ಉಳಿಗಾಲವಿಲ್ಲ. ಕಳೆದ ಸ... ಸಚಿನ್ ತೆಂಡೂಲ್ಕರ್‌ಗೆ ಭಾರತರತ್ನ ಕೊಡುವ ಪ್ರಸ್ತಾವಗಳು ನಡೆದವು. ದೇಶದ ಈ ಅತ್ಯುನ್ನತ ಪ್ರಶಸ್ತಿಯನ್ನು ಕ್ರೀಡಾ ವಿಭಾಗದಲ್ಲಿ ಕೊಡುವುದಿದ್ದರೆ ನಮ್ಮ ದೇಶದ ಹೆಮ್ಮೆಯ ಹೆಣ್ಣುಮಗಳು ಪಿ.ಟಿ.ಉಷಾ, ಹಾರುವ ಸಿಖ್ ಮಿಲ್ಖಾ ಸಿಂಗ್ ಅಥವಾ ಹಾಕಿಯ ಮಾಂತ್ರಿಕ ಧನರಾಜ್ ಪಿ... ಅದಕ್ಕೆ ಅರ್ಹತೆ ಹೊಂದಿರುವವರು. ಆದರೆ ನಮ್ಮ... ಮತಿಹೀನ ರಾಜಕಾರಣಿಗಳ ಕಟಾಕ್ಷದಿಂದ ನಾಳೆ ಸಚಿನ್ ತೆಂಡೂಲ್ಕರ್ ಈ ಗೌರವವನ್ನು ಸ್ವೀಕರಿಸುವ ದೃಶ್ಯವನ್ನು ನೋಡುವ ದುರಾದೃಷ್ಟ ನಮ್ಮ ನಿಮ್ಮೆಲ್ಲರದ್ದಾಗಲಿದೆ.

ಭಾರತ-ಪಾಕಿಸ್ತಾನ ಟಿ-20 ಫೈನಲ್ಸ್ ತಲುಪಿದ... ಈ ದೇಶಗಳ ಸೋಲು ಮತ್ತು ದುರಂತ. ಅದರಲ್ಲ...

---

# ತುರ್ತು ಪರಿಸ್ಥಿತಿ

## ಕಂಡೆಯ ನೆನಪುಗಳು 7



■ ಈಚರ ವಾರಿಯರ್

ಕನ್ನಡಕ್ಕೆ: ಸಾರಾ ಅಬೂಬಕ್ಕರ್

ಕೇರಳದ ಸಾರ್ವಜನಿಕ ಬದುಕಿನಲ್ಲಿ ತುರ್ತು ಪರಿಸ್ಥಿತಿ ಉಂಟುಮಾಡಿದ ಸ್ವಾಧೀನ ಬಹಳ ದೊಡ್ಡದಾಗಿತ್ತು. ತುರ್ತು ಪರಿಸ್ಥಿತಿಯನ್ನು ನಗ್ನವಾಗಿ ಬೆಂಬಲಿಸಿದ್ದವರೂ ಕೂಡಾ ಒಂದು ರೀತಿಯ ಸ್ವಾತಂತ್ರ್ಯ ಶೂನ್ಯತೆಯನ್ನನುಭವಿಸಿದರು. ಪತ್ರಿಕೆಗಳು ಮಾತ್ರವಲ್ಲ ನಾಗರಿಕರ ಮಾತುಗಳನ್ನೂ ಕೂಡಾ ಸೆನ್ಸಾರ್ ಮಾಡಲಾಯಿತು. ಮೂಲೆಮೂಲೆಗಳಲ್ಲಿ ನಿಂತು ಮಾತನಾಡುವುದಕ್ಕಾಗಲಿ, ಇಂದಿರಾಗಾಂಧಿಯನ್ನಾಗಲೀ, ಕರುಣಾಕರನನ್ನಾಗಲಿ ವಿಮರ್ಶೆ ಮಾಡುವುದಕ್ಕಾಗಲಿ ಜನರು ಭಯಭೀತರಾಗುತ್ತಿದ್ದರು.

ಹೃದಯಶೂನ್ಯರಾದ ಕೆಲವು ಕಾಂಗ್ರೆಸ್ಸಿಗರು ಎಡಪಕ್ಷಗಳ ಕಾರ್ಯಕರ್ತರನ್ನು ಮತ್ತು ರಾಷ್ಟ್ರೀಯ ಶತ್ರುಗಳನ್ನು ಪೊಲೀಸರಿಂದ ಬೇಟೆಯಾಡಿಸುವುದರಲ್ಲಿ ಸಂತೋಷ ಪ್ರಕಟಿಸಿದರು. ಉದ್ಯೋಗಿಗಳು ಕೂಡಾ ಭಯಭೀತರಾಗಿದ್ದರು.

ರಾಜನನ್ನು ಪೊಲೀಸರು ಬಂಧಿಸಿದ ರೀತಿ ನೋಡಿದಾಗ ಇಂದಿಗೂ ನಿಯಮ ವ್ಯವಸ್ಥೆ ಹೇಗೆ ಬೇಟೆಗಾರನ ರೂಪ ಪಡೆಯುತ್ತದೆಂಬುದು ಸಮನಾಗಿ ಮನವರಿಕೆಯಾಗುತ್ತದೆ. ಫಾರೂಕ್ ಕಾಲೇಜಿನ ಯುವಜನ ಮೇಳದ ಕಾರ್ಯಕ್ರಮಗಳು ಮುಗಿದ ಬಳಿಕ ರೀಜನಲ್ ಇಂಜಿನಿಯರಿಂಗ್ ಕಾಲೇಜಿನಿಂದ ಅವನೊಡನೆ ಬಂದಿದ್ದ ಇತರ ವಿದ್ಯಾರ್ಥಿಗಳೂ, ಅಧ್ಯಾಪಕರೂ, ರಾಜನ ಹಾಸ್ಟೆಲಿನ ಮುಂದೆ ಬಸ್ಸಿನಿಂದಿಳಿದರು. ಕೂಡಲೇ ಪೊಲೀಸರು ಬಲ ಪ್ರಯೋಗಿಸಿ ಅವರನ್ನು ಬಂಧಿಸಿದರು. ಈ ಸಮಯದಲ್ಲಿ ಪೊಲೀಸರ ನಡವಳಿಕೆ ಕಂಡರೆ, ಓರ್ವ ಅಪರಾಧಿಯನ್ನು ಅನ್ವೇಷಣೆ ಮಾಡಿ ಕಂಡು ಹಿಡಿಯುತ್ತಿದ್ದಾರೆ ಎಂದು ಅನ್ನಿಸುವುದಿಲ್ಲ. ಬಸ್ಸಿನಲ್ಲಿದ್ದ ಉಳಿದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರೊಡನೆ ರಾಜನೂ ಬಸ್ಸಿನಿಂದಿಳಿದಿದ್ದನು. ಆದುದರಿಂದ ಆ ಸಮಯದವರೆಗೆ ರಾಜನು ಎಲ್ಲಿದ್ದನು, ಏನು ಮಾಡುತ್ತಿದ್ದನು ಎಂದು ತಿಳಿಯಲು ಆಗ್ರಹವಿದ್ದಿದ್ದರೆ ಅದು ಬಹಳ ಸುಲಭದಲ್ಲಿ ಸಾಧ್ಯವಾಗುತ್ತಿತ್ತು. ಹಿಂದಿನ ದಿನ ನಡೆದ ಪೊಲೀಸ್ ಠಾಣೆಯ ಆಕ್ರಮಣದಲ್ಲಿ ನನ್ನ ಮಗನೂ ಭಾಗವಹಿಸಿದ್ದನೋ ಎಂದು ತಿಳಿಯಲು ಇವರೊಡನೆ ಕೆಲವು ಪ್ರಶ್ನೆಗಳನ್ನು ಕೇಳಿದ್ದರೆ ಸಾಕಾಗುತ್ತಿತ್ತು. ಆದರೆ ಅಪರಾಧಿ ಅವರ ಗುರಿಯೇ ಆಗಿರಲಿಲ್ಲ. ರಾಜನನ್ನು ಬೇಟೆಯಾಡಿ ಕೊಲ್ಲಬೇಕು ಎಂಬುದು ಮಾತ್ರ ಅವರ ಗುರಿಯಾಗಿತ್ತು. ತುರ್ತು ಪರಿಸ್ಥಿತಿ ಸಂದರ್ಭದ ಅಪರಾಧ ತನಿಖಾ ಸಂಪ್ರದಾಯ ಅದರ ನಗ್ನ ರೂಪದಲ್ಲಿ ಇಲ್ಲಿ ಬೆಳಕಿಗೆ ಬಂದಿತ್ತು. ಆ ಕಾಲದ ನಾಗರಿಕ ಹಕ್ಕುಗಳ ಕುರಿತು ತಿಳಿದುಕೊಳ್ಳಲು ನಾನೊಂದು ಚಿಕ್ಕ ವಿವರ ನೀಡಲಿಚ್ಛಿಸುತ್ತೇನೆ.

ರಾಜನ್ ಮೊಕದ್ದಮೆ ಸಂಬಂಧವಾಗಿ ಶ್ರೇಷ್ಠ ನ್ಯಾಯಾಲಯದಲ್ಲಿ ವಾದ ನಡೆಯುತ್ತಿತ್ತು (ಮೊಕದ್ದಮೆಗೆ ಸಂಬಂಧಪಟ್ಟ ವಿವರಗಳನ್ನು ಆಮೇಲೆ ವಿವರಿಸುವೆ) ನ್ಯಾಯವಾದಿ ನೀರೇನ್ ಡೇ ತಮ್ಮ ವಾದ, ಪ್ರತಿವಾದದೆಡೆಯಲ್ಲಿ ಹೀಗೆಂದರು:

"ಇಂದು ಯಾವ ನಾಗರಿಕನನ್ನೂ ರಸ್ತೆಯ ಮಧ್ಯದಲ್ಲಿ ಗುಂಡಿಟ್ಟು ಕೊಲ್ಲುವ ಅಧಿಕಾರ ಎಲ್ಲಾ ಪೊಲೀಸರಿಗೂ ಇದೆ. ಅದನ್ನು ಪ್ರಶ್ನಿಸಲು ಯಾರಿಗೂ ಅಧಿಕಾರವಿಲ್ಲ."

ತುರ್ತು ಪರಿಸ್ಥಿತಿ ಸಂದರ್ಭದ ಭಯಂಕರವಾದ ಯಥಾರ್ಥ ಚಿತ್ರಣ ಈ ಮಾತುಗಳಿಂದ ಕಂಡುಬರುತ್ತದೆ. ಇಂತಹ ಪರಿಸ್ಥಿತಿಯ ಫಲವಾಗಿಯೇ ರಾಜನ್ ಘಟನೆ ನಡೆಯಿತು ಎಂದು ಊಹಿಸಬಹುದು.


1977ರ ಫೆಬ್ರವರಿ 22ರಂದು ತುರ್ತುಪರಿಸ್ಥಿತಿಯನ್ನು ಹಿಂತೆಗೆಯಲಾಯಿತು. ಕಳೆದ ಹಲವು ದಿನಗಳಿಂದ ರಾಜನನ್ನು ಕಂಡುಹಿಡಿಯಲು ಪ್ರಯತ್ನಿಸಿದ ನನ್ನ ಶ್ರಮ ಮಂದಗತಿಯಲ್ಲಿ ಮುಂದುವರಿಯಿತು. ಆದರೆ ತುರ್ತುಪರಿಸ್ಥಿತಿಯ ಹಿಂತೆಗೆತ ಕೇರಳದ ಸಮೂಹ ಚಲನೆಗಳಲ್ಲಿ ದೊಡ್ಡ ಬದಲಾವಣೆ ಉಂಟುಮಾಡಿತು. ಸ್ವಾತಂತ್ರ್ಯದ ಶುದ್ಧವಾಯು ಹಲವು ಭಾಗಗಳಲ್ಲಿ ಮುನ್ನುಗ್ಗಿತು. ಸ್ವೇಚ್ಛಾಧಿಪತ್ಯದ ನಿಷ್ಠುರವಾದ ಮುಳ್ಳು ಮೊನೆಗಳಿಂದ ಎದೆಗೆ ಚುಚ್ಚಿಸಿಕೊಂಡ ಮನುಷ್ಯರಿಂದ ಆಶ್ವಾಸನೆಯ ನಿಟ್ಟುಸಿರು ಹೊರಬಿತ್ತು. ಆಹ್ಲಾದದ ಗಂಟಾನಾದ ಎಲ್ಲೆಲ್ಲೂ ಮೊಳಗಿತು. ಜನತೆಯ ವಿಮೋಚನೆಯ ಆಚರಣೆಯಾಗಿ ಹಲವು ಭಾಗಗಳಲ್ಲಿ ಸಂಭ್ರಮೋಲ್ಲಾಸಗಳ ಕಾರ್ಯಕ್ರಮ ಗಳೂ, ಜಾಥಾಗಳೂ ನಡೆದವು.

ರಾಷ್ಟ್ರೀಯತೆ ಮತ್ತು ಆಡಳಿತದಲ್ಲಿನ ಬದಲಾವಣೆ ನನ್ನನ್ನು ಮತ್ತೊಮ್ಮೆ ಕಾರ್ಯೋನ್ಮುಖವಾಗಿಸಿತು. ಅಡ್ವೊಕೇಟ್ ರಾಮಕುಮಾರ್ ಮತ್ತು ಪಾರ್ಲಿಮೆಂಟ್ ಸದಸ್ಯರಾದ ವಿ. ವಿಶ್ವನಾಥ ಮೇನೋನ್ ಅವರೊಡನೆ ಇನ್ನು ಏನು ಮಾಡಬೇಕೆಂಬ ಕುರಿತು ದೀರ್ಘಾಲೋಚನೆ ಮಾಡಿದೆ. ಇನ್ನೇನು ಮಾಡಬೇಕೆಂಬ ಕುರಿತು ರಾಮಕುಮಾರರಿಗೆ ಯಾವ ಸಂದೇಹವೂ ಇರಲಿಲ್ಲ. ಕೂಡಲೇ ಹೈಕೋರ್ಟಿನಲ್ಲಿ ಹೇಬಿಯಸ್ ಕಾರ್ಪಸ್ ರಿಟ್ ಸಲ್ಲಿಸಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಅದೂ ಕೂಡಾ, ನಾನು ಸಲ್ಲಿಸುವ ರಿಟ್, ತುರ್ತು ಪರಿಸ್ಥಿತಿಯ ಬಳಿಕದ ಪ್ರಪ್ರಥಮ ರಿಟ್ ಆಗಬೇಕೆಂಬ ನಿರ್ಬಂಧವೂ ಇತ್ತು. ಆ ಬಳಿಕ ನಾನು ಹೆಚ್ಚು ಯೋಚಿಸದೆ ನ್ಯಾಯವಾದಿ ಈಶ್ವರಯ್ಯರನ್ನು ಸಮೀಪಿಸಿದೆ. ಅವರು ಎಲ್ಲಾ ಕಾಲಗಳಿಗೂ ಅನ್ವಯಿಸುವಂತೆ ಪ್ರಕಾಂಡ ಪಂಡಿತರುಗಳಲ್ಲಿ ಓರ್ವರಾಗಿದ್ದರು. ನಾವು ಈಶ್ವರ ಅಯ್ಯರ್ ಅವರ ಬಳಿ ಹೋದಾಗ ಅವರು ನಮ್ಮ ನಿರೀಕ್ಷೆಯಲ್ಲೇ ಇದ್ದರು ಎಂಬಂತಾಗಿತ್ತು ಅವರ ನಡವಳಿಕೆ. ತಡಮಾಡದೆ ನಾವು ರಿಟ್ ಸಿದ್ಧಪಡಿಸುವ ಕಾರ್ಯದಲ್ಲಿ ತೊಡಗಿದೆವು. ರಿಟ್ ಸಮರ್ಪಿಸುವುದರೊಡನೆ ಆ ಘಟನೆಯ ಸಾಕ್ಷಿಗಳಾಗಿ ಹಲವರ ಸತ್ಯ ವಾಙ್ಮೂಲವನ್ನೂ ಸಮರ್ಪಿಸಬೇಕೆಂಬುದು ನಿಯಮ. ಈ ಜವಾಬ್ದಾರಿ ನನ್ನದಾಗಿತ್ತು. ಇಂತಹ ಸಾಕ್ಷಿಗಳು ಚಾತ್ತಮಂಗಲಂ ಇಂಜಿನಿಯರಿಂಗ್ ಕಾಲೇಜು ಮತ್ತು ಅದರ ಬಳಿಯ ಇತರ ಪ್ರದೇಶಗಳಿಂದ ಮಾತ್ರ ದೊರೆಯಬಹುದಾಗಿತ್ತು. ಈಶ್ವರ ಅಯ್ಯರ್ ನಿರ್ದೇಶನದಂತೆ ನಾನು ಕೋಝಿಕೋಡಿನ ಮಾರ್ಕ್ಸಿಸ್ಟ್ ಪಾರ್ಟಿ ಕಚೇರಿಗೆ



...ಮುಖವಾಗಿ ನಮ್ಮ ದೇಶದ ದೃಷ್ಟಿಯಿಂದ ಹೇಳುವುದಿದ್ದರೆ ಇದು ಸರ್ವನಾಶಕ್ಕೆ ...ನೇರ ಮುನ್ನುಡಿಯಂತಿದೆ. ಭಾರತ-ಪಾಕಿಸ್ತಾನ ಕ್ರಿಕೆಟ್ ಪಂದ್ಯಾಟ ಎಂದೂ ...ನ ಜನರ ನಿದ್ದೆಯನ್ನು ಕೆಡಿಸುತ್ತದೆ. ಇದನ್ನು ಕ್ರೀಡೆಯಾಗಿ ನೋಡುವ ...ಪಾಟವನ್ನು ಎರಡೂ ದೇಶಗಳ ಜನರು ಮರೆತಿದ್ದಾರೆ. ನಮ್ಮೆರಡು ...ದೇಶಗಳ ಸಂಬಂಧ ಈ ಕ್ರೀಡೆಯಿಂದ ಇನ್ನಷ್ಟು ಹಳಸಲಿದೆಯೇ ಹೊರತು ...ಸುಧಾರವಾಗುವ ಲಕ್ಷಣಗಳಿಲ್ಲ.

...ಜತೆಗೆ ಇದು ಹಿಂದು-ಮುಸಲ್ಮಾನ ಕೋಮು ಸಂಘರ್ಷದ ಒಂದು ...ಮುಖವಾಗಿ ಪರಿವರ್ತಿತವಾಗಿದೆ. ಪಾಕಿಸ್ತಾನದ ವಿರುದ್ಧ ಭಾರತ ಗೆಲ್ಲಲಿ



...ಅಥವಾ ಸೋಲಲಿ ಅದು ಮುಸ್ಲಿಮ್ ದ್ವೇಷಕ್ಕೆ ನೀರೆರೆಯುತ್ತದೆ. ಭಾರತ ...ದ್ದಾಗ ವ್ಯಕ್ತಪಡಿಸಲಾಗುವ ಅತಿಯಾದ ಸಂಭ್ರಮ ಇಲ್ಲಿನ ಮುಸ್ಲಿಮರ ...ನ ನೋಯಿಸಲೆಂದೇ ಆಗಿರುತ್ತದೆ. ಕೆಲವೊಮ್ಮೆ ನೇರವಾಗಿ, ಇನ್ನುಳಿದಂತೆ ...ರೋಕ್ಷವಾಗಿ, "ನೀನು ಸೋತು ಹೋಗಿದ್ದೀಯ, ನಿನ್ನ ದೇಶ ಸೋತುಹೋಗಿದೆ. ...ನ್ನ ಸಮುದಾಯ ಸೋತು ಹೋಗಿದೆ" ಎಂಬ ಸ್ಪಷ್ಟ ಸಂದೇಶ ...ರವಾನೆಯಾಗುತ್ತಿರುತ್ತದೆ. ಇದರಿಂದ ಈ ದೇಶದ ಎಲ್ಲ ಮುಸ್ಲಿಮರೂ ...ಮೂಲತಃ ಪಾಕಿಸ್ತಾನಿಗಳೇ ಎನ್ನುವ ತರ್ಕವನ್ನು ಮುಸ್ಲಿಮ್ ಮತ್ತು ...ಮುಸ್ಲಿಮೇತರರ ಮನಸ್ಸಿನಲ್ಲಿ ಬಿತ್ತುವ ಕೆಲಸವನ್ನು ನಡೆಸಲಾಗುತ್ತದೆ.

ಭಾರತದ ತಂಡಕ್ಕೆ ನೀಡಲಾದ ಸ್ವಾಗತದ ವಿಜೃಂಭಣೆಯ ಅತಿರೇಕಕ್ಕೆ ...ವಿಕೃತ ಮನಸ್ಸುಗಳು, ದುಷ್ಟ ಶಕ್ತಿಗಳು ಒಳಗೊಳಗೇ ಕೆಲಸ ಮಾಡಿರುವುದು ...ಮುಖ್ಯ ಕಾರಣವೇ ಹೊರತು ದೇಶಾಭಿಮಾನ ಖಂಡಿತ ಅಲ್ಲ. ಅಂದು ...ವು ನೋಡಿದ್ದು ಕೇವಲ ಒಂದು ಯುದ್ಧೋನ್ಮತ್ತತೆಯ ದೃಶ್ಯವನ್ನು. ...ದೇಶಪ್ರೇಮ ಎನ್ನುವುದು ಕ್ರಿಕೆಟ್ ಒಂದಕ್ಕೇ ಸಂಬಂಧಿಸಿದ್ದು ಆಗಲಾರದಲ್ಲ!

ದೇಶಪ್ರೇಮವೋ ಮತ್ತಿನ್ನೇನೋ ಅಂತೂ ಕಾದಾಡಲು, ಯುದ್ಧ ಮಾಡಲು ...ಹಮ್ಮಸ್ಸುಳ್ಳವರಿದ್ದರೆ ವಿನಾಶಕಾರಿ ಆಯುಧಗಳನ್ನು ಮಾರಲು ಅಮೆರಿಕಾ ...ನಾ ಸಿದ್ಧ. ಜೊತೆಗೆ ಮಾನವ ಹಕ್ಕುಗಳ ಉಲ್ಲಂಘನೆ ಬಗ್ಗೆ ...ಮಾತಾಡುವುದರಲ್ಲೂ ಅದರದ್ದೇ ಮುಂದಿನ ಪಂಕ್ತಿ. ವಿಶ್ವಶಾಂತಿಯ ...ಸರಲ್ಲಿ ಯುದ್ಧಗಳನ್ನು ಸೃಷ್ಟಿಸುವ ಅಮೆರಿಕಕ್ಕೆ ಜೈ ಎನ್ನುತ್ತಾ ಅಜ್ಞಾನದ ...ಳದಲ್ಲಿ ಈಜುತ್ತಿರೋಣ ಬನ್ನಿ!

■ ಕೆ.ಆರ್.ವಿದ್ಯಾಧರ

...ಣೀಗಿ ಪಾರ್ಟಿ ಜಿಲ್ಲಾ ಕಾರ್ಯದರ್ಶಿ ಕೇಳು ಏಟ್ಟನ್ ಎಂಬವರನ್ನು ...ಟ ಮಾಡಿದೆ. ನಾನಲ್ಲಿಗೆ ಹೋದಾಗ ಅವರು ನನ್ನ ಬರುವನ್ನೇ ಎದಿರು ...ನೋಡುತ್ತಿದ್ದರು. ಈಶ್ವರ ಅಯ್ಯರ್ ಕೇಳು ಏಟನ್ ಅವರಿಗೆ ನನ್ನ ...ಗಮನದ ಕುರಿತು ವಿವರಣೆ ನೀಡಿರಬಹುದು. ಕೇಳು ಏಟನ್‌ರನ್ನು ...ಟ ಬಳಿಕ ನನಗೆ ಯಾವ ತೊಂದರೆಯೂ ಉಂಟಾಗಲಿಲ್ಲ. ನಾನವರನ್ನು ...ಶಂಕದಿಂದಲೇ ಭೇಟಿ ಮಾಡಿದ್ದೆ. ಅಲ್ಲಿಂದ ಅವರು ನನ್ನನ್ನು ...ಚಾತ್ತಮಂಗಲದಲ್ಲಿರುವ ಓರ್ವ ಕೋ-ಆಪರೇಟಿವ್ ಸೆಕ್ರೆಟರಿಯ ಬಳಿಗೆ ...ಕಳುಹಿಸಿದರು. ನಾನು ಅವರೊಡನೆ ಇಂಜಿನಿಯರಿಂಗ್ ಕಾಲೇಜಿಗೆ ...ಳಿದೆ. ಹಾಸ್ಟೆಲಿಗೆ ಹೋಗಿ ವಿದ್ಯಾರ್ಥಿಗಳೊಡನೆ ಉತ್ತಮ ಬಾಂಧವ್ಯವೇ ...ಏರ್ಪಡಿಸಿಕೊಂಡಾಗ ಅವರು ಎಲ್ಲ ವಿಧದ ಸಹಕಾರಗಳನ್ನೂ ನೀಡಲು ...ಸಿದ್ಧರಿದ್ದಾರೆಂದು ವ್ಯಕ್ತವಾಯಿತು. ರಾಜನನ್ನು ಬಂಧಿಸಿ ಕೊಂಡೊಯ್ಯುವುದನ್ನು ...ಕಂಡವರು ಮತ್ತು ರಾಜನೊಡನೆ ಕಕ್ಕಯಂ ಕ್ಯಾಂಪಿನಲ್ಲಿದ್ದ ಸುಮಾರು ಹತ್ತು ...ಮಂದಿ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿದೆವು. ಇದರೆಡೆಯಲ್ಲಿ ಪ್ರಾಂಶುಪಾಲ ...ಬಾಬುದ್ದೀನ್ ಅವರನ್ನೂ ಭೇಟಿ ಮಾಡಿದೆ. ಅವರೂ ಕೂಡಾ ಎಲ್ಲಾ ...ಸಹಕಾರ ನೀಡಲು ಸಿದ್ಧರಾದರು. ಅವರು ಸಾಕ್ಷಿ ಹೇಳಲು ಸಿದ್ಧರೆಂದು ...ಸಲು ಒಂದು ಸತ್ಯ ವಾಙ್ಮೂಲ ಸಿದ್ಧಪಡಿಸಿ ಈಶ್ವರಯ್ಯರಿಗೆ ಕೊಡಬೇಕೆಂದು ...ನಿರ್ಧರಿಸಿದೆ. ಅವರು ಒಪ್ಪಿಕೊಂಡರು. ಬಳಿಕ ಚಾತ್ತಮಂಗಲಕ್ಕೆ ಬಂದು ...ನ್ ಎಂಬವರೊಡನೆ ಸಂಪರ್ಕವೇರ್ಪಡಿಸಿದರು. ಆತನು ರಾಜನೊಡನೆ ...ಬಂಧಿಸಲ್ಪಟ್ಟ ಓರ್ವನಾಗಿದ್ದು ಕಕ್ಕಯಂ ಕ್ಯಾಂಪಿನಲ್ಲಿ ಅತಿ ಕ್ರೂರವಾಗಿ ...ದೌರ್ಜನ್ಯಕ್ಕೊಳಪಟ್ಟವನಾಗಿದ್ದನು.

...ಈ ರಾಜನ್ ಮತ್ತು ನಾನು ಇತರ ಹತ್ತು ವಿದ್ಯಾರ್ಥಿಗಳೊಡನೆ ...ಕೋಳಿಕ್ಕೋಡಿಗೆ ಬಂದು ನ್ಯಾಯವಾದಿ ರಾಮಕುಮಾರರ ನಿರ್ದೇಶನದಂತೆ ...ನ್ಯಾಯವಾದಿ ತುಂಗಾರಾಮ ಪೊದುವಾಳರ ಬಳಿಗೆ ಹೋದೆ. ...ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡು ನಮಗಾಗಿ ಕಾಯುತ್ತಿದ್ದರು. ...ಹನ್ನೊಂದು ಜನರ ವರದಿಗಳನ್ನೆತ್ತಿಕೊಂಡು ಸತ್ಯ ವಾಙ್ಮೂಲ ...ತಯಾರಿಸುವುದಾಗಿತ್ತು ಇವರ ಪ್ರಥಮ ಕೆಲಸ. ಈ ಎಲ್ಲಾ ಕೆಲಸಗಳು ...ಮುಗಿದಾಗ ರಾತ್ರಿ ಹತ್ತು ಗಂಟೆಯಾಗಿತ್ತು. ಬಳಿಕ ಇದನ್ನು ಟೈಪ್ ...ಮಾಡಿಸಿ ವಿದ್ಯಾರ್ಥಿಗಳಿಂದ ಸಹಿ ಹಾಕಿಸಿದಾಗ ಬೆಳಗಾಗಿತ್ತು.

...ಬೆಳಗಿನ ಪ್ರಥಮ ಟ್ರೈನಿನಲ್ಲಿ ನಾನು ಎರ್ನಾಕುಲಂಗೆ ಪಯಣಿಸಿದೆ. ...ಗೆ ತಲುಪುವಾಗ ರಾಮಕುಮಾರ್ ಮತ್ತು ಈಶ್ವರಯ್ಯರ್ ಬಹಳ ...ಚಿಂತಿತರಾಗಿದ್ದರು. ರಿಟ್ಟಿನ ವಿವರ ಹೇಗಾದರೂ ಕರುಣಾಕರನ್ ಮತ್ತು ...ಪೊಲೀಸ್ ಅಧಿಕಾರಿಗಳಿಗೆ ತಿಳಿದರೆ ಅವರು ಅದನ್ನು ತಡೆಯಲು ಏನೇನು ...ಮಾಡಲು ಅಂಜುವುದಿಲ್ಲ ಕೈಗೊಳ್ಳುವರೆಂಬ ಭಯದಿಂದ ಇದರಿಬ್ಬರೂ ...ಆತಂಕಿತರಾಗಿ ಕಂಗಾಲಾಗಿದ್ದರು. ಆದರೆ ಅಂತಹ ಘಟನೆಗಳೇನೂ ...ನಡೆಯಲಿಲ್ಲ. ನಮ್ಮ ಕೈಯಲ್ಲಿದ್ದ ಸತ್ಯ ವಾಙ್ಮೂಲವನ್ನು ನಾನು ಈಶ್ವರಯ್ಯರ ...ಕೈಗಿತ್ತೆ. ■

# ವಿಂಧ್ಯೆಯನ್ನು ದಾಟದೆ ದಕ್ಷಿಣಕ್ಕೆ ರಾಮ ಬಂದದ್ದು ಹೇಗೆ?

'ಕಂಡಹಾಗೆ', ಬಂಜಗೆರೆ ಜಯಪ್ರಕಾಶರ 'ನಂಬಿಕೆಯನ್ನೇ ಆಧರಿಸಿದ್ದು ಚರಿತ್ರೆಯಲ್ಲ' ಮತ್ತು ಇತರ ಎರಡು ಲೇಖನಗಳೂ ಬಹಳ ಚೆನ್ನಾಗಿ ಮೂಡಿಬಂದಿವೆ. ಅಭಿನಂದನೆಗಳು. ಈ ನಿಟ್ಟಿನಲ್ಲಿ ಎಚ್. ಡಿ. ಸಂಕಾಲಿಯಾ ಕೃತಿ 'ಇತಿಹಾಸದ ಕಣ್ಣಲ್ಲಿ ರಾಮಾಯಣ' (ಅನುವಾದ: ಡಾ ಮಹಾಬಲೇಶ್ವರ ರಾವ್, ನವಕರ್ನಾಟಕ ಪ್ರಕಾಶನ) ದಿಂದ ಸಂಪಾದಿಸಿದ ಕೆಲವು ಅಂಶಗಳನ್ನೊಳಗೊಂಡ ಅನಿಸಿಕೆಗಳನ್ನು ನೀಡುತ್ತಿದ್ದೇನೆ:

ರಾಮಾಯಣ ನಿಸ್ಸಂಶಯವಾಗಿಯೂ ಈ ದೇಶದ ಪ್ರಾಚೀನ ಮಹಾಕಾವ್ಯ. ವಾಲ್ಮೀಕಿ ಅದರ ಪ್ರಧಾನ ಕರ್ತೃವಾದರೂ ಇಂದಿನ ರಾಮಾಯಣ ಏಕಕಾಲಕ್ಕೆ ಏಕೈಕ ವ್ಯಕ್ತಿಯಿಂದ ರಚಿತವಾದದ್ದಲ್ಲ ಎಂಬುದರಲ್ಲೂ ಅನುಮಾನವಿಲ್ಲ. ರಾಮಾಯಣದ ಕಿಷ್ಕಿಂಧಾ, ಸುಂದರ ಹಾಗೂ ಯುದ್ಧಕಾಂಡಗಳು ಮೂಲರಾಮಾಯಣದಲ್ಲಿ ಇದ್ದಿರಲಿಲ್ಲ. ರಾಮಾಯಣದಲ್ಲಿನ ಕೆಲವು ಪಾತ್ರಗಳಿಗೆ ಅತಿಮಾನುಷತ್ವ ಮತ್ತು ಪವಾಡ ಶಕ್ತಿಗಳನ್ನು ಆಪಾದಿಸುವುದಕ್ಕೋಸ್ಕರ ಅವುಗಳನ್ನು ನಂತರದಲ್ಲಿ ಸೇರಿಸಲಾಯಿತು.

ಮೊದಮೊದಲು ರಾಮನನ್ನು ವಿಷ್ಣುವಿನ ಅವತಾರವೆಂದು ಪರಿಗಣಿಸುತ್ತಿರಲಿಲ್ಲ ಎಂಬುದು ಕಾಳಿದಾಸ ಮತ್ತು ಭವಭೂತಿಯರ ಕೃತಿಗಳಿಂದ ತಿಳಿದುಬರುತ್ತದೆ. ಸೀತೆ ಕೂಡಾ ರಾಮನನ್ನು ಕೇವಲ ರಾಜನೆಂದು ಕರೆಯುತ್ತಾಳೆ. (ರಾಜನಾಗಿದ್ದ ರಾಮನಿಗೆ ದೈವತ್ವವನ್ನು ಆರೋಪಿಸಿ ವಿಷ್ಣುವಿನ ಅವತಾರವೆಂದು ಬಿಂಬಿಸುವ ಪ್ರಕ್ರಿಯೆಗೂ, ಬುದ್ಧನನ್ನು 11ನೆ ಅವತಾರವೆಂದು ಹೇಳುವುದಕ್ಕೂ ವಿಶೇಷವಾದ ವ್ಯತ್ಯಾಸಗಳಿಲ್ಲ. ಭಾರತದ ಧಾರ್ಮಿಕ ಇತಿಹಾಸದುದ್ದಕ್ಕೂ ಈ ರೀತಿಯ ಬ್ರಾಹ್ಮಣೀಕರಣದ ಪ್ರಕ್ರಿಯೆ ನಡೆದಿದೆ- ಲೇಖಕ)

ಸ್ಮಾರಕ, ನಿವೇಶನ ಇತ್ಯಾದಿಗಳ ಕಾಲನಿರ್ಣಯ ಮಾಡಲು ಸಾಹಿತ್ಯವನ್ನು ಬಳಸಿಕೊಳ್ಳುವುದು ಸರಿಯಾದ ಕ್ರಮವಲ್ಲ. ಅವುಗಳ ಅಧ್ಯಯನವನ್ನು ಪುರಾತತ್ವ ಶಾಸ್ತ್ರದ ಮೂಲಕ ನಡೆಸಿದ ನಂತರ ಸಾಹಿತ್ಯದ ಕಾಲನಿರ್ಣಯ ಮಾಡಬೇಕಾದ್ದು ಸರಿಯಾದ ಕ್ರಮ.



ರಾಮಾಯಣ ಅದರ ಇಂದಿನ ಸ್ವರೂಪವನ್ನು ಪಡೆಯಲು ನೂರಾರು ವರ್ಷಗಳು ಬೇಕಾದವು -

- ಪ್ರಥಮದಲ್ಲಿ ಸುಮಾರು ಕ್ರಿ.ಪೂ.500ರ ವೇಳೆಗೆ ಅಯೋಧ್ಯೆ ಕಿಷ್ಕಿಂಧೆ ಮತ್ತು ಲಂಕೆಗಳ ಸುತ್ತ ಹೆಣೆದ ಹಾಡುಹಬ್ಬಗಳಿದ್ದವು.
- ಕ್ರಿ.ಪೂ.500ರಿಂದ ಕ್ರಿ.ಪೂ.300ರ ನಡುವೆ ವಾಲ್ಮೀಕಿಯು ಇವೆಲ್ಲವುಗಳನ್ನು ಒಂದುಗೂಡಿಸಿ ಸುಮಾರು 12,000 ಶ್ಲೋಕಗಳ ಕಾವ್ಯವನ್ನು ರಚಿಸಿದ.
- ಕ್ರಿ.ಪೂ.300ರಿಂದ ಕ್ರಿ.ಪೂ.100ರ ನಡುವೆ ಆರು ಕಾಂಡಗಳಾಗಿ ವಿಂಗಡಿಸಲ್ಪಟ್ಟಿತು.
- ಕ್ರಿ.ಪೂ.100ರಿಂದ ಕ್ರಿ.ಶ. 200ರ ನಡುವಿನ ಅವಧಿಯಲ್ಲಿ ಪರಿಷ್ಕರಣ ನಡೆದು ಭೌಗೋಳಿಕ ಮತ್ತು ಅತಿಮಾನುಷ ಘಟನೆಗಳ ಪ್ರಕ್ಷೇಪಗಳನ್ನು ಸೇರಿಸಲಾಯಿತು.
- ಕೊನೆಯಲ್ಲಿ ಬಾಲಕಾಂಡದ ಇತಿಹಾಸ ಮತ್ತು ಸಂಪೂರ್ಣ ಉತ್ತರಕಾಂಡವನ್ನು ಸೇರಿಸಲಾಯಿತು.

ಲಂಕೆಯಲ್ಲಿದ್ದ "ಪುಷ್ಪ" ಹೆಸರಿನ ವಿಮಾನವೊಂದರಲ್ಲಿದ್ದ ಗಜಲಕ್ಷ್ಮಿಯ ಚಿತ್ರ ಕ್ರಿ.ಪೂ. 2ನೆ ಶತಮಾನದ ಕಾಲದ ಜನಪ್ರಿಯ ಸಂಕೇತ. ಸುಂದರಕಾಂಡದಲ್ಲಿ ಬರುವ ಲಂಕೆಯ ವರ್ಣನೆ, ಅಲ್ಲಿನ ಜನರ ಆಮೋದ ಪ್ರಮೋದಗಳು, ಮದ್ಯಪಾನದ ಕುರಿತಾದ ವರ್ಣನೆಗಳು ನಾಗಾರ್ಜುನಕೊಂಡದಂತಹ ಇಂಡೋ-ರೋಮನ್ ಶೈಲಿಯ ನಗರವೊಂದರ ವರ್ಣನೆಯಂತಿದೆ. ಭಾರತಕ್ಕೂ ರೋಮಿಗೂ ವಾಣಿಜ್ಯ ಸಂಪರ್ಕಗಳಿದ್ದ ಅವಧಿಯಲ್ಲಿ ಸುಮಾರು 1ನೆ ಅಥವಾ 2ನೆ ಶತಮಾನದ ಸಮಯದಲ್ಲಿ ಅಸ್ತಿತ್ವಕ್ಕೆ ಬಂದ ಇಂತಹ ಒಂದು ನಗರದ ವರ್ಣನೆ ಇದಕ್ಕೆ ಮುನ್ನ ಯಾವೊಂದು ಕೃತಿಯಲ್ಲಿ, ಮಹಾಭಾರತದಲ್ಲೂ ಕಂಡುಬರುವುದಿಲ್ಲ.

ಸೀತೆ ಕಾಳಿಂದೀ ನದಿಗೆ ನೂರು ಕೊಡ ಸುರೆಯನ್ನು ಸಮರ್ಪಿಸುವೆನೆಂದು ಹರಕೆ ಹೇಳಿಕೊಂಡಳು ಎನ್ನಲಾಗಿದೆ. ಅವಳು ಹಾಲು, ಮಧುಪರ್ಕಗಳ ಬದಲಾಗಿ ಸುರೆಯನ್ನೇ ಯಾಕೆ ಆಯ್ಕೆಮಾಡಿಕೊಂಡಳು? ಯಾಕೆಂದರೆ, ಕ್ರಿ.ಶ. 1ನೆ ಶತಮಾನದಲ್ಲಿ ಭಾರತ ಹಾಗೂ ರೋಮಿನ ಸಂಪರ್ಕ ಹೆಚ್ಚಿದ್ದಾಗ ಸುರೆಯನ್ನು ರೋಮಿನಿಂದ ಮಣ್ಣಿನ ಪಾತ್ರೆಗಳಲ್ಲಿ ಆಮದು ಮಾಡಲಾಗುತ್ತಿತ್ತು. ಹೀಗಾಗಿ ಆ ಕಾಲದಲ್ಲಿ ವಿಶೇಷ ಮೌಲ್ಯವಿದ್ದ ಸುರೆಯನ್ನು ಸಮರ್ಪಿಸುವೆನೆಂದು ಸೀತೆ ಹೇಳಿಕೊಂಡಳು.

ರಾಮನು ಹನುಮಂತನಿಗೆ ಮುದ್ರೆಯುಂಗುರ ನೀಡಿದ್ದ ಎನ್ನಲಾಗಿದೆ. ಪುರಾತತ್ವ ಶಾಸ್ತ್ರದ ಪ್ರಕಾರ ಇಂತಹ ಮುದ್ರೆಯುಂಗುರಗಳು ಮೊದಲ ಬಾರಿಗೆ ಕಂಡುಬಂದದ್ದು ಸುಮಾರು ಕ್ರಿ.ಶ. 2ನೇ ಶತಮಾನದಲ್ಲಿ, ಇಂಡೋ ಗ್ರೀಕರು ಮತ್ತಿತರರು ಭಾರತದ ವಾಯವ್ಯ ಭಾಗವನ್ನು ಆಳುತ್ತಿದ್ದಾಗ. ಇದಕ್ಕೆ ಹಿಂದಿನ ಕಾಲದಲ್ಲಿ ಮುದ್ರೆಯುಂಗುರಗಳೇ ಇರಲಿಲ್ಲ. ಇಂತಹ ಒಂದು ಉಂಗುರದ ದಾಖಲೆ ತಕ್ಷಶಿಲೆಯಲ್ಲಿ ದೊರೆತಿದೆ.

ಈಗಿನ ಶ್ರೀಲಂಕಾದ ಮೊದಲಿನ ಹೆಸರು ಸಿಂಹಳ ಅಥವಾ ತಾಮ್ರಪರ್ಣಿ ಎಂದಾಗಿತ್ತು. ಆದರೆ ರಾಮಾಯಣದಲ್ಲಿ ಲಂಕೆಯೆಂದೇ ಇದೆಯಲ್ಲದೆ ಈ ಹೆಸರುಗಳಿಲ್ಲ. ಲಂಕೆಯು ಮಧ್ಯಪ್ರದೇಶದ ಬಸ್ತರ್ ಎಂಬಲ್ಲಿ ನರ್ಮದಾ ನದಿಯ ಉತ್ತರ ಅಥವಾ ಪೂರ್ವಕ್ಕಿರುವ ಪರ್ವತವೊಂದರ ಮೇಲಿದೆ ಎಂಬುದಾಗಿ ಮೂಲರಾಮಾಯಣದಲ್ಲಿ ಹೇಳಲಾಗಿದೆ. ರಾವಣನಿದ್ದ ಲಂಕೆ ಮಧ್ಯಪ್ರದೇಶದ ದಂಡಕಾರಣ್ಯದೊಳಗಿತ್ತು ಎಂಬುದನ್ನು ಖಚಿತವಾಗಿ ಹೇಳಬಹುದಾಗಿದೆ. ಲಂಕೆ ಎಂಬುದು ಮುಂಡಾರಿ ಭಾಷೆಯ ಪದ. ಗೋದಾವರಿ ನದಿಯ ಅಳಿವೆಪ್ರದೇಶದ ಪುಟ್ಟ ದ್ವೀಪಗಳನ್ನು ಈಗಲೂ ಲಂಕೆಗಳೆಂದು ಕರೆಯುತ್ತಾರೆ. ಸುಗ್ರೀವನಿದ್ದ ಕಿಷ್ಕಿಂಧೆ, ಋಷ್ಯಮೂಕ, ಪಂಪಾ ಸರೋವರ ಇತ್ಯಾದಿ ಸ್ಥಳಗಳು ವಿಂಧ್ಯಾಚಲದ ದಂಡಕಾರಣ್ಯದ ಬಳಿಯಲ್ಲಿವೆ. ಕಿಷ್ಕಿಂಧೆ ದಕ್ಷಿಣ ಕೋಸಲವಾಗಿತ್ತು; ಕರ್ನಾಟಕದಲ್ಲಿತ್ತು ಎಂಬುದು ತಪ್ಪು. ಮೂಲರಾಮಾಯಣದ ಪ್ರಕಾರ ರಾಕ್ಷಸರು ಹನುಮಂತನನ್ನು ಮರದ ತೊಗಟೆ, ಹತ್ತಿ ಹಾಗೂ ಸೆಣಬಿನಿಂದ ಮಾಡಿದ ಹಗ್ಗಗಳಿಂದ ಬಂಧಿಸಲೆತ್ನಿಸಿದರು. ಸೆಣಬನ್ನು ಅನತಿ ದೂರದಲ್ಲಿರುವ ಬಂಗಾಳದಲ್ಲಿ ಬೆಳೆಯಲಾಗುತ್ತಿತ್ತು ಎಂಬುದು ಗಮನಿಸಬೇಕಾದ ಅಂಶ.

ಮಧ್ಯಪ್ರದೇಶದ ಗೊಂಡರು ರಾವಣನ ಸಂತತಿಯಾಗಿದ್ದು ತಮ್ಮ ಹಾಡುಗಳಲ್ಲಿ ರಾವಣನನ್ನು ಹೊಗಳುತ್ತಾರೆ, ಅವರ ಅರಸರನ್ನು ಈಗಲೂ ರಾವಣನೆಂದೇ ಕರೆಯಲಾಗುತ್ತದೆ. ವಾನರರೆಂದು ಹೇಳಲಾದವರು ವಿಂಧ್ಯಾಚಲದ ನಿವಾಸಿಗಳಾಗಿದ್ದರು. ಶಬರಿಯ ಆಶ್ರಮವಿದ್ದ ಜಾಗ ಈಗಿನ ಬಿಲಾಸ್ಪುರದಿಂದ ಸುಮಾರು 84 ಕಿ.ಮೀ. ದೂರದಲ್ಲಿದ್ದು ಇಲ್ಲಿಗೆ ಶಬರಿನಾರಾಯಣ ಎಂಬ



ಹೆಸರಿದೆ ಮತ್ತು ಇಲ್ಲಿ ಶಬರರು, ಗೊಂಡರು ಮುಂತಾದ ಆದಿವಾಸಿಗಳು ಇದ್ದಾರೆ. ರಾವಣನಿಗೆ ಹತ್ತು ತಲೆ, ಇಪ್ಪತ್ತು ಕೈಗಳಿದ್ದವೆಂಬುದು ಇತರ ಹಲವಾರು ಅತಿಮಾನುಷ ವಿವರಣೆಗಳಂತೆಯೇ ಕವಿಸಮಯವಾಗಿದೆ. ಹನುಮಂತನು ಲಂಕೆಯ ಅರಮನೆಯಲ್ಲಿ ತನ್ನ ಮಡದಿಯರನ್ನು ಎರಡು ಕೈಗಳಿಂದ ತಬ್ಬಿಕೊಂಡಿದ್ದ ರಾವಣನನ್ನು ನೋಡಿದ ಎಂಬುದಾಗಿ ಮೂಲ ರಾಮಾಯಣದಲ್ಲೇ ಬಣ್ಣಿಸಲಾಗಿದೆ. ಗೊಂಡರ ಒಬ್ಬ ರಾಜನಾಗಿದ್ದ ರಾವಣ ಸೀತೆಯನ್ನು ಅಪಹರಿಸಿ ಆಕೆಯನ್ನು ಕಂಕುಳಲ್ಲಿ ಸಿಕ್ಕಿಸಿಕೊಂಡು ಭೂಮಾರ್ಗವಾಗಿ ನಡೆದುಕೊಂಡು ಹೋಗುತ್ತಿದ್ದ ಎಂದು ಆತನಿಗೆ ದಾರಿ ಬಿಟ್ಟುಕೊಟ್ಟ ಸಂಪಾಶ್ವನು ಹೇಳುತ್ತಾನೆ. ಆಕಾಶಮಾರ್ಗವಾಗಿ ಹೋದನೆಂಬುದು ಮತ್ತೊಂದು ಉತ್ಪ್ರೇಕ್ಷೆ.

ವನವಾಸದ ವೇಳೆ ಚಿತ್ರಕೂಟದಿಂದ ಗೋದಾವರಿಯವರೆಗಿನ ಪಯಣದಲ್ಲಿ ವಿಂಧ್ಯ ಹಾಗೂ ನರ್ಮದೆಗಳು ಉಲ್ಲೇಖವಾಗಿಲ್ಲ. ಇವನ್ನು ದಾಟದೆ ದಕ್ಷಿಣ ಭಾರತದತ್ತ ಪಯಣಿಸಲು ಸಾಧ್ಯವೇ ಇಲ್ಲ. ಸೀತೆಯನ್ನು ಹುಡುಕಲೆಂದು ವಾನರರನ್ನು ನಾಲ್ಕು ದಿಕ್ಕುಗಳಿಗೂ ಕಳುಹಿಸಲಾಗಿತ್ತು ಎನ್ನಲಾಗಿದೆ. ಅವರು ತೆರಳಿದ ಜಾಗಗಳ ಪಟ್ಟಿಯಲ್ಲಿ ಭೌಗೋಳಿಕವಾಗಿ ಕೆಲವು ತಪ್ಪುಗಳಿವೆ. ಪಟ್ಟಿಗಳು ಪ್ರಕ್ಷಿಪ್ತ ಭಾಗ ಎಂಬುದು ಇದರಿಂದ ವೇದ್ಯವಾಗುತ್ತದೆ.

ಲಂಕೆಗೆ ಹೋಗಲು ನಿರ್ಮಿಸಿದ ಸೇತುವೆಗಾಗಿ ಸಾಲ, ಅಶ್ವಕರ್ಣ ಮುಂತಾದ ಮರಗಳನ್ನೂ ಬಂಡೆಗಲ್ಲುಗಳನ್ನೂ ಉಪಯೋಗಿಸಲಾಯಿತು ಎನ್ನಲಾಗಿದೆ. ಸಾಲುವೃಕ್ಷಗಳು ಮಧ್ಯಪ್ರದೇಶ ಮತ್ತು ಅದರ ಉತ್ತರದಲ್ಲಿ ಮಾತ್ರ ಬೆಳೆಯುತ್ತವೆ. ರಾಮೇಶ್ವರದ ಸುತ್ತಮುತ್ತ ಇರುವುದು ಮರಳು ಮತ್ತು ತಾಳೆ ಮರಗಳು; ಬಂಡೆಗಲ್ಲುಗಳೂ ಸಾಲ, ಅಶ್ವಕರ್ಣದಂತಹ ವಿವಿಧ ವೃಕ್ಷಗಳೂ ಇಲ್ಲ.

ಈ ದೇಶದ ಅತ್ಯಂತ ದೊಡ್ಡ ದುರಂತವೆಂದರೆ ನಮ್ಮ ವಿದ್ಯಾಭ್ಯಾಸ ವೈಜ್ಞಾನಿಕ ಮನೋವೃತ್ತಿಯನ್ನು ಬೆಳೆಸಿ ನಮ್ಮನ್ನು ಉನ್ನತಮಟ್ಟಕ್ಕೆ ಏರಿಸುವ ಬದಲಾಗಿ ನಮ್ಮಲ್ಲಿ ಹೆಚ್ಚಿನವರನ್ನು ಕೆಳಮಟ್ಟಕ್ಕೆ ತಳ್ಳಿದೆ. ಇದಕ್ಕೆ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿರುವ ನ್ಯೂನತೆಗಳೇ ಪ್ರಧಾನ ಕಾರಣ ಎನ್ನಬಹುದು. ಇದರಿಂದಾಗಿ ವಿದ್ಯಾವಂತರೆನಿಸಿಕೊಂಡ ಹೆಚ್ಚಿನವರಲ್ಲಿ ಪ್ರಬುದ್ಧತೆಯ ಕೊರತೆ ಕಂಡುಬರುತ್ತದೆ.

ಫಿನ್ಲ್ಯಾಂಡಿನಂತಹ ದೇಶವೊಂದಕ್ಕೆ ಹೋಲಿಸಿದರೆ, ಅದರಲ್ಲೂ ಕಲೇವಾಲ ಎಂಬ ಅತಿಮಾನುಷ ಘಟನೆಗಳಿರುವ ಪೌರಾಣಿಕ ಮಹಾಕಾವ್ಯವಿದೆ. ಅಲ್ಲಿನ ಜನ ಅದನ್ನು ಗೌರವಿಸುತ್ತಾರೆ. ಆದರೆ ಅದರಲ್ಲಿರುವುದೇ ಸತ್ಯ ಎಂದು ಬೀದಿಕಾಳಗ, ಹಿಂಸಾಚಾರಕ್ಕೆ ಪ್ರವೃತ್ತರಾಗಿರುವ ನಿದರ್ಶನಗಳಿಲ್ಲ.

■ ಸುರೇಶ್ ಭಟ್

# ಗಾಂಧಿ ಮಾತ್ಮ ಹುಟ್ಟಿರೊ ದಿನ ಬಾಡತಿನ್ನಕ್ಯಾದತೇ

ಬಯಲುಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

ಮೌರ್ನವಮಿ ಪಕ್ಷ ಮತ್ತು ಗಾಂಧಿ ಜಯಂತಿ ಒಂದೇ ದಿವಸ ಬಂದಿವೆ ಎಂಬ ಸಮಸ್ಯೆಯನ್ನು ಉಗ್ರಿ ಟೀಮು ಕಾಳಮಾವನಲ್ಲಿಗೆ ತಂದಿತ್ತು. ಗಾಂಧಿ ಜಯಂತಿಯನ್ನೇ ಮುಂದೆ ಹಾಕುವುದೋ ಅಥವಾ ಪಿತೃ ಪಕ್ಷವನ್ನು ಮುಂದಕ್ಕೆ ಎಸೆಯುವುದೋ ಎಂಬ ಸಂದಿಗ್ಧಕ್ಕೆ ಬಿದ್ದಿದ್ದ ಕಾಳಮಾವ ಒಳೇಟು ಬಿದ್ದವನಂತೆ ಸುಮ್ಮನೆ ಕುಳಿತಿದ್ದ. ಆಗ ಜುಮ್ಮಿ,

"ನೀನ್ಯಾವುದ್ನು ಬಾಯಿ ಬುಟ್ಟು ಹೇಳ ಮಾವ" ಎಂದು ಸಿಟ್ಟು ಮಾಡಿದಳು.

"ತಡಿಲೆ, ಯಾತಂಗೆ ಅವುಸ್ರ ಮಾಡಿ. ಅದೇನು ಹುಡುಗಾಟಗುಳಿ ಮಾತಲ್ಲ" ಎಂದ.

"ಕದ್ವರಡು ತುಂಡಾದಂಗೆ ಹೇಳಿ ಬುಡು, ಊರ ಜನ್ನಲ್ಲ ನಿನ್ನ ಮಾತ್ನೆ ಕಾಯ್ಕಂಡು ಕುಂತವುರೆ."

"ಆಗೊಂದ ಸತಿ ಹಿಂಗೆ ಬಂದಿತ್ತು. ನಾವಂತೂ ಯಾರ ಮಾತ್ನು ಕೇಳದಂಗೆ ಮಾಡೇಬುಟ್ಟೋ ಅತ್ಲಗೆ" ಎಂದ ಸೀರ.

"ನೀನು ಬುಡೋ, ಊರ್‍ಕಲ್ಲ ಉಗಾದಿ ಮಾಡಿದ್ರೆ ಅಡ್ನಾಡಿ ಅಮಾಸೆ ಮಾಡಿತ್ತು ಅನ್ನಂಗೆ ಮಾಡೇ ಬುದ್ದಿ" ಎಂದು ಉಗ್ರಿ ಸೀರನನ್ನು ಮೂದಲಿಸಿದ.

"ಅಡ್ನಾಡಿ ಅಂತ ಯಾತಂದಿಲ, ನಾನೊಬ್ನೆ ಮಾಡಕ್ಕೋಗಿದ್ನೆ? ಊರ್‍ಕಲ್ಲ ಮಾಡಿದ್ರು ಗೊತ್ತೆ" ಎಂದ ಸೀರ. ಆಗ ಕಾಳಮಾವ,

"ನೋಡ್ರಪ್ಪಾ, ಇದೇ ಮಂಗ್ಯಾರ ಗಾಂಧಿ ಮಾತ್ಮ ಹುಟ್ಟಿದ್ನಂತೆ" ಎಂದು ಕಾಳಮಾವ ವಾಲಾಡುತ್ತ ಹೇಳುತ್ತಿದ್ದಾಗ,

"ಮಂಗಳಾರಲ್ಲ ಕಣಮಾವ ಅಕ್ಟೋಬರ್ ಯರಡ್ನೆ ತಾರೀಕು" ಎಂದ ಉಗ್ರಿ.

"ತಾರೀಕು ಮುಖ್ಯ ಅನ್ನು!"

"ಊ ಮತ್ತೆ."


"ಆಯ್ತು ಬುಡು. ನೋಡ್ರಪ್ಪ ಇದೇ ಮಂಗಳವಾರ ನಾವ್ಕಲ್ರು ಸೇರಿ ಪಿತೃಪಕ್ಷ ಮಾಡಬೇಕಾಗಿತ್ತು. ಅದೇ ದಿನ ಗಾಂಧಿಮಾತ್ಮ ಹುಟ್ಟಿದ ದಿನನೂ ಬದ್ದದೆ. ಯರಡ್ನು ಸಂತೋಷವಾಗಿ ಮಾಡನಾ ಅಂದ್ರೆ, ನಾವ್ಕಲ್ಲ ವಡೆ ಕಜ್ಜಾಯ ಪಾಯಸ ಮಾಡತ ಇದ್ರೆ ಚೆನ್ನಾಗಿತ್ತು."

"ಈಗ್ಲು ಮಾಡಬವುದಲ್ಲ ಮಾವ" ಎಂದಳು ಜುಮ್ಮಿ.

"ಊರ ಜನ ಒಪ್ಪುಸ್ಲೆ ನಂದೇನು?"

"ಅದ್ಕಲ್ಲ ಆಗದ ಮಾತು ಕಣೇಳು ಮಾವ" ಎಂದ ಉಗ್ರಿ.

"ಆದ್ದರಿಂದ ನಾವ್ಕಲ್ಲ ಕಳೆದ ಇಪ್ಪತ್ತು ವರ್ಸದಿಂದ ಯಗ್ಲೇರೇಟು ಬ್ಯಾಳೇರೇಟು ಏರಿದ್ರ ನೋಡಿ ಹೆದ್ರಿಕಂಡು, ಗುಡ್ಡೆಬಾಡು ತಗಂಡು ಪಕ್ಷ ಮಾಡ್ತ ಬಂದಿದ್ದೀವಿ. ಏನಿಲ್ಲ ಅಂದ್ರು ಅವತ್ತು



ನೂರೈವತ್ತು ಮರಿ ಕುಯ್ತರೆ. ಗಾಂಧಿ ಮಾತ್ಮ ಬಾಡು ತಿಂದೋನಲ್ಲ..."

"ಒಂದು ಸತಿ ತಿಂದಿದ್ರಂತೆ ದ್ವಡಪ್ಪ" ಎಂದ ವಾಟಿಸ್ಸೆ.

"ತಿಂದಿದ್ರೆ ಸನ್ಯಾಕ್ಕೇಳಕ್ಕೆ ಬಂದಿದ್ದೀರಿ, ಮಾಡಕಳರ್ಲ."

"ಲೇ ಸುಂಕಿರೊ ವಾಟಿಸ್ಸೆ. ನೀನು ಮಾತಾಡು ಮಾವ" ಎಂದ ಉಗ್ರಿ.

"ಗಾಂಧಿ ಮಾತ್ಮ ಅಯಿಂಸೆ ಬ್ಯಾಡ ಅಂದೋರು. ಅಂತ ಮಾತ್ಮ..."

"ಹಿಂಸೆ ಬ್ಯಾಡ ಅಂದಿದ್ರು ಕಣ ಮಾವ ಅಹಿಂಸೆ ಅಲ್ಲ"

"ಊ. ಅದೆ ನಾನೇಳಿದ್ದು. ಅಂತ ಮಾತ್ಮ ಈ ಧರೆ ಮ್ಯಾಲೆ ಹುಟ್ಟಿದ ದಿನ ನಾವು ಮರಿಕೂದು, ಪ್ರಾಣಿಯಿಂಸೆ ಮಾಡದು ಬ್ಯಾಡ. ನಮ್ಮ ಪಕ್ಷವ ಮುಂದಿನ ಮಂಗಳಾರ ಮಾಡಿಕಳನ, ಅಮಾಸೆ ಇನ್ನು ಅತ್ಲಗೇ ಬೀಳ್ತದೆ, ಅಂಗೆ ಮಾಡಿ" ಎಂದ ಕಾಳಮಾವ ಎಲ್ಲರ ಮುಖ ನೋಡಿದ.

"ಅದಪ್ಪ ಜಡಜಮೆಂಟು, ನಮ್ಮ ದ್ವಡಪ್ಪನಂಗೆ ದ್ಯಾವೇಗೌಡ್ರು ತೀರ್ಪು ಕೊಡಕ್ಕೆ ಏನಾಗ್ಯದೆ" ಎಂದ ವಾಟಿಸ್ಸೆ.

"ದ್ಯಾವೇಗೌಡ್ರು ಕೊಟ್ಟವುರಲ್ಲಾ?"

"ಅದು ತಕರಾರಿನ ತೀರ್ಪು ಕಣೊ, ಜನನೂ ಅದ ನಿರೀಕ್ಷೆ ಮಾಡಿದ್ರು."

# T-20 ಎಂಬ ಟಿಕ್ ಟ್ವೆಂಟಿ

ಅನಾರ್

ಎಚ್.ಎಲ್. ಕೇಶವಮೂರ್ತಿ

ನಾನು ಕ್ರಿಕೆಟ್ ಫ್ಯಾನ್ ಅಲ್ಲ, ಸೀಲಿಂಗ್ ಫ್ಯಾನು, ಪೆಡೆಸ್ಟಲ್ ಫ್ಯಾನು, ಟೇಬಲ್ ಫ್ಯಾನೂ ಯಾವುದೂ ಅಲ್ಲ. ಅಷ್ಟೇ ಯಾಕೆ, ಏರ್ ಕಂಡಿಷನರೂ ಅಲ್ಲ. ಹಾಗಂತ ಕ್ರಿಕೆಟ್ ಮೇಲೆ ದ್ವೇಷಾನೂ ಇಲ್ಲ. ಸಮಯ ಸಿಕ್ಕಿ ಆಟಗಾರರು ಖುಷಿ ನೀಡುವಂತೆ ಆಡುತ್ತಿದ್ದರೆ ನೋಡ್ತೀನಿ. ಪತ್ರಿಕೆಗಳಲ್ಲಿ ಅದರ ಸುದ್ದಿ ಬಂದರೆ ಕಣ್ಣಾಡುಸ್ತೀನಿ. ಹಾಗಾಗಿ ಟೀಂ ಇಂಡಿಯಾ ಅನ್ನೋ ಹೆಸರಿನ ಕ್ರಿಕೆಟ್‌ಗಿಂತ ಅದರಿಂದ ಒದಗಿಬರಬಹುದಾದ ಸಕಲೆಂಟು ಸೌಲಭ್ಯಗಳತ್ತಲೇ ಆಸೆಗಣ್ಣಿಳಿಂದ ನೋಡುವ ಧನಪಿಶಾಚಿ ಹುಡುಗರು T-20 ಸರಣಿಯಲ್ಲಿ ವಿಶ್ವವಿಜೇತರಾಗಿದ್ದನ್ನು ಕಂಡಾಗ ಒಂದು ರೀತಿ ಖುಷೀನೆ ಆಯಿತು. ಟಿವಿ ಆರಿಸಿ ಮಲಗಿಕೊಂಡೆ.

ಬೆಳಿಗ್ಗೆ ಎದ್ದು ಟಿವಿ ಹಾಕಿದೆ. ಏನು ಅದ್ಭುತವಾಗಿ ಈ ಗೆಲುವನ್ನು ವರ್ಣಿಸುತ್ತಿದ್ದರು ಅಂತೀರಿ. ಬೆಂಗಳೂರು ಸೇರಿದಂತೆ ಹಲವು ನಗರಗಳು ಇಡೀ ರಾತ್ರಿ ಈ ವಿಜಯೋತ್ಸವ ಆಚರಿಸಿದವಂತೆ! ಮಹಾಶಿವರಾತ್ರೀಲಿ ಜಾಗರಣೆ ಮಾಡಿದಂಗೆ ಅವತ್ತೂ ಮಾಡಿದ್ದರೆ ಇಡೀ ಬೆಂಗಳೂರು ಮಹಾನಗರ ಮಾರನೆಯದಿನ ನಿದ್ದೆಯ ಮಂಪರಿನಲ್ಲೇ ಇರಬೇಕಾಗಿತ್ತು. ಹಾಗೇನೂ ಆಗಿರಲಿಲ್ಲ, ಎಂದಿನಂತೆಯೇ ಆ ಮಹಾನಗರದ ಚಟುವಟಿಕೆ ಸಾಗೇ ಇತ್ತು! ಅಲ್ಲಿ ಯಾವ್ದೋ ಒಂದೆಂಟತ್ತು ಪಡ್ಡೆ ಹೈಕಳು, ಹೊತ್ತಲ್ಲದ ಹೊತ್ತಿನಲ್ಲಿ ನಿದ್ದೆಗೆಡಿಸಿ ಕೂಗಾಡಿದರೆ ಅವರನ್ನು ಹಿಡಿದು ಪೊಲೀಸಿನವರು ಬೆಂಡೆತ್ತಬೇಕಾಗಿತ್ತಲ್ಲವ. ಮಾಧ್ಯಮದವರು ಅನ್ನಿಸಿಕೊಂಡವರು ಇಂತಹ ಕಿರುಕುಳ ನೀಡುವವರನ್ನೇ 'ರಾಷ್ಟ್ರಪ್ರೇಮಿಗಳು' ಅಂತ ಬಿಂಬಿಸಿದರೆ, ಅವರ ಕೂಗಾಟ ಕಿರುಚಾಟಗಳನ್ನೇ 'ದೇಶಭಕ್ತಿ' ಅಂತ ಹೊಗಳಿದರೆ ಇವರ ಪಂಚೇಂದ್ರಿಯಗಳೆಲ್ಲ ಮರಣಶಯ್ಯೆಯಲ್ಲಿ ಮಲಗಿರಬೇಕು ಅನ್ನಿಸುತ್ತೆ, ಅಥವಾ ಈ ರಾಜಕಾರಣಿಗಳು, ಪೊಲೀಸ್ ವರಿಷ್ಠರು ತಮ್ಮ ಪ್ರಚಾರವಿಂದ ಪದೇಪದೇ ಕಿರುತೆರೆಯ ಮೇಲೆ ಬರುತ್ತಿರಲಿ ಎಂದು ಇಂತಹ ಮಾಧ್ಯಮದವರಲ್ಲಿ ಕೆಲವರನ್ನು ಸಕಲ ಸೌಭಾಗ್ಯಗಳನ್ನೂ ಕರುಣಿಸಿ ಇಟ್ಟುಕೊಂಡಿರುವಂತೆಯೇ ಸಿಬ್ಬಂದಿಸವರೂ ಮಾಡಿದ್ದಾರೋ ಏನು ಕತೆಯೋ.

ಈ 'ಕ್ರಿಕೆಟ್' ಅನ್ನೋದು ಮೊದಲೇ ಶ್ರೀಮಂತ ಸೋಮಾರಿಗಳ ಆಟ. ಐದು ದಿನ ಆಡುತ್ತಿದ್ದರು. ಅದು ಮೂರು ದಿನಕ್ಕೆ ಇಳಿತು. ಜನಕ್ಕೆ ದಾಸಲ್ಲೇ ಕೊನೆಗೊಳ್ಳುತ್ತಿರುವ ಇಂತಹ ಆಟ ಬೇಸರ ತರಿಸಿತು. ಗಾಬರಿಗೊಂಡ ಕ್ರಿಕೆಟ್ ಹಣದಿಂದಲೇ ಹೊಟ್ಟೆ ಹೊರೆಯುತ್ತಿದ್ದವರು ಒಂದು ದಿನಕ್ಕೆ ತಂದರು. ಐದು-ಮೂರು ದಿನದ ಕ್ರಿಕೆಟನ್ನು ಒಂದು ದಿನದ ಪಂದ್ಯ ಆಪೋಷನ ತೆಗೆದುಕೊಂಡಿತು ಅನ್ನುವುದಂತೂ ಸತ್ಯ. ಬರಬರುತ್ತಾ ಅದೂ ಜನರಿಗೆ ಬೋರು ಎನ್ನಿಸತೊಡಗಿತು. ಬಿಟ್ಟಿ ಪಾಸು ನೀಡಿದರೂ ಕೆಲವೊಮ್ಮೆ ಸ್ಟೇಡಿಯಂ ಬಣಗುಡುತ್ತಿತ್ತು. ಹೇಗಾದರೂ ಮಾಡಿ ಕ್ರಿಕೆಟ್ ಉಳಿಸಿಕೊಳ್ಳಲೇಬೇಕಲ್ಲ, ತಮ್ಮ ವಸ್ತುಗಳಿಗೆ ಗಿರಾಕಿಗಳನ್ನು ಹುಡುಕಲೇಬೇಕಲ್ಲ ಅಂತಿದ್ದವರೆಲ್ಲ T-20 ತಂದರು. ಇದು ಏಕದಿನ ಪಂದ್ಯದ ಅಪೋಷನೆ ತಗೊಳ್ಳುತ್ತೋ ಇಲ್ಲವೋ ಅನ್ನುವುದನ್ನೇ ಕಾಯ್ದು ನೋಡಬೇಕು.

ಜನಕ್ಕೆ ಇದರಲ್ಲೂ ಆಸಕ್ತಿ ಕಡಿಮೆಯಾಯಿತು ಅಂದರೇನು ಮುಂದೆ? ಇದ್ದೇ ಇದೆ 10-10 ಕ್ರಿಕೆಟ್, 5-5 ಕ್ರಿಕೆಟ್! ಕೊನೆಗೆ 1-1 ಕ್ರಿಕೆಟ್! ಇದು ಆಗಲಾರದು ಎಂಬ ಯಾವ ಭರವಸೆಯೂ ಇಲ್ಲ, ಯಾಕೆಂದರೆ T-20 ಕ್ರಿಕೆಟ್‌ನಲ್ಲಿ ಡ್ರಾ ಆದರೆ ಅದನ್ನು ನಿರ್ಧರಿಸುವುದು ಹೇಗೆ ಅನ್ನುತ್ತೀರಿ. ಎರಡೂ ಪಂಗಡಗಳಿಗೆ ಐದು ಸಲ ಬೌಲ್ ಮಾಡುವ ಅವಕಾಶ ನೀಡಿ. ಪಾಕಿಸ್ತಾನದ ಎದುರು ಈ ಟೀಂ ಇಂಡಿಯಾ ಒಂದು ಪಂದ್ಯದಲ್ಲಿ ಜಯ ಗಳಿಸಿದ್ದು ಇದೇ ಆಧಾರದ ಮೇಲೆ! ಕ್ರಿಕೆಟ್ ಆಟದ ಯಾವುದೇ ನೈಪುಣ್ಯ ಇಲ್ಲದ ಈ ಆಟವನ್ನು ಕುರಿತು ಪಾಕಿಸ್ತಾನದ ಮಾಜಿ ಟೆಸ್ಟ್ ಆಟಗಾರ ಜಾವೇದ್ ಮಿಯಾಂದಾದ್ ಹೇಳಿದ್ದು: 'ಕ್ರಿಕೆಟ್ ಅನ್ನು ಬೇಸ್ ಬಾಲ್ ಮಟ್ಟಕ್ಕೆ ಇಳಿಸಬಾರದು!'




ಇದು ಹೇಗಾದರೂ ಇರಲಿ. ಟೀಂ ಇಂಡಿಯಾ T-20 ಸರಣಿಯಲ್ಲಿ ವಿಶ್ವ ವಿಜೇತ ಆಗಿದೆ. ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿದ್ದ ದೇಶಗಳಲ್ಲಿನ ಆಟಗಾರರು ಮಾತ್ರ ಭಾಗವಹಿಸಿದ್ದ ಈ ಪಂದ್ಯ ವಿಶ್ವವನ್ನೇ ಹೇಗೆ ಪ್ರತಿನಿಧಿಸುತ್ತದೆ ಎನ್ನುವವರೂ ಇದ್ದಾರೆ. ಪ್ರತಿನಿಧಿಸಲಿ ಬಿಡಲಿ. ಇದನ್ನು ವಿಶ್ವಕಪ್ ಎಂದು ಕರೆಯುತ್ತಾರೆ. ಆದ್ದರಿಂದ ವಿಶ್ವಕಪ್! ಇದು ಭಾರತದ ಪರ ಆಯಿತು ಎಂದ ತಕ್ಷಣ ನಮ್ಮ ರಾಜಕಾರಣಿಗಳು ಪ್ರತಿಕ್ರಿಯಿಸಿದ್ದು ಮಾತ್ರ ಅಮೋಘ! ಬಿಸಿಸಿಐ ಅದೆಷ್ಟೋ ಹಣವನ್ನು ನೀಡ್ತೀವಿ ಎಂಬುದಾಗಿ ಸಾರಿತು. ಅದು ಮಾಡಬೇಕಾದ್ದೆ. ಈ ಹುಡುಗರಿಂದಲೇ ಅಲ್ಲವೆ ಅವರು ಕೋಟ್ಯಂತರ ರೂಪಾಯಿ ಕುಳ ಆಗಿರೋದು. ನೆರೆ ಪರಿಹಾರಕ್ಕೆ, ಸಂಕಷ್ಟದಲ್ಲಿರುವವರಿಗೆ ಸಹಾಯ ಮಾಡಲು ಹಣ ಇಲ್ಲ ಅನ್ನುವ ಮುಖ್ಯಮಂತ್ರಿಗಳು ತಮ್ಮ ರಾಜ್ಯದಿಂದ ಪ್ರತಿನಿಧಿಸಿದ್ದ ಆಟಗಾರರಿಗೆ ಪೈಪೋಟಿ ಮೇಲೆ ಹಣ ನೀಡಲು ತುದಿಗಾಲಿನಲ್ಲಿ ನಿಂತರು! ಅದೆಷ್ಟೆಷ್ಟೋ ಲಕ್ಷ ನೀಡ್ತೀವಿ ಅಂತ ಸಾರಿದರು. ಗುಜರಾತಿನಲ್ಲಿ ಮಾತ್ರ ಕೊಂಚ ಇರುಸುಮುರುಸು ಆಯಿತಂತೆ. ಗುಜರಾತಿಗಳಿಗೆ ಕ್ರಿಕೆಟ್ ವಾಕರಿಕೆ ಏನೂ ಇಲ್ಲ. ಮುಖ್ಯಮಂತ್ರಿ ನರೇಂದ್ರ ಮೋದಿಗೂ ಅದರ ಮೇಲೆ ಅಭಿಮಾನವೇ. ಆ ರಾಜ್ಯದಿಂದ ಯಾರೂ ಈ ತಂಡದಲ್ಲಿರಲಿಲ್ಲವೆ ಅಂದರೆ ಇದ್ದರು. ಗೆಲುವಿನ ರೂವಾರಿಗಳೂ ಆಗಿದ್ದರು. ಆದರೆ ಮೊಸರಿನಲ್ಲಿ ಕಲ್ಲಿತ್ತು, ಇರ್ಫಾನ್ ಪಠಾಣ್, ಯೂಸುಫ್ ಪಠಾಣ್ ಎಂಬ ಸಾಬರಿಗೆ ಹಿಂದುತ್ವದ ಪ್ರತಿನಿಧಿ ನರೇಂದ್ರ ಮೋದಿ ಹೇಗೆ ತಾನೆ ಬಹುಮಾನ ಘೋಷಿಸಿಯಾರು! ಈ ಮುಸಲ್ಮಾನ ಯುವಕರ ನೆರವಿಗೆ ಪತ್ರಿಕೆಯವರು ಬರಬೇಕಾಯಿತಂತೆ. ಅಲ್ಲಿ ತಾರಾಮಾರಾ ಉಗಿಸಿ ಕೊಂಡ ನಂತರ ಬಹುಮಾನ ಘೋಷಿಸಿದರಂತೆ. ಪಾಪ ಆ ಹಿಂದೂ ಮನಸ್ಸಿಗೆ ಅದೆಷ್ಟು ನೋವು, ಸಂಕಟ ಆಗಿರುತ್ತೋ!

ಈ ಹಣ ಅನ್ನುವುದರ ಗುಣವೇ ತಿಳಿಯೋಲ್ಲ, ಯಾಕೋ ಏನೋ ಅದು ಇದ್ದ ಕಡೇಗೆ ಹೋಗಿ ಸೇರುತ್ತೆ. ಕ್ರಿಕೆಟ್ಟಿಗರು ಶ್ರೀಮಂತರು ಅಂತ ಎಲ್ಲರಿಗೂ ತಿಳಿದದ್ದೆ. ಜಾಹೀರಾತಿನವರೂ ಅವರನ್ನೇ ಹಿಡಿದುಕೊಳ್ತಾರೆ; ಸರ್ಕಾರಗಳೂ ಅವರ ಕಾಲಬಳೀನೆ ಸುಳಿದಾಡ್ತವೆ; ಲಕ್ಷಾಂತರ ಸುರೀತವೆ. ಈಗ T-20 ಸರಣಿಯಲ್ಲಿ ಭಾರತೀಯರು ಎದ್ದು, ಮುಗ್ಗರಿಸಿ, ಎದ್ದು ಬಹಳ ಮುಷ್ಕಿಲ್‌ನಲ್ಲಿ ಕಪ್ ಪಡೆದರು. ಹಾಕಿಯಲ್ಲಿ ಒಂದು ಪಂದ್ಯದಲ್ಲೂ ಸೋಲದೆ ಭಾರತೀಯರು ಏಷ್ಯನ್ ಚಾಂಪಿಯನ್ಸ್ ಆದರು. ಅವರನ್ನು ಯಾರೂ ಕ್ಯಾರೆ ಅಂತ ಮೂಸಿಯೂ ನೋಡಲಿಲ್ಲ. ಈ ಪಕ್ಷಪಾತದ ವಿರುದ್ಧ ಪ್ರತಿಭಟಿಸಿ, ಅತ್ತೂ ಕರೆದು ಔತಣ ಮಾಡಿಸಿಕೊಂಡ ಹಾಗೆ ಕರ್ನಾಟಕದ ಹಾಕಿ ಆಟಗಾರರು ಬಹುಮಾನ ಅಂತ ಪಡೆಯಬೇಕಾಯಿತು!

ವಿಜಯಿ ಆ ತಂಡವನ್ನು ಮುಂಬಯಿಯ ವಿಮಾನ ನಿಲ್ದಾಣದಿಂದ ವಾಂಖೇಡೆ ಸ್ಟೇಡಿಯಂಗೆ ಕರೆ ತರಲಾಯಿತು. ದಾರಿ ಉದ್ದಕ್ಕೂ ತಮ್ಮ ದೇವತೆಗಳ ದರ್ಶನ ಪಡೆಯಲು ಜಡಿ ಮಳೆಯಲ್ಲೂ ಸಾವಿರಾರು ಜನರು ನೆರೆದಿದ್ದರು. ಏನು ಕ್ರಿಕೆಟ್ ಪ್ರೇಮ! ಕೆಲವೇ ತಿಂಗಳ ಹಿಂದೆ ಇದೇ ಧೋನಿ ಮಹಾಶಯರಿಗೆ ಥೂಕರಿಸಿದ್ದು, ಜನರನ್ನು ಎದುರಿಸಲು ಆತ ಹೆದರಿ ತಲೆ ಮರೆಸಿಕೊಂಡದ್ದು ಮರತೇಹೋಗಿತ್ತಂತೆ! ಸ್ಟೇಡಿಯಂನಲ್ಲೂ ಸಾವಿರಾರು ಜನ ಸೇರಿದ್ದರಂತೆ. ವೇದಿಕೆಯಲ್ಲಿ ಮೊದಲ ಸಾಲಿನಲ್ಲಿ ಮೆರೆದವರು ಧೋನಿ ಬಟ್ಟರೆ ಉಳಿದಂತೆ ರಾಜಕಾರಣಿಗಳು, ಕ್ರಿಕೆಟ್ ಮಂಡಳಿಯ ಪದಾಧಿಕಾರಿಗಳಂತೆ! ಇದೇನು ಕ್ರಿಕೆಟ್ ಪ್ರೇಮವೋ, ಹಣದ ವ್ಯಾಮೋಹವೋ, ರಾಜಕಾರಣದ ಮತ್ತೊಂದು ವರಸೆಯೋ ಎಂದು ಜನ ಗಲಿಬಿಲಿಗೊಂಡಿರಬಹುದು!

ನನಗೊಂದು ಸಂದೇಹ.

ಟೀಂ ಇಂಡಿಯಾ ಯುವ ತಂಡ. ಇದುವರೆವಿಗೂ ನನ್ನಿಂದಲೇ ಬೆಳಕು ಹರಿಯುವುದು ಅನ್ನುವ ಜಂಬದ ಮುದುಕಿ ತರಹ ಆಡುತ್ತಿದ್ದ, ಕ್ರಿಕೆಟ್ಟನ್ನು ತಮ್ಮ ವರ್ಚಸ್ಸಿಗೆ, ಹಣಕ್ಕೆ ಬಳಸಿಕೊಂಡ, ಘಟಾನುಘಟಿಗಳೆಂದು ಮೆರೆಯುತ್ತಿದ್ದ ಆಟಗಾರರ ಮನಸ್ಸಿನ ಮೇಲೆ ತಾವೇ ಇಲ್ಲದ ತಂಡದ ಈ ಗೆಲುವು ಏನು ಪರಿಣಾಮ ಬೀರಬಹುದು?

ಸೌರವ್ ಗಂಗೂಲಿ, ಸಚಿನ್ ತೆಂಡೂಲ್ಕರ್ ಅವರೇನೋ 'ತಂಡ ಈಗ ಸುಭದ್ರ ಕೈಗಳಲ್ಲಿದೆ' ಅಂದಿದ್ದಾರೆ. ಅಂದರೆ ಇದುವರೆವಿಗೂ ಅದು ಹಾಗೆ ಇರಲಿಲ್ಲ, ದ್ರಾವಿಡ್ ನಾಯಕನಾಗಲು ನಾಲಾಯಕ್! ರಾಹುಲ್ ದ್ರಾವಿಡ್ ಈ ಕುರಿತು 'ತುಂಬ ಸಂತೋಷವಾಗಿದೆ'. ಅಂದಿದ್ದಾರೆ. ನಾನೇ ಅವರ ಸ್ಥಾನದಲ್ಲಿದ್ದಿದ್ದರೆ ನನ್ನ ಪ್ರತಿಕ್ರಿಯೆ ಏನಿರುತ್ತಿತ್ತು ಅಂತ ಯೋಚಿಸಿದೆ. 'ನಮ್ಮ ಕಾಲ ಮುಗಿದ

"ಏನ್ನಿರೀಕ್ಷೆ ಮಾಡಿದ್ಯೋ?"

"ದ್ಯಾವೇಗೌಡ ಏನಾದ್ರು ಒಂದು ತಗುದು ಪಿಗಳಿಗೆ ಕೋಟಿ ಕಜ್ಜಾಯ ತಿನ್ನುಸ್ತನೆ ಕಂಡಿದ್ರು. ಅಂಗೆ ಆಯ್ತು ನೋಡು."

"ಈಗ್ಯಂಗಾಯ್ತುಲ" ಎಂದಳು ಜುಮ್ಮಿ.

"ನೋಡಕ್ಕ ಮೊದ್ಲಿಂದ ದ್ಯಾವೇಗೌಡ ಅಂದು ಗೆ ಬಳ್ಳಾರಿ ದಣಾಯಿತ್ಕ ಕಂಡ್ರೆ ಆಯ್ತಿರಲಿಲ್ಲ."

"ಬಳ್ಳಾರಿ ದಣಾತಿಗಳ್ಯಾರೋ?"

"ಅವ್ರುರೆ ಕಣಕ್ಕ, ಕುಮಾರಸ್ವಾಮಿಗೆ ನೂರೈವತ್ತು ೀಟಿ ಕೊಟ್ಟಿದ್ದೀನಿ ಅಂದಿದ್ನ ಜನಾರ್ಧನ ರೆಡ್ಡಿ ತ್ತವ್ರುನ ಫ್ರೆಂಡು ಶ್ರೀರಾಮುಲು. ಈ ಅಪ್ಪ ಕ್ಕಳಿಗೆ ತೆದ್ದು ವದಕಂಡು ನಿಂತಿದ್ರು. ದ್ಯಾವೇಗೌಡ ಾರಮಾಡಿ ಆ ಇಬ್ರ ಮುಗಸಬೇಕು ಅಂತ ಯ್ತಿದ್ನ ಆಗಲಿಲ್ಲ."

"ಅದ್ಯಾಕಾಗಲಿಲ್ಲ?"

"ಅವ್ರುರು ಬಿಜೆಪಿಗೆ ಟ್ರೆಜರಿ ಇದ್ದಂಗೆ ಕಣಕ್ಕ, ಜೆಪಿಗಳು ಟ್ರೆಜರಿಗೆ ಕಳಕಂಡರೆ? ಅದ್ಕೆ ಗೊಳಗೆ ಅವ್ರುರಿಗೆ ಸಪೋಟು ಮಾಡ್ತ ಬಂದ್ರು. ದ್ಯಾವೇಗೌಡ ಅವ್ರುರಿಗೆ ಪೊಲೀಸ್ ಕೇಸೂ, ದೂ ಅಂತ ಕಿರುಕುಳ ಕೊಡಿಸ್ತ. ಆ ನನ ಕ್ಕಳಿಗೆ ತಲಿಕೆಟ್ಟು ಇವ್ರುರ ಮ್ಯಾಲೆ ಜಗಳಕ್ಕೆ ನಿದ್ದೂ ಅಲ್ದೆ ಕುಮಾರಣ್ಣನ ಮ್ಯಾಲೇ ಕ್ವಲೆ ಕೇಸು ಟ್ಟವ್ರುರೆ!"

"ಕ್ವಲೆ ಕೇಸೇ!"

"ಊ ಕಣಕ್ಕ, ಇದೇ ಒಂದು ನ್ಯವುಕ್ಕೆ ಕಾಯ್ತ ತಿದ್ದ ಅಪ್ಪ ಮಕ್ಕಳು ಪವರ್ ಕೊಡಕ್ಯಾಗದಿಲ್ಲ ದುಬುಟ್ಟವ್ರುರೆ ಯಂಗದೊ ಉಗ್ರಿ ಡ್ರಾಮ?"

"ಮೆಚ್ಚಬೇಕು ಬುಡೊ!" ■

---

ೀಯಿತೇನೋ. ಹೇಳಹೆಸರಿಲ್ಲದ ಹಾಗೆ ಆಗ್ತೀವೇನೋ. ಮೊನ್ನೆ ಬಂದೋವೆಲ್ಲ ಹೀಗೆ ಮೆರೀತಿದಾವಲ್ಲ, ರೆಸುತ್ತಿದ್ದಾರಲ್ಲ' ಅಂತ ಹೊಟ್ಟೆ ಒಳಗೆ ಹುಣಸೇ ಹಣ್ಣು ಸಿದಂಗೆ ಆಡುತ್ತಿದ್ದೆ. ಅವರಿಗೂ ಹಾಗೇ ಆಗಿರಬಹು ಲ್ಲವಾ!

ಈ ಪಡ್ಡೆ ಹೈಕಳು ವಿಶ್ವ ವಿಜೇತರಾಗಿ ಬಂದಿರೋದು ಕೀಯದಲ್ಲಿರೋ ಮುದಿ ತಲೆಗಳ ಬುಡಕ್ಕೆ ಬಂದಿದೆ. ಹೋಗಿ ಯುವಕರು ದೇಶಕ್ಕೆ ಕೀರ್ತಿ ತಂದರು. ಕೀಯದಲ್ಲೂ ಯುವಕರಿಗೆ ಅವಕಾಶ ನೀಡಿ ನೀವು ದೆ ಸರಿಯಿರಿ ಅನ್ನುವ ಮಾತುಗಳನ್ನು ಕೆಲವರು ತೊಡಗಿದ್ದಾರೆ. ಕೆಲವರು ಇದಕ್ಕೆ ಕುಮ್ಮಕ್ಕೂ ದುತ್ತಿದ್ದಾರಂತೆ. ಹಾಗೇನಾದರೂ ನಡೆದೇಹೋದರೆ..... ಮಾರಸ್ವಾಮಿ ಮುಂದುವರೆಯುತ್ತಾರೆ, ಯಡಿಯೂರಪ್ಪ ದಿಯಾಗ' ಮಾಡ್ತಾನೆ ಇರ್ತಾರೆ!

* * * * * *

### ದಿವಂಗತ ಜೀವಂತರು!

ಮಂಡ್ಯದಲ್ಲೊಂದು ಪ್ರತಿಮೆ ಅನಾವರಣ.

ಮಾಜಿ ಶಾಸಕ, ಹಾಲಿ ಪೀಠ ಅಧ್ಯಕ್ಷ ಎಚ್.ಡಿ. ತಯ್ಯ ಪ್ರತಿಮೆ ಅದು!

ಅನಾವರಣ ಮಾಡಿದವರು ಜಾರ್ಜ್ ಫರ್ನಾಂಡಿಸ್!

'ಪಾಪ, ಯಾವಾಗ ತೀರಿಕೊಂಡರು?' ಕೆಲವರ ಪ್ರಶ್ನೆ. ಪ್ರತಿಮೆ ಅಂದರೆ ಸತ್ತವರದ್ದೇ ಅನ್ನುವ ಲೆಕ್ಕ ಅವರದ್ದು! ಡ್ಯದಲ್ಲಿ ಇದುವರೆವಿಗೂ ಇದೇ ಸಂಪ್ರದಾಯ.

ನಿಮ್ಮ ತಲೆ 'ಹಾಲಿ' ಅಂದರೆ ಬದುಕಿದ್ದಾರೆ ಅಂತ ?

ಜಾರ್ಜ್‌ಗೂ ಎರಡು ಅನಾಮಧೇಯ ಪತ್ರಗಳು ೀಗಿದ್ದವಂತೆ. ಜೀವಂತವಾಗಿರುವಾಗಲೇ ಪ್ರತಿಮೆ ವರಣ ಮಾಡಿಸಿಕೊಳ್ಳುವ ಸಮಾರಂಭಕ್ಕೆ ಬರುವುದು ಘನತೆಗೆ ತಕ್ಕುದಲ್ಲ!

ಆದರೂ ಜಾರ್ಜ್ ಬಂದರು. ಹಲವು ವರ್ಷಗಳ ದೆಯೇ ಈ ಕಾರ್ಯ ಆಗಬೇಕಿತ್ತು ಅಂದರು!

ಧಾರವಾಡದ ವಿದ್ಯಾವರ್ಧಕ ಸಂಘ ಇದೆ. ಲ್ಲೊಂದು ಸಭಾಂಗಣ-ಪಾಟೀಲ ಪುಟ್ಟಪ್ಪ ಸಭಾಂಗಣ. ಅಲ್ಲ, ಈ ಹಿರಿಯರಿಗೆ ಯಾಕೆ ಬದುಕಿರುವಾಗಲೇ ಕ' ನಿರ್ಮಿಸಿಕೊಳ್ಳುವ ಕಳಕಳಿ?


ಸತ್ತ ಮೇಲೆ ಜ್ಞಾಪಿಸಿಕೊಳ್ಳುತ್ತಾರೆ ಅನ್ನುವ ಖಾತರಿ !

ಅಷ್ಟೊಂದು ಸಾರದರ್ಶಕ ಅವರ ನಡವಳಿಕೆ!

ಇವರೆಲ್ಲ ದಿವಂಗತ ಜೀವಂತರು! ಇದೇ ಪ್ರವೃತ್ತಿ ದುವರೆದರೆ ನಾವು, ನರಿಗಳೆಲ್ಲರ ಪ್ರತಿಮೆ ಕಾಣುವ ಸಿಗಬಹುದೇನೋ! ■

---

# ಎಲ್ಲರೂ ರಾಜಕುಮಾರಿಯರು



ಡಾ. ರಾಮಮನೋಹರ ಲೋಹಿಯಾ ಎಷ್ಟು ಜಾಣರಾಗಿದ್ದರು, ಹಾಗೆಯೇ ಎಷ್ಟು ಭಾವುಕರಾಗಿದ್ದರು. ಲೋಹಿಯಾ ದೇವರನ್ನು ನಂಬುತ್ತಿರಲಿಲ್ಲ. ಬಂಡವಾಳಶಾಹಿಗಳು ಮತ್ತು ಕಮ್ಯುನಿಸ್ಟರನ್ನು ಸಮಾನವಾಗಿ ತಿರಸ್ಕರಿಸುತ್ತಿದ್ದರು. ವಿಕೇಂದ್ರಿಕರಣದ ಮೂಲಕ ನಾಲ್ಕು ಕಂಬಗಳ ಆಧಾರವುಳ್ಳ, ವ್ಯಕ್ತಿಯ ಜನಸಮೂಹದ ಶಕ್ತಿಯನ್ನುಳ್ಳ ಸಮಾಜಕ್ಕಾಗಿ ಕನಸುತ್ತಿದ್ದರು. ಅವರ ಸಮಾಜವಾದ ಅಧಿಕಾರಶಾಹಿ, ಪುರೋಹಿತಶಾಹಿ ಮತ್ತು ರಾಜಕಾರಣಿಗಳಿಂದ ಮುಕ್ತವಾಗಿತ್ತು.

ಅವರು ಅಮೆರಿಕದಲ್ಲಿ ಸಂಚರಿಸುತ್ತಿದ್ದಾಗ ಒಬ್ಬ ಹುಡುಗ ಕೇಳಿದ, "ನಾಗರಿಕ ಹಕ್ಕುಗಳ ಬಗ್ಗೆ ನೀವು ಪ್ರತಿಭಟಸುತ್ತಿದ್ದಾಗ ಅದಕ್ಕಿಂತ ಮುಖ್ಯ ವಿಷಯಗಳಿಗಾಗಿ ಹೋರಾಡಲು ನೀವು ಜೀವವನ್ನು ಉಳಿಸಿಕೊಳ್ಳಬೇಕು ಎಂದು ಒಮ್ಮೆಯಾದರೂ ಅನ್ನಿಸುವುದಿಲ್ಲವೆ?"

"ಖಂಡಿತ ಇಲ್ಲ. ಇಂಥ ವಿಚಾರದಲ್ಲಿ ಲೆಕ್ಕಾಚಾರ ಹಾಕಲಾಗುವುದಿಲ್ಲ, ನಾವು ಯಾವುದೇ ಕ್ಷಣದಲ್ಲಿ ಏನು ಮಾಡಬೇಕು ಅದನ್ನು ಮಾಡಿಯೇ ಬಿಡಬೇಕು. ಇಂಥ ಲೆಕ್ಕಾಚಾರ ಭಾರತದಲ್ಲಿ ಅನೇಕರ ನಿಷ್ಕ್ರಿಯೆಗೆ ಕಾರಣವಾಗಿದೆ."

ಮತ್ತೊಮ್ಮೆ ಹೇಳಿದರು: "ಅಮೆರಿಕಾದ ಬಂಡವಾಳಶಾಹಿ ವ್ಯವಸ್ಥೆಯ ಬಗ್ಗೆ ನನ್ನ ಆಕ್ಷೇಪಣೆ ಇದೆ. ಆದರೆ ನಿಮ್ಮ ಬಂಡವಾಳಶಾಹಿಗೂ ಭಾರತದ ಬಂಡವಾಳಶಾಹಿಗೂ ವ್ಯತ್ಯಾಸ ಇರುವಂತಿದೆ. ಇಲ್ಲಿಯ ಬಂಡವಾಳಶಾಹಿ ಸ್ವಾರ್ಥಿಯಾಗಿದ್ದರೂ ಕೆಲವು ನಿಯಮ ಇಟ್ಟುಕೊಂಡಿರುತ್ತಾನೆ. ಸಂಪತ್ತು ಸೃಷ್ಟಿಸಿ ಉದ್ಯೋಗ ಹೆಚ್ಚಿಸುತ್ತಾನೆ. ಆದರೆ ಭಾರತದ ಬಂಡವಾಳಶಾಹಿ ಬರೀ ಸ್ವಾರ್ಥಿಯೂ, ನೀಚನೂ, ಲೂಟಿಕೋರನೂ, ಕಪ್ಪುಹಣದ ಖದೀಮನೂ ಆಗಿರುತ್ತಾನೆ. ನಿಮ್ಮ ಸಾಧನೆಯನ್ನು ನಾನು ನಿಮ್ಮ ಹೆಣ್ಣಿನ ಸ್ಥಾನಮಾನ ನೋಡಿ ಅಳೆಯುತ್ತೇನೆ. ಇಲ್ಲಿಯ ಒಬ್ಬಳು ಕೆಲಸದವಳಿಗೂ ಮಹಾರಾಣಿಗೂ ವ್ಯತ್ಯಾಸವೇ ಇಲ್ಲ; ನೋಡಲು ಇಬ್ಬರೂ ಒಂದೇ ಥರ ಇರುತ್ತಾರೆ. ಯಾವ ಸಮಾಜದಲ್ಲಿ ಸೇವಕಿ ಕೂಡ ರಾಣಿಯ ಘನತೆ, ಆತ್ಮಗೌರವ, ಶೈಲಿ ಪಡೆದಿರುತ್ತಾಳೋ ಆ ಸಮಾಜ ರಾಜಕುಮಾರಿಯರನ್ನು ಸೃಷ್ಟಿಸುವ ಘನತೆವೆತ್ತ ಸಮಾಜ. ಆದರೆ ನಮ್ಮಲ್ಲಿ ಒಂದು ಅನುಮಾನವಿದೆ-ಇಷ್ಟಾದರೂ ನಿಮಗಿಂತ ಮುಂಚೆಯೇ ಭಾರತೀಯರಾದ ನಾವು ಮಹಿಳೆಯೊಬ್ಬಳನ್ನು ನಾಯಕಿಯಾಗಿ ಆರಿಸುವ ಸಾಧ್ಯತೆ ಇದೆ" (ಇದನ್ನು ಲೋಹಿಯಾ ಹೇಳುತ್ತಿರುವುದು 1951 ರಲ್ಲಿ!)

ಅಮೆರಿಕಾದಲ್ಲೊಬ್ಬ ಅಧಿಕಾರಿ ಭಾರತದ ಬಾಬುವನ್ನು ಹೋಲುವ ಮೂರ್ಖ. ಆತ ಲೋಹಿಯಾ ಹೆಸರನ್ನೇ ಕೇಳಿರಲಿಲ್ಲ, ಉನ್ನತ ಅಧಿಕಾರಿಯಾದ ಆತ ಲೋಹಿಯಾರನ್ನು ಯಾವ 'ಕೆಪಾಸಿಟಿ'ಯಲ್ಲಿ ಸ್ವಾಗತಿಸುವುದು ಎಂಬ ಬಗ್ಗೆ ಚಡಪಡಿಸುತ್ತಿದ್ದ. ಲೋಹಿಯಾ ಅವರನ್ನು ಕಂಡೊಡನೆ ಕೇಳಿದ "ಡಾ. ಲೋಹಿಯಾ ಅವರೆ, ನೀವು ಅಮೆರಿಕಾದ ವಿದ್ಯಾರ್ಥಿವೇತನದ ಮೇಲೆ ಅಮೆರಿಕಾಕ್ಕೆ ಬಂದಿದ್ದೀರೋ ಅಥವಾ ಭಾರತ ಸರ್ಕಾರದ ಪ್ರತಿನಿಧಿಯಾಗಿಯೊ?"

"ಎರಡೂ ಅಲ್ಲ" ಎಂದು ನಗುತ್ತ ಲೋಹಿಯಾ ಹೇಳಿದರು.

"ನೀವು ಡಾಕ್ಟರ್ ಎಂದು ಕೇಳಿದೆ? ಭಾರತದಲ್ಲಿ ನಿಮ್ಮ ಉದ್ಯೋಗ ಏನು?"

"ನನ್ನ ಉದ್ಯೋಗ ಜನರನ್ನು ಪ್ರಚೋದಿಸೋದು, ಎಲ್ಲ ಕಡೆ ಓಡಾಡಿ ಸರ್ಕಾರಕ್ಕೆ ಚಳ್ಳೆಹಣ್ಣು ತಿನ್ನಿಸುವುದು, ನಾನು ನೀವು ತಿಳಿದಂಥ ಡಾಕ್ಟರ್ ಕೂಡ ಅಲ್ಲ, ಅಂದರೆ ವೈದ್ಯ ಅಲ್ಲ...."

ಆ ಅಧಿಕಾರಿ ಲೋಹಿಯಾ ಬಗ್ಗೆ ಗೊಂದಲಗೊಂಡು ಅಮೆರಿಕಾದ ಸರಳ ಚರಿತ್ರೆ, ಸ್ವಾತಂತ್ರ್ಯ ಸಂಗ್ರಾಮ, ಸಂವಿಧಾನದ ಬಗ್ಗೆ ಕೊರೆಯತೊಡಗಿದ.

ಲೋಹಿಯಾ ಶಿಷ್ಯನೊಬ್ಬ ಸಿಟ್ಟಿಗೆದ್ದು, "ಛೇ, ಅದೇನು ನೀನು ಹೇಳ್ತಿರೋದು; ಲೋಹಿಯಾ ಅವರು ವಿದ್ವಾಂಸರು, ತತ್ವಜ್ಞಾನಿಗಳು, ರಾಜಕಾರಣಿಗಳು-" ಆದರೆ ಲೋಹಿಯಾ ಅವನನ್ನು ಸುಮ್ಮನಿರಿಸಿದರು.

ಆತ ಕೊರೆತ ನಿಲ್ಲಿಸಲಿಲ್ಲ.


ಹೊರಬಂದಾಗ ಲೋಹಿಯಾ ಹೇಳಿದರು: "ಇಲ್ಲಿ ಕೂಡ ಭಾರತದಲ್ಲಿನಂತೆಯೇ ಕಟ್ಟಾ ಗುಮಾಸ್ತರು ಇದ್ದಾರೆ...." ■

# ಸಮಾಜವಾದಿಗಳ ಸಣ್ಣ ಐಬು

ನಮ್ಮ ಭಾರತದ ಸೋಷಲಿಸ್ಟರು ಸೋತು ಸುಣ್ಣವಾದದ್ದಕ್ಕೆ ನನ್ನಲ್ಲಿ ಕೆಲವು ಕಾರಣಗಳಿವೆ. ಅವುಗಳಲ್ಲಿ ಒಂದು, ವಿಚಿತ್ರ ಬೋಳೆತನ. ಒಬ್ಬ ದುಷ್ಟನೆಂದು ಗೊತ್ತಿದ್ದರೂ ಆತನ ವಿಶಿಷ್ಟ ಪ್ರತಿಭೆಗಾಗಿ ಹುದುಕಿ ರೋಮಾಂಚನಗೊಳ್ಳುವುದು; ತಮ್ಮ ಮಾತುಗಳಲ್ಲೇ ರಂಜನೆ ಕಂಡುಕೊಂಡು ಪರಸ್ಪರ ಅಪ್ಪಿಕೊಂಡು ಮುದ್ದಾಡುವುದು. ಎರಡನೆಯ ಕಾರಣ, ಯಾವುದನ್ನೂ ಅಚ್ಚುಕಟ್ಟಾಗಿ ಮಾಡಲಾಗದ ಸೋಂಭೇರಿತನ. ನನ್ನಲ್ಲಿ ರಾಮಮನೋಹರ ಲೋಹಿಯಾರವರ (ಇತ್ತೀಚೆಗೆ ಪ್ರಕಟವಾದ) ಮೂರು ನಾಲ್ಕು ಪುಸ್ತಕಗಳಿವೆ. ಅವುಗಳಲ್ಲೊಂದು ಲೋಹಿಯಾ ಅವರ ಅಮೆರಿಕಾ ಭೇಟಿ ಕುರಿತದ್ದು. ಈ ಯಾವ ಪುಸ್ತಕದಲ್ಲೂ ಲೋಹಿಯಾ ಅವರ ಇತರ ಪುಸ್ತಕಗಳ ಪಟ್ಟಿಯಾಗಲಿ, ಇವರ ಬದುಕು ಕುರಿತ ಟಿಪ್ಪಣಿಯಾಗಲಿ ಇಲ್ಲ. ಜಾರ್ಜ್ ಫರ್ನಾಂಡಿಸರ ಮುನ್ನುಡಿ ನಿಖರವಾಗಿ ಏನನ್ನೂ ಹೇಳುವುದಿಲ್ಲ. ಕಾಲ, ದೇಶ ಮೀರಿದ ಕ್ರಾಂತಿಕಾರಿಯಲ್ಲವೆ?

ಮೂರನೆ ಕಾರಣ ಬೌದ್ಧಿಕವಾಗಿರಬೇಕಾದಾಗಲೆಲ್ಲ ಭಾವುಕರಾಗಿದ್ದು ಹೊಣೆಯಿಂದ ತಪ್ಪಿಸಿಕೊಳ್ಳುವುದು. "ಹೀಗೆ ಹೇಳುವುದು ಕೇವಲ ಕನಸು ಅನ್ನಿಸುವುದಿಲ್ಲ?" "ಹೌದು, ಕನಸೇ ಇಲ್ಲದ ಮನುಷ್ಯ ಎಂಥ ಮನುಷ್ಯ?" ಎಂಬಂಥ ಉತ್ತರ. ಲೋಹಿಯಾ ಸಾಮಾನ್ಯವಾಗಿ ವೇಳೆಯ ಬಗ್ಗೆ ಕಟ್ಟುನಿಟ್ಟಾಗಿದ್ದರು. ಅದು ಥಿಯರಿ ಮಾತ್ರ. ಅಮೆರಿಕಾದ ಪ್ರವಾಸದಲ್ಲಿ ಮುಕ್ಕಾಲು ಪಾಲು ಸಭೆಗಳು ತಡವಾಗಿ ಶುರುವಾಗುತ್ತಿದ್ದವು. ಯಾಕೆಂದರೆ ಲೋಹಿಯಾ ಬೇಗ ಎದ್ದು ಸೂರ್ಯೋದಯ ನೋಡುತ್ತಿದ್ದುದೇ ಅಪರೂಪ! ■

## ಮರೆಯುವ ಮುನ್ನ



■ ಪಿ. ಲಂಕೇಶ್ —ಏಪ್ರಿಲ್ 2, 1989

---


## ಸೀತೆ

ನೆನಪಾಗುತ್ತಾಳೆ ಸೀತೆ
ನೋಡುತ್ತಿದ್ದಂತೆ ಬಾಡಿದ ಹೂವು
ಬಿರಿದ ಭೂಮಿ ಉರಿವ ಬೆಂಕಿ
ಕಾವಿಗೆ ಕುಳಿತ ಹೆಣ್ಣು ಹಕ್ಕಿಗೆ
ಗುಟುಕು ನೀಡುತ್ತಿದೆ ಗಂಡು ಮಂಗಟ್ಟೆ
ಸೀತೆ ನತದೃಷ್ಟೆ

ಸಮುದ್ರ ಉಪ್ಪಾಗಿದೆ
ಲಕ್ಷಾಂತರ ಸೀತೆಯರ
ಕಣ್ಣೀರು ಬೆರೆತು
ಮನುಷ್ಯ ಸಹಜ
ಮಾಯಾಜಿಂಕೆ ಬಯಸಿದ್ದು
ಅಗ್ನಿಪ್ರವೇಶದ ಆಜ್ಞೆ
ಖಂಡಿತ ಮನುಷ್ಯ ವಿರೋಧಿ

ಆದರೂ
ಪುಬ್ಬಗೊಂಡಿದ್ದಾನೆ ರಾಮ
ಸೀತೆಯ ಕಣ್ಣೀರಿನಲ್ಲಿ
ಅರಳಿದ್ದಾನೆ ಅವಳ ಪ್ರೀತಿಯಲ್ಲಿ.

■ ಡಾ. ಸಿ. ರವೀಂದ್ರನಾಥ್



# ಪೊಳ್ಳು ಸಮರ್ಥನೆಗಳು ಅಪಾಯಕಾರಿಯಾಗಬಲ್ಲವು

## ಒಂದು ಪತ್ರ

ಇತ್ತೀಚೆಗೆ ನಾನು ಬರೆದ ಬ್ರಾಹ್ಮಣಿಕೆಯ ಕುರಿತ ಪತ್ರವನ್ನೋದಿದ ನನ್ನ ಮಿತ್ರರೊಬ್ಬರು ಪತ್ರವನ್ನು ಬೆಂಬಲಿಸುತ್ತ ಬ್ರಾಹ್ಮಣರ ವಿರುದ್ಧ ಪ್ರತೀಕಾರದ ಮಾತುಗಳನ್ನು ಆಡಿದ್ದರು. ಅದಕ್ಕುತ್ತರವಾಗಿ ನಾನು-ಲಂಕೇಶರೇ ಆಗಲಿ, ಅವರ ಪತ್ರಿಕೆಯೇ ಆಗಲೀ ಕೇವಲ ಕೆಳವರ್ಗದವರಷ್ಟೇ ಅಲ್ಲದೇ ಬ್ರಾಹ್ಮಣ ವರ್ಗದವರೂ ಆದರ ಪ್ರಭಾವಕ್ಕೆ ಒಳಗಾಗಿ ಎಲ್ಲಾ ವರ್ಗದ ಅಭಿಮಾನಿಗಳನ್ನು ಪಡೆದ ಪತ್ರಿಕೆ ಹೊಂದಿತ್ತು. ಶೋಷಿತರ ಪರವಾಗಿ ನಿಂತಿರುವ ಪತ್ರಿಕೆ ಈಗಿನ ಕಾಲಕ್ಕೆ ಸರಿ ಹೊಂದದಿರುವ ಹಳೇಕಾಲದ ತತ್ವಗಳಿಗೇ ಜೋತುಬಿದ್ದು ಮತೀಯವಾದವನ್ನು ಬೆಂಬಲಿಸುವವರನ್ನು ಟೀಕಿಸುತ್ತಿದೆಯೇ ವಿನಃ ಇದನ್ನೇ ಇಡೀ ಬ್ರಾಹ್ಮಣವರ್ಗದ ಕುರಿತ ಟೀಕೆ ಎಂದೆನ್ನುವುದು ಸರಿಯಲ್ಲ ಎಂಬಂತಹ ಉತ್ತರವನ್ನು ಕೊಟ್ಟೆ. ಸಮಾಜದಲ್ಲಿ ತೀರಾ ಅತಿಯೆನಿಸುವ ಮೇಲರಿಮೆಯನ್ನು ಮೈಗೂಡಿಸಿಕೊಂಡ ಮಡಿ-ಮೈಲಿಗೆಯ ಸಮರ್ಥಕರಿಗಷ್ಟೇ ಪತ್ರಿಕೆಯ ಚಾಟಿಯೇಟೇ ವಿನಃ ಇದನ್ನ ಎಲ್ಲರಿಗೂ ಅನ್ವಯಿಸಿ ನೋಡುವುದು ಸರಿಯೆನಿಸದು.

ಕಳೆದ ವಾರ ಪತ್ರಿಕೆಯೊಂದರಲ್ಲಿ ಎಂ.ವಿ. ಕಾಮತ್ ಎಂಬುವರು (ಕೇಂದ್ರದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ಅದರ ಕೃಪೆಯಿಂದ ಪ್ರಸಾರ ಭಾರತೀಯ ಅಧ್ಯಕ್ಷ ಪದವಿ ಗಿಟ್ಟಿಸಿಕೊಂಡವರು) ತನ್ನ ಅಂಕಣದಲ್ಲಿ ಮಾಡಿದಂತಹ ಸಮರ್ಥನೆ ಬಹಳ ಹಾಸ್ಯಾಸ್ಪದವಾಗಿತ್ತು. ಮುಗ್ಧಾತಿಮುಗ್ಧರಾದ ಬ್ರಾಹ್ಮಣರು ಯಾವತ್ತು ವರ್ಗ ಶೋಷಣೆಯನ್ನು ಬೆಂಬಲಿಸಿರಲಿಲ್ಲ ಎಂಬುದು ಅವರ ಮನಕರಗಿಸುವ ವಾದವಾಗಿತ್ತು. ಮನಸ್ಸು ಮಾಡಿದರೆ ಒಂದೆರಡು ದಿನದಲ್ಲೇ ಬೈರಪ್ಪರನ್ನೇ ಮೀರಿಸುವ 'ಸೂಪರ್ ಆವರಣ'ದಂತಹ ಎರಡು ಡಜನ್ ಕೃತಿಗಳನ್ನು ಬರೆದು ಬಿಸಾಕುವ ಸಾಮರ್ಥ್ಯವುಳ್ಳ ಈ ಕಾಮತರ ಅಂಕಣದಲ್ಲಿ ಮುಸ್ಲಿಂ- ಕ್ರೈಸ್ತರು ಹಾಗು ಕಾಂಗ್ರೆಸ್ಸಿಗರ ಟೀಕೆ, ಬ್ರಾಹ್ಮಣರು, ಹಿಂದೂತ್ವವಾದಿಗಳು ಹಾಗೂ ಬಿಜೆಪಿ ಸರ್ಕಾರ ಕುರಿತ ಸಮರ್ಥನೆಗಳನ್ನು ಬಿಟ್ಟರೆ ಬೇರಿನ್ನೇನೂ ಇರದು. ಜೊತೆಗೆ ಸಮರ್ಥನೆಗಳಿಗೆ ಪೂರಕವೆಂದು ಭ್ರಮೆ ಹುಟ್ಟಿಸುವ ಅಂಕಿಅಂಶಗಳ ಸಂಗ್ರಹ ಬೇರೆ (ಭೈರಪ್ಪ ಇವರನ್ನು ನೋಡಿಯೇ ಕಲಿತಿರಬೇಕು) ಒಟ್ಟಾರೆ ತೀರಾ ಬಾಲಿಶವೆನಿಸುವ ಒಂದೇ ರೀತಿಯ ಏಕಮುಖಿ ಬರಹಗಳು ಕೇವಲ ಒಂದು ವರ್ಗವನ್ನಷ್ಟೇ ಖುಷಿಗೊಳಿಸಬಲ್ಲದು.

ಜಾತೀಯತೆಗೂ ಬ್ರಾಹ್ಮಣರಿಗೂ ಸಂಬಂಧ ಕಲ್ಪಿಸಿ ಮಾಡಿದ ಟೀಕೆಗಳು ಸರಿಯಲ್ಲ! ಈ ಸುಳ್ಳಿನ ಬುಗ್ಗೆ ಯಾವತ್ತೊ ಬಿಸ್ಫೋಟ ಒಡೆದು ಸುಳ್ಳೆಂದು ಸಾಬೀತಾಗಿದೆ ಎಂಬ ಒಗ್ಗರಣೆಯ ಮಾತಿನೊಂದಿಗೆ ಇವರ ಅಂಕಿಅಂಶಗಳ ಪಟ್ಟಿ ಆರಂಭಗೊಳ್ಳುತ್ತದೆ. ಪುರಾಣ-ಇತಿಹಾಸಗಳ ಬೇಡ-ಏಕಲವ್ಯ ಬಳೆಗಾರ-ರನ್ನರಿಂದ ಹಿಡಿದು ಇಂದಿಗೂ ಕೂಡ ಜಾತೀಯತೆಯ ಕಾರಣಕ್ಕೆ ಸಮಾಜದ ಕೆಳವರ್ಗದ ಮಂದಿ ವಿದ್ಯಾವಂಚಿತರಾಗುತ್ತಿರುವ ಅನೇಕ ಉದಾಹರಣೆಗಳು ನಮ್ಮ ಕಣ್ಮುಂದೆಯೇ ಇದ್ದರೂ ಭಾರತದಲ್ಲಿ ಜಾತೀಯತೆ ಇದ್ದಿರಲೇ ಇಲ್ಲ ಎಂಬ ಹೊಸ ವಾದ ಇವರದು (ಹಿಂದೂತ್ವವಾದಿಗಳ ಸೋಗಿನ ನಾಟಕಗಳಿಂದ ಭ್ರಮನಿರಸನಗೊಂಡ ದಲಿತರು-ಇತರ ಧರ್ಮದೆಡೆಗೆ ಆಕರ್ಷಿತರಾಗುತ್ತಿರುವ (ಬೌದ್ಧ-ಇಸ್ಲಾಂ-ಕ್ರಿಶ್ಚಿಯಾನಿಟಿ) ಹಿನ್ನೆಲೆಯಲ್ಲಿ ಈ ಪೂಸಿ ಹೊಡೆಯುವಿಕೆಯ ಅನಿವಾರ್ಯತೆ ಹಿಂದೂತ್ವವಾದಿಗಳಿಗಿವೆ). ಅಂಬೇಡ್ಕರ್‌ರಾಗಲೀ, ಅವರಂಥ ಅನೇಕ ಕೆಳವರ್ಗದ ಮಹನೀಯರ ಜೀವನ ಚರಿತ್ರೆಗಳನ್ನು ನೋಡಿದರೆ ವಿದ್ಯೆ ಕಲಿಯಲು ಅವರು ಪಟ್ಟ ಪಾಡು ಅರ್ಥವಾಗುತ್ತದೆ. ಸ್ವಲ್ಪಮಟ್ಟಿಗಿನ ಬೆಂಬಲವಿದ್ದ ಅವರ ಕತೆಯೇ ಹೀಗಿದ್ದರೆ ಸಾಮಾನ್ಯ ದಲಿತನ ಸ್ಥಿತಿ ಹೇಗಿದ್ದಿರಬಹುದು? ಮುಟ್ಟಿಸಿಕೊಳ್ಳಲೂ ಮಾತಾಡಿಸಲೂ ಹಿಂಜರಿಯುತ್ತಿದ್ದ ಜಾತೀಯತೆಯ ಸಮಾಜದಲ್ಲಿ ವಿದ್ಯೆಯ ಏಕಸ್ವಾಮ್ಯ ಯಾರಿಗೆ ಲಭಿಸಿತ್ತು ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿಯೇ. ಈ ಎಲ್ಲದಕ್ಕೂ ಮೂಲ ಕಾರಣವಾದ ಜಾತೀಯತೆಯನ್ನು ಪೋಷಿಸಿ ನೀರೆರೆದವರು ಯಾರು? ಎಂಬುದು ಕಾಮತರಿಗೆ ಗೊತ್ತಿಲ್ಲವೆಂದೇನೂ ಇಲ್ಲ. ತಮಾಷೆಯ ಸಂಗತಿಯೆಂದರೆ, ಇದೇ ಕಾಮತರ ಗೌಡಸಾರಸ್ವತ ಸಮಾಜವನ್ನು ಹಿಂದೊಮ್ಮೆ ಶೂದ್ರ ವರ್ಗವೆಂದು ಅವಮಾನಿಸಿದ ಸಂಗತಿ ಈ ಕಾಮತರಿಗೆ ಗೊತ್ತಿರಲಿಕ್ಕಿಲ್ಲ. ಜಾತೀಯತೆ ಎಂತಹವರನ್ನೂ ಬಿಡಲಿಲ್ಲ ಎಂಬುದಕ್ಕೆ ಇದು ಉದಾಹರಣೆ. ಶಿವಾಜಿಯ ಕಾಲದಲ್ಲಿ 'ಕುಡಾಳ'ದ ಗೌಡ ಸಾರಸ್ವತ 'ಶೇಣವಿ'ಗಳು ಬ್ರಾಹ್ಮಣರು ನಿರ್ವಹಿಸುತ್ತಿರುವ ಕೆಲಸಗಳನ್ನು ಮಾಡುವುದನ್ನು ನೋಡಿದ ಶಿವಾಜಿಯ ಅಧಿಕಾರಿ ವರ್ಗದವರು ಅದನ್ನು ಆಕ್ಷೇಪಿಸಿದರಂತೆ. ಮೀನು-ಮಾಂಸ ತಿನ್ನುವ ಹಾಗು ಒಕ್ಕಲಿಗತನ ಮಾಡುವ (ಪುಣ್ಯ ಸಂಪಾದನೆಗೆ ಪ್ರಾಮುಖ್ಯತೆ ನೀಡುವ ಸಲುವಾಗಿ ಬ್ರಾಹ್ಮಣರು ಪವಿತ್ರವೆಂಬ ನಂಬಿಕೆಯ ಭೂಮಿ ತಾಯಿಯನ್ನು ಘಾತಿಸುವ ಕೆಲಸವನ್ನು ತಾವು ಮಾಡಹೋಗದೇ ಶೂದ್ರರಿಗೆ ವಹಿಸಿದ್ದರು) ನೀವು ಬ್ರಾಹ್ಮಣರಲ್ಲ ಶೂದ್ರರು ಎಂದು ಅವರ ಕೆಲಸವನ್ನು ತೀವ್ರವಾಗಿ ಆಕ್ಷೇಪಿಸಿದಾಗ ಈ ಶೇಣವಿಗಳು ಮುಸಲ್ಮಾನ ಆದಿಲ್‌ಶಾಹಿಗಳೂ ಕೂಡ ನಮ್ಮನ್ನು ಈ ರೀತಿ ಅವಮಾನಿಸಿಲ್ಲ ಎಂದು ಶಿವಾಜಿಯ ಬಳಿ ಅಲವತ್ತುಕೊಂಡಾಗ ಆತ ಧಾರ್ಮಿಕ ಸಭೆ ಕರೆದು ಸಮಸ್ಯೆಯನ್ನು ಇತ್ಯರ್ಥಗೊಳಿಸಿದನಂತೆ. ಇದು 1663 ರಲ್ಲಿ ನಡೆದ ಘಟನೆ.



ಇನ್ನು ಕಾಮತರ ವಿದ್ಯೆಯ ವಿಷಯಕ್ಕೆ ಬಂದರೆ ಇವರದೇ ಗೌಡ ಸಾರಸ್ವತ ಸಮಾಜಕ್ಕೆ ಸೇರಿದ್ದ ಭಾರತ ಕಂಡ ಶ್ರೇಷ್ಠ ಮಹನೀಯರಲ್ಲೊಬ್ಬರಾದ ಶ್ರೀ ಕುದ್ಮುಲ್ ರಂಗರಾಯರು ದಾರಿಯಲ್ಲಿ ಹೋಗುವಾಗ ಅವರೆಡೆಗೆ ಕಲ್ಲು-ಕೆಸರನ್ನೆಲ್ಲ ಎಸೆಯುತ್ತಿದ್ದರಂತೆ. ಅವರ ಮಕ್ಕಳನ್ನು ಅವಮಾನಿಸುತ್ತಿದ್ದರಲ್ಲದೇ ಕೆ. ರಂಗರಾವ್‌ರಾದ ಅವರನ್ನು ಕೆರೆಂಗ್ (ತುಳುವಿನ ಗೆಣಸು) ರಾಯರೆಂದು ಲೇವಡಿ ಮಾಡುತ್ತಿದ್ದರು. ಅವರ ಮಕ್ಕಳನ್ನು ಮದುವೆಯಾಗಲು ಈ ಕಾಮತರ ಗ್ರೇಟ್ ಸಮಾಜ ಮುಂದೆ ಬರುವುದು ಬಿಡಿ ತಮ್ಮ ಸಮಾಜದಿಂದಲೇ ರಂಗರಾಯ ರಿಗೆ ಬಹಿಷ್ಕಾರ ಹಾಕಿತ್ತು. ಅಷ್ಟಕ್ಕೂ ಇವರು ಮಾಡಿದ ಘೋರಾತಿಘೋರ ಅಪರಾಧವೇನು ಗೊತ್ತೆ? ಶತಮಾನಗಳ ಹಿಂದೆಯೇ ಮಂಗಳೂರಿನಲ್ಲಿ DCM (ಡಿಪ್ರೆಸ್ಡ್ ಕ್ಲಾಸಸ್ ಮಿಷನ್) ಸಂಸ್ಥೆ ತೆರೆದು ಅಸ್ಪೃಶ್ಯರೆನಿಸಿಕೊಂಡವರನ್ನೂ ಮುಟ್ಟಿಸಿಕೊಂಡು ಅವರ ವಿದ್ಯಾಭ್ಯಾಸಕ್ಕಾಗಿ ಪಣತೊಟ್ಟು ಜೀವ ಸವೆಸಿದ್ದು. ಆದರೆ ಕಾಮತರು ಹೇಳುವ ನಮ್ಮ ಅಂಕಿ-ಅಂಶಗಳ ಗ್ರೇಟ್ ಸಂಸ್ಕೃತಿಗೆ ಮಾತ್ರ ದಲಿತರ ಪಾಲಿಗೆ ದೇವರ ಸಮಾನರಾದ ರಂಗರಾಯರು ಥೇಟ್ ವಿಲನ್ ತರಹ ಯಾಕೆ ಕಾಣಿಸಿಕೊಂಡರೋ ಆ ದೇವರೇ ಬಲ್ಲ. ಹೋಗಲಿ ಇವೆಲ್ಲ ಹಳೇ ಕಾಲದ ಮಾತಾಯಿತು ಬಿಡಿ. ನಾನೇ ಗಮನಿಸಿರುವಂತೆ ಕೆಲ ಕೊರಗ ಜನಾಂಗದ ಮಕ್ಕಳು ಕೂಗಳತೆಯ ದೂರವಿದ್ದ ಶಾಲೆಯನ್ನು ಬಿಟ್ಟು ದೂರದ ಶಾಲೆಗೆ ಹೋಗುತ್ತಿದ್ದವು. ಕಾರಣ ವಿಚಾರಿಸಿದಾಗ ತಿಳಿದು ಬಂದದ್ದೆಂದರೆ, ಆ ಪೇಟೆ ಶಾಲೆಯ ಮಕ್ಕಳ "ಪೋಷಕ"ರ ವಿರೋಧವಂತೆ. ಇದು ನಮ್ಮ ಸಂಸ್ಕೃತಿ. ಇಂತಹ ನೂರಾರು ಸಂಗತಿಗಳು ಪ್ರತಿದಿನ ನಮ್ಮ ಸುತ್ತಮುತ್ತಲೇ ನಡೆಯುತ್ತಿರುತ್ತವೆ. ಇದು ಕಾಮತರಿಗೂ ಗೊತ್ತಿಲ್ಲವೆಂದೇನಲ್ಲ, ಆದರೂ ಸುಳ್ಳನ್ನು ಸತ್ಯವೆಂದು ಸಾಧಿಸುತ್ತಾ, ಅದನ್ನೇ ಸತ್ಯವೆಂಬ ಭ್ರಮೆ ಹುಟ್ಟಿಸಿ ಬಿಡುವ ತಂತ್ರಗಾರಿಕೆಯ ಯತ್ನವಿದಷ್ಟೇ.

"ಜಾತೀಯತೆಯ ಹಿಡುಗಿಗೆ ವಿದಾಯ ಹೇಳಿ" ಎಂಬ ಆದರ್ಶದ ಶೀರ್ಷಿಕೆಯಲ್ಲಿ ಬಂದ ಲೇಖನದಲ್ಲಿ -ಆದದ್ದು ಆಗಿಹೋಯಿತು, ಇನ್ನು ಮುಂದಾದರೂ ಜಾತೀಯತೆಗೆ ಪ್ರೋತ್ಸಾಹ ನೀಡುವಂತ ಸಂಗತಿಗಳಿಗೆ ಉತ್ತೇಜನ ನೀಡಬೇಕೆಂಬ ಕಿವಿಮಾತು ತನ್ನ ಮೇಲ್ವರ್ಗದ ಬಂಧುಗಳ ಕುರಿತಾಗಿ ಬರೆದಿದ್ದರೆ ಶೀರ್ಷಿಕೆಗೊಂದು ಅರ್ಥವಿರುತ್ತಿತ್ತು. ಬದಲಿಗೆ ಇದ್ದಿರುವುದು ಮಾತ್ರ ತನ್ನವರ ಕುರಿತ ಸಮರ್ಥನೆ ಮಾತ್ರ. (ಗುಜ್ಜರ್ ಸಮುದಾಯವಿರುವೆಡೆ ಈ ರೀತಿ ಬರೆಯುವ ಧೈರ್ಯವಿಲ್ಲದಿದ್ದರೂ ತನ್ನವರ ಸಮರ್ಥನೆಗೆ ಈ ಗುಜ್ಜರರೇ ಸಿಕ್ಕರು).



ಈ ಹಿಂದೆ ಏನೋ ಜರುಗಿಹೋಗಿದೆ ಎಂದು ಪ್ರತೀಕಾರದ ಉದ್ದೇಶಕ್ಕೆ ಅವನ್ನು ಕೆದಕುವುದರಲ್ಲಿ ಯಾವುದೇ ಅರ್ಥವಿಲ್ಲ. ಅದೇರೀತಿ ಹಿಂದಿನ ತಪ್ಪುಗಳ ಸಮರ್ಥನೆಯೂ ಕೂಡ ನೊಂದವರನ್ನು ಇನ್ನಷ್ಟು ಕೆರಳಿಸಬಲ್ಲುದಾದ ಕಾರಣ ಅಪಾಯಕಾರಿಯೆನ್ನಬಹುದು. ಏನೇ ಆದರೂ ತಮ್ಮ ಕಾರ್ಯ ಸಾಧನೆಗಾಗಿ (ದಲಿತರನ್ನು ಮರಳಿ ಭಜರಂಗದಳ, ರಾಮಸೇನೆ ಮುಂತಾದೆಡೆಗೆ ಆಕರ್ಷಿಸುವಂತಾಗಿ ಸೈನಿಕರ ಕೊರತೆಯನ್ನು ತುಂಬಲು) ತಮ್ಮ ಮೂಗಿನ ನೇರಕ್ಕೆ ನಾಟಕವಾಡುವ ಮನಸ್ಸುಗಳ ವಿರುದ್ಧ ಜನಜಾಗೃತಿಯಾಗಬೇಕಿದೆ. ಆದ್ದರಿಂದ ವಾಸ್ತವಗಳ ನೆಲೆಗಟ್ಟಿನಲ್ಲಿ ಜಾತೀಯತೆ ತಾರತಮ್ಯಗಳಿಗೆ ಪೂರಕವೆನಿಸುವ ಬೆಳವಣಿಗೆಗಳನ್ನು ತಡೆಯುವ ಪ್ರಯತ್ನಗಳಾಗಬೇಕೇ ವಿನಃ ಪ್ರತೀಕಾರದ ಮಾತಾಗಲೀ ಅಥವಾ ಕಾಮತರಂಥವರ ಪೊಳ್ಳು ಸಮರ್ಥನೆಗಳಾಗಲೀ ಖಂಡಿತಾ ಅಲ್ಲ.

■ರವಿ ಪುತ್ತೂರ,
ದಕ್ಷಿಣ ಕನ್ನಡ

# ಹೊಣೆಗೇಡಿತನವು ಯಾರಿಗೂ ಸಲ್ಲದು

ಕಂಡದ್ದನ್ನು ನಂಬುವವರಿಗಿಂತ ಕಾಣದ್ದನ್ನು ನಂಬುವವರೇ ಜಾಸ್ತಿ. ಮರೆಯುವವರು ನಂಬಿಕೆಯನ್ನು ಹೇರುವರು. ನಂಬಿಕೆಯನ್ನೇ ಆಧರಿಸಿದ್ದು ಚರಿತ್ರೆಯಲ್ಲವಲ್ಲ! ಅಯ್ಯೋ ರಾಮ! ಒಂದೇ ಎರಡೇ? ಹೇಳಲಾಗುವುದಿಲ್ಲ.

ರಾಮಾಯಣವು ಆದಿಕಾವ್ಯವೆಂದೂ ಅದರ ಕರ್ತೃ ವಾಲ್ಮೀಕಿಯೆಂದೂ ಅವನು ಮೂಲತಃ ಅರಣ್ಯವಾಸಿ ನರಹಂತಕನಾಗಿದ್ದನೆಂದೂ ನಂಬಲಾಗಿದೆ. ಇತ್ತೀಚಿನವರೆಗೂ ಆ ಕುರಿತು ಯಾರಿಗೂ ಸಂಶಯ ಬರಲಿಲ್ಲ. ಯಾರೂ ವಾದಿಸಲಿಲ್ಲ.

ಜೀವ-ಜಂತು, ಮೃಗ-ಪಕ್ಷಿ, ಕ್ರಿಮಿಕೀಟಗಳು ಗುಂಪಾಗಿ ಬದುಕುವುದನ್ನು ಕಾಣುತ್ತೇವೆ. ಅದೇ ರೀತಿಯಲ್ಲಿ ಮಾನವ ಬದುಕೂ ಬೆಳೆದು ಬಂದಿದೆಯೆನ್ನುತ್ತದೆ ಮಾನವೇತಿಹಾಸ. ಕಾಲ ದೇಶ ಪ್ರದೇಶಗಳಿಗನುಗುಣವಾಗಿ ಭಾಷೆ-ಸಂಸ್ಕೃತಿಗಳುದ್ಭವವಾಗಿರುವುದು ಪ್ರಾಕೃತಿಕ ಸಹಜ ಕ್ರಿಯೆಯೆಂಬುದನ್ನು ಜಗತ್ತು ಒಪ್ಪಿದೆ. ಮಾನವ ಬದುಕು ಸಹನೀಯವೆನಿಸಲು ಅದೊಂದು ಅನಿವಾರ್ಯ ಜಾಗತಿಕ ಬದ್ಧತೆಯಾಗಿದೆ.

ಬದುಕುವ ಆಸೆಯೊಂದಿಗೆ ಆತ್ಮರಕ್ಷಣೆಗಾಗಿಯೋ, ಯಜಮಾನಿಕೆಗಾಗಿಯೋ ಪರಸ್ಪರ ಜಗಳ, ಅಪಹರಣ, ಮರ್ದನ, ಮಾರಣಗಳು ಆದಿಮಾನವ ಸ್ಥಿತಿಯಿಂದಲೇ ಆರಂಭವಾಗಿರಬೇಕು. ಹಾಗಾಗಿದೆಯೆನ್ನುವುದಕ್ಕೆ ಪ್ರಚಲಿತ ರಾಜಕೀಯ, ದುರಾಡಳಿತ, ಉಗ್ರಗಾಮಿತ್ವ, ಭಯೋತ್ಪಾದಕತೆ, ಜಾತಿವಾದ, ಕೋಮುವಾದ, ಅತ್ಯಾಚಾರ, ಅನಾಚಾರ ಇತ್ಯಾದಿ ಇತ್ಯಾದಿ ವಿದ್ಯಮಾನ(?)ಗಳು ಸಾಕ್ಷಿಯಲ್ಲವೆ? ತಾವಿರುವ ಭೂಭಾಗವನ್ನಷ್ಟೇ ಪ್ರಪಂಚವೆಂದು ಪರಿಭಾವಿಸಿಕೊಂಡಿದ್ದ ಪ್ರದೇಶದಲ್ಲಿ ಸಂಭವಿಸಿರಬಹುದಾಗಿದ್ದ ಇಂತಹ ಪ್ರತ್ಯಕ್ಷತೆಯಿಂದ ನೊಂದಿರಬಹುದಾದ ವಾಲ್ಮೀಕಿಯಾದಿ ಋಷಿ ಮುನಿ ಚಿಂತಕರು, ಮಾನವ ಬದುಕಿಗೊಂದು ಸೈದ್ಧಾಂತಿಕತೆಯನ್ನು ರಾಮಾಯಣವಾಗಿ-ಅನಕ್ಷರತೆಯ ಆ ಕಾಲದಲ್ಲಿ-ಜನಪದೀಯ ಮೂರ್ತ ಸ್ವರೂಪಕ್ಕೆ ತಂದಿರಬೇಕೆಂದು ನಂಬುವುದರಲ್ಲಿ ಮಾನವ ಬದುಕಿನ ಹಿತ ಚಿಂತನೆಯ ಬದ್ಧತೆಗಳಿವೆ ಎಂದೆನ್ನಬಹುದಷ್ಟೇ? ಹಾಗಿರುವುದರಿಂದಲೇ ದೇಶ ವಿದೇಶಗಳ ವಿಭಿನ್ನ ಭಾಷೆಗಳಲ್ಲಿ ಆಯಾ ಪ್ರದೇಶಗಳ ಸಾಂಸ್ಕೃತಿಕ ಸಾಮಾಜಿಕ ಮೌಲ್ಯಗಳಿಗನುಗುಣವಾಗಿ ರಾಮಾಯಣವು ಅಸ್ತಿತ್ವವನ್ನು ಹೊಂದಿರಬೇಕಷ್ಟೇ? (ತಾವಾಡಿರುವ ಮಾತನ್ನೇ ಮರೆತವರು ಇದನ್ನು ಒಪ್ಪಲಾರರು).

ಪ್ರಸ್ತುತ ರಾಮಸೇತುವನ್ನು ಭ್ರಾಮಕತೆಯ ಪ್ರಕರಣವನ್ನಾಗಿ ಮಾರ್ಪಡಿಸಲೆತ್ನಿಸುವುದಕ್ಕಿಂತ ಅಲ್ಲಿಯ ಪ್ರಾಕೃತಿಕ ಸ್ಥಿತ್ಯಂತರದೊಂದಿಗೆ ಜನಸಾಮಾನ್ಯರ ಭೌತಿಕ ಮತ್ತು ಭಾವನಾತ್ಮಕ ಸಂಬಂಧ ಹಾಗೂ ಅವರ ಬದುಕಿನ ಸುಭದ್ರತೆಗೆ ಧಕ್ಕೆಯಾಗದಂತೆ ನೋಡುವುದು ಬೌದ್ಧಿಕ ಶ್ರೇಷ್ಠತೆಯನ್ನು ತೋರಿಸುತ್ತದೆ. ವೈಚಾರಿಕವಾಗಿಯೂ ವೈಜ್ಞಾನಿಕವಾಗಿಯೂ ಅದು ದೃಢಪಟ್ಟಿದೆ. ಜಾಗತೀಕರಣದ ರಾಜಕೀಯ ಪ್ರತಿಷ್ಠೆಗಾಗಿಯೋ, ಅನರ್ಥಕಾರಿ ಕ್ಷುಲ್ಲಕ ಆರ್ಥಿಕ ಲಾಭದ ದುರಾಸೆಯಿಂದಲೋ ಈ ನೈಸರ್ಗಿಕ ಭದ್ರತೆಯಾಗಿರುವ ಪ್ರಾಕೃತಿಕ ಸಂಪನ್ಮೂಲವನ್ನು ಛಿದ್ರಗೊಳಿಸುವ ದುಸ್ಸಾಹಸದಿಂದ ಅಪರಿಹಾರ್ಯ ಅಪಾಯ ಹಾಗೂ ತುಂಬಲಾರದ ಹಾನಿ ಸಂಭವಿಸುವ ಸಾಧ್ಯತೆಯು ಎದ್ದು ಕಾಣುತ್ತದೆ.

ಹೊಣೆಗೇಡಿತನವು ಯಾರಿಗೂ ಸಲ್ಲದು.

-ಪಿ. ಗೋಕುಲ್‌ದಾಸ್, ಮಂಗಳೂರು

ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜಿನಲ್ಲಿ ಪ್ರಾಂಶುಪಾಲರ ವಿರುದ್ಧ ನಡೆದಿರುವ ದಾಂಧಲೆಯ ವಿರುದ್ಧ ಪ್ರತಿಭಟನೆ ಈ ಪತ್ರ. ಈ ಅಮಾನವೀಯ ಘಟನೆ ಸಂಕುಚಿತ ಮನೋಭಾವದ ಪ್ರತೀಕವಾಗಿ ಮಾತ್ರ ನಡೆದಿದೆ. ಯಾವುದೇ ರಾಜಕೀಯ ಕಾರಣಕ್ಕಾಗಿ ವೇದಿಕೆ ಬಿಟ್ಟುಕೊಡುವುದಿಲ್ಲ ಎಂಬ ಪ್ರಾಂಶುಪಾಲರ ನಿರ್ಧಾರ ವಿದ್ಯಾರ್ಥಿ ಹಿತಚಿಂತನೆಯಿಂದ ಮಾತ್ರ ಕೂಡಿದೆ. ಇದನ್ನು ಅರ್ಥ ಮಾಡಿಕೊಳ್ಳಲಾಗದ ಒಂದು ಗುಂಪು ಶಾಸಕ ಗಣೇಶ್ ಕಾರ್ಣಿಕರನ್ನು ಮುಂದಿಟ್ಟುಕೊಂಡು ವಿ.ವಿ. ಕಾಲೇಜಿಗೆ ನುಗ್ಗಿ, ಅಧ್ಯಾಪಕರನ್ನು ಅವಾಚ್ಯವಾಗಿ ನಿಂದಿಸಿ ಶುದ್ಧ ಶಿಕ್ಷಣ ವಾಹಿನಿಗೇ ಅವಮಾನ ಮಾಡಿದ್ದಾರೆ. ನಿಜವಾದ ಗುರುಗಳನ್ನು-ಚಿಂತಕರನ್ನು ಪಡೆದಿರುವ ವಿಶ್ವವಿದ್ಯಾನಿಲಯ ಕಾಲೇಜು ಬಡವಿದ್ಯಾರ್ಥಿಗಳನ್ನು ಮುಂದೆ ತರುತ್ತ ಮಾದರಿ ಶಿಕ್ಷಣ ನೀಡುವಲ್ಲಿ ಯಶಸ್ವಿಯಾಗಿದೆ. ಇದನ್ನು ಗುರುತಿಸದ ಶಿಕ್ಷಣ ಕ್ಷೇತ್ರ ಮಂತ್ರಿಯೇ ಆಗಲಿ ಪೂರ್ವಗ್ರಹಪೀಡಿತರಾಗಿ ನಡೆದುಕೊಂಡಲ್ಲಿ ಅವರು ಆ ಪದವಿಗೆ ಅನರ್ಹರು.

-ಜ್ಯೋತಿ ಗುರುಪ್ರಸಾದ್,
ಕಾರ್ಕಳ

"ಕರ್ನಾಟಕ ಕೋಮು ಸೌಹಾರ್ದ ವೇದಿಕೆಯು ಜನತಂತ್ರ ವಿರೋಧಿ ಪ್ರತಿಭಟನೆ ಮಾಡುತ್ತಿದೆ ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಬಹುಮತವಿರುವ ಯಾವುದೇ ಪಕ್ಷವು ಸರ್ಕಾರ ರಚಿಸುವ ಅಧಿಕಾರ ಹೊಂದಿರುತ್ತದೆ. ಇದನ್ನು ಯಾವುದೇ ಸಂಘಟನೆಗಳಿಗಾಗಲೀ, ವ್ಯಕ್ತಿಗಳಿಗಾಗಲೀ ತಡೆಯಲು ಸಾಧ್ಯವಿಲ್ಲ. ಇಂತಹ ಪ್ರತಿಭಟನೆ ನಡೆಸುವ ಸಂಘಟನೆಗಳ ವಿರುದ್ಧ ಪ್ರಜಾಪ್ರಭುತ್ವ ವಿರೋಧಿ ಮೊಕದ್ದಮೆ ಹೂಡಬೇಕಾಗುತ್ತದೆ."

ಹೀಗೊಂದು ಹೇಳಿಕೆ ದಿನಪತ್ರಿಕೆಯೊಂದರಲ್ಲಿ ಇತ್ತೀಚೆಗೆ ಪ್ರಕಟಗೊಂಡಿದೆ.

ಜನವಿರೋಧಿ ನೀತಿಯ ವಿರುದ್ಧ ಜನರು ಬಂಡೇಳುವುದನ್ನು ಮತ್ತು ಅವರ ಹೋರಾಟಗಳನ್ನು ಖಂಡಿಸುವಂತೆ ಈ ಪತ್ರ ಬರೆಯಲಾಗಿದೆ. ಬಹುಶಃ ಭ್ರಷ್ಟರ ಕೈಗೊಂಬೆಗಳಾಗಿರುವ ಕೆಲವು ಪೊಲೀಸ್ ಅಧಿಕಾರಿಗಳ ಹೇಳಿಕೆಗಳೂ ಇದೇರೀತಿ ಇರುತ್ತದೆ. ಸರ್ಕಾರದ ವಿರುದ್ಧ ಪ್ರಶ್ನಿಸುವವರನ್ನು, ಪ್ರತಿಭಟಿಸುವವರನ್ನು ಹಿಡಿದು ಜೈಲಿಗೆ ಅಟ್ಟಿ ಎಂಬಂತಹ ಹೇಳಿಕೆಯಾಗಿದೆ!


ಯಾವುದೇ ಪಕ್ಷಕ್ಕೆ ಬಹುಮತವೇ ಇರಲಿ, ಯಾವ ಅಧಿಕಾರವನ್ನಾದರೂ ಹೊಂದಿರಲಿ, ಆ ಪಕ್ಷದ ಜನವಿರೋಧಿ ನೀತಿಯ ವಿರುದ್ಧ ನಿಲ್ಲುವ ಹಕ್ಕು ಪ್ರಜಾಪ್ರಭುತ್ವದಲ್ಲಿ ಇಲ್ಲವೇ? ಕೋಮು ಸಾಮರಸ್ಯ ಕದಡುವ ಅಥವಾ ಹಿಂಸಾಚಾರಗಳಿಗೆ ಕಾರಣವಾಗುವ ಪಕ್ಷದ ವಿರುದ್ಧ ಜನರು ದನಿ ಎತ್ತಿದರೆ ಅದು ಅಪರಾಧವೇ? ಒಂದೋ ಜನರು ಸರ್ಕಾರದ ಪರವಾಗಿರಬೇಕು ಇಲ್ಲವೇ ತೆಪ್ಪಗೆ ಮೌನವಾಗಿ ಬಿದ್ದಿರಬೇಕು ಅಲ್ಲವೇ?

ಕೋಮು ಸೌಹಾರ್ದ ವೇದಿಕೆಯು ಜನವಿರೋಧಿಗಳು ಅಧಿಕಾರದ ಗದ್ದುಗೆ ಹಿಡಿಯುವುದನ್ನು ವಿರೋಧಿಸುತ್ತೇವೆ ಎಂದು ಹೇಳಿದೆಯೇ ಹೊರತು-ಗುಂಡಿಟ್ಟು ಸಾಯಿಸುತ್ತೇವೆ, ಬಾಂಬ್ ಹಣೆಯುತ್ತೇವೆ ಎಂದು ಎಲ್ಲೂ ಹೇಳಿಲ್ಲವಲ್ಲ? ಹಾಗಿದ್ದಲ್ಲಿ ಅದು ಜನತಂತ್ರ ವಿರೋಧಿ ಪ್ರತಿಭಟನೆ ಹೇಗಾಗುತ್ತದೇ

ನಮ್ಮ ದೇಶದಲ್ಲಿ ಹೋರಾಟಗಳು, ಪ್ರತಿಭಟನೆಗಳು ಹೊಸತೇನಲ್ಲ, ಈಗ ಇದ್ದಕ್ಕಿದ್ದಂತೆ ಎದ್ದು ನಿಂತು ಪ್ರತಿಭಟನೆ ನಡೆಸುವ ಸಂಘಟನೆಗಳ ವಿರುದ್ಧ ಪ್ರಜಾಪ್ರಭುತ್ವ ವಿರೋಧಿ ಮೊಕದ್ದಮೆಗಳನ್ನು ಹೂಡಬೇಕೆಂದು ಹೇಳುವವರು ಮೊದಲು "ಪ್ರಜಾಪ್ರಭುತ್ವ" ಎಂದರೇನು ಎಂಬುದನ್ನು ಅರಿತುಕೊಳ್ಳಲಿ.

-ಕಿರುಗುಂದ ರಫೀಕ್,
ಮೂಡಿಗೆರೆ


# ಜೇಡರಹಳ್ಳಿ ಎಂದರೆ ಹಂಪನಾ?



ಭಾ.ಮಾ.ಹರೀಶ್ 'ಜೇಡರಹಳ್ಳಿ' ಎಂಬ ಚಿತ್ರ ಮಾಡಲು ಹೊರಟಿದ್ದಾರೆ. ಈ ಹೆಸರನ್ನು ಅಂಗೀಕರಿಸಲು ಮೊದಲಿಗೆ ಚೇಂಬರ್ ಹಿಂಜರಿದಿತ್ತು, ಆಮೇಲೆ ಹರೀಶ್ ವಾದಕ್ಕೆ ಶರಣಾಗಿ ಓ.ಕೆ. ಅಂದಿದೆ.

ಇದಕ್ಕೆ ಕಾರಣವೂ ಇದೆ. 'ಜೇಡರಹಳ್ಳಿ' ಅಂದಾಕ್ಷಣ ಎಲ್ಲರ ನೆನಪಿಗೆ ಬರುವುದು ಕುಖ್ಯಾತ ರೌಡಿ ಜೇಡರಹಳ್ಳಿ ಕೃಷ್ಣಪ್ಪ. ಆದರೆ ಹರೀಶ್ ಪ್ರಕಾರ "ಜೇಡರಹಳ್ಳಿಯಲ್ಲಿ ಹಂ.ಪ. ನಾಗರಾಜಯ್ಯ ಹುಟ್ಟಿಲ್ಲವೇ? ಹೀಗಾಗಿ ಜೇಡರಹಳ್ಳಿ ಅಂದಾಕ್ಷಣ ಕೃಷ್ಣಪ್ಪನ ನೆನಪೇ ಯಾಕಾಗಬೇಕು?"

ಚಿತ್ರದ ಹೆಸರನ್ನು ಕುರಿತಂತೆ ಹಿಂದೊಮ್ಮೆ ಇದೇ ತರಹದ ಇನ್ನೊಂದು ಘಟನೆ ನಡೆದದ್ದು ನಿಮಗೆ ನೆನಪಿರಬಹುದು. ಶಿವಮಣಿ ನಿರ್ದೇಶನದ, ಉಪ್ಪಿ ನಟನೆಯ 'ಮಾಸ್ತಿ' ಚಿತ್ರ ಅನೌನ್ಸ್ ಆದಾಗ ಹಲವರು ಪ್ರತಿಭಟಿಸಿದ್ದರು. "ಮಾಸ್ತಿ ಎಂದಾಕ್ಷಣ 'ಮಾಸ್ತಿ, ಕನ್ನಡದ ಆಸ್ತಿ' ಎಂದೇ ಖ್ಯಾತಿ ಪಡೆದಿದ್ದ ಲೇಖಕ ಮಾಸ್ತಿ ವೆಂಕಟೇಶ್ ಐಯ್ಯಂಗಾರ್ ನೆನಪಿಗೆ ಬರುತ್ತಾರೆ. ಆದ್ದರಿಂದ ರೌಡಿಯಿಸಂ ಕಥೆಯನ್ನು ಹೊಂದಿರುವ ಚಿತ್ರಕ್ಕೆ ಅವರ ಹೆಸರನ್ನು ಇಡುವುದು ಸೂಕ್ತವಲ್ಲ" ಎಂಬುದು ಅವರೆಲ್ಲರ ಅಭಿಪ್ರಾಯವಾಗಿತ್ತು. ಅಷ್ಟೇ ಅಲ್ಲ, ಈ ಅಭಿಪ್ರಾಯಕ್ಕೆ ಶಿವಮಣಿ ಕ್ಯಾರೆ ಎನ್ನದಿದ್ದಾಗ ಕನ್ನಡ ರಕ್ಷಣಾ ವೇದಿಕೆಯವರು ಚಿತ್ರದ ಸೆಟ್‌ಗೆ ದಾಳಿ ಇಟ್ಟು ಅಲ್ಲಿನ ಪೋಸ್ಟರ್‌ಗಳನ್ನು ನಾಶ ಮಾಡಿದ್ದರು. ಕೊನೆಗೂ ಅದರ ನಿರ್ಮಾಪಕ ರಾಮು ಚಿತ್ರದ ಹೆಸರನ್ನು 'ಮಸ್ತಿ' ಎಂದು ಬದಲಾಯಿಸಬೇಕಾಗಿತ್ತು.




ತಮಾಷೆ ನೋಡಿ. ಅಂದು ಸಾಹಿತಿಯ ಹೆಸರೇ ರಾಮುಗೆ ತೊಡಕಾಗಿತ್ತು. ಆದರೆ ಈಗ ರೌಡಿಯೊಬ್ಬನನ್ನು ನೆನಪಿಸುವ ಹೆಸರನ್ನಿಟ್ಟಿದ್ದರೂ ಹರೀಶ್ ಬಹಳ ಬುದ್ಧಿವಂತಿಕೆಯಿಂದ "ಅದು ರೌಡಿ ಹೆಸರಲ್ಲ, ಸಾಹಿತಿಯನ್ನು ನೆನಪಿಸುವ ಹೆಸರು" ಎಂದು ಹೇಳಿ ಬಚಾವ್ ಆಗಿದ್ದಾರೆ!

# ಸಾಯಿಪ್ರಕಾಶರ ನೂರರ ಸತ್ಯ!

ಸಾಯಿಪ್ರಕಾಶ್ ಎಂಬ ಅರೆಗನ್ನಡ ನಿರ್ದೇಶಕ 'ಸಚಿನ್ ಸಿಂಡ್ರೋಮ್'ನಿಂದ ಬಳಲುತ್ತಿದ್ದಾರೆ. ಅಂದಹಾಗೆ, ಅತ್ಯಂತ ವೇಗವಾಗಿ ಚಿತ್ರವನ್ನು ಮುಗಿಸುವುದರಲ್ಲಿ ಇವರು ಎಕ್ಸ್‌ಪರ್ಟ್ ಆಗಿರುವುದರಿಂದ ಗಾಂಧಿನಗರದವರು ಇವರ ಕಾರ್ಯಶೈಲಿಯನ್ನು ಸಚಿನ್ ಆಟಕ್ಕೆ ಹೋಲಿಸುವುದುಂಟು.

ಈಗಾಗಲೇ 87 ಚಿತ್ರಗಳನ್ನು ನಿರ್ದೇಶಿಸಿರುವ ಸಾಯಿಪ್ರಕಾಶ್ ಶತಕದತ್ತ ದಾಪುಗಾಲು ಹಾಕುತ್ತಿದ್ದಾರೆ. ನಾಲ್ಕು ವರ್ಷಗಳ ಹಿಂದೆ ಕನ್ನಡದ ಹಿರಿಯ ನಿರ್ದೇಶಕ ಭಾರ್ಗವ 49 ರಲ್ಲಿ ಕುಂಟುತ್ತಿದ್ದಾಗ ಸಾಯಿಪ್ರಕಾಶ್ 40 'ರನ್ ಗಳನ್ನು ಸ್ಕೋರ್' ಮಾಡಿದ್ದರು. ಕೊನೆಗೂ 'ಗಂಡುಗಲಿ ಕುಮಾರರಾಮ'ನ ಮುಖಾಂತರ ಭಾರ್ಗವ ಅರ್ಧ ಶತಕ ಪೂರೈಸಿ ತೃಪ್ತಿಪಡುತ್ತಿರುವಾಗಲೇ ಸಾಯಿಪ್ರಕಾಶ್ 75 ಗಡಿ ದಾಟಿಯೇಬಿಟ್ಟರು!



ಆದರೆ ಈಗ ಸಾಯಿಯವರ ವೇಗವೂ ಕುಂಠಿತವಾಗಿದೆ. "2009ರ ಕೊನೆಯಲ್ಲಿ ನಾನು ಶತಕ ಪೂರೈಸಬಹುದು, ಅದಕ್ಕಿಂತ ಮೊದಲು ಸಾಧ್ಯವೇ ಇಲ್ಲ" ಎನ್ನುತ್ತಾರೆ ಸಾಯಿಪ್ರಕಾಶ್. ಇದಕ್ಕೆ ಅವರು ಕಾರಣವನ್ನೂ ನೀಡುತ್ತಾರೆ: "ಈಗ ಚಿತ್ರೋದ್ಯಮ ಕವಲು ದಾರಿಯಲ್ಲಿದೆ. ಹಳಬರ ಚಿತ್ರಗಳನ್ನು ಪ್ರೇಕ್ಷಕ ನಿರಾಕರಿಸುತ್ತಿದ್ದಾನೆ. ಹೊಸಬರನ್ನು ಸ್ವೀಕರಿಸುತ್ತಿದ್ದಾನೆ. ಹೀಗಾಗಿ ಈ ಸಂದರ್ಭದಲ್ಲಿ ಪಿಚ್‌ಅನ್ನು ಸ್ಟಡಿ ಮಾಡಿ ಚಿತ್ರ ನಿರ್ಮಿಸಬೇಕಾಗಿದೆ. ಇದು ನನ್ನ ವೃತ್ತಿ ಜೀವನದ ಅತ್ಯಂತ ಸಂಕಷ್ಟದ ಸಮಯ" ಎನ್ನುತ್ತಾರೆ.

ಸೋಜಿಗದ ಸಂಗತಿ ಯಾವುದೆಂದರೆ ಸಾಯಿಪ್ರಕಾಶ್ ಎಷ್ಟು ನಿಧಾನವಾಗಿ ಚಿತ್ರಗಳನ್ನು ಮಾಡುತ್ತಾರೋ, ಕನ್ನಡ ಚಿತ್ರರಂಗ ಅಷ್ಟರ ಮಟ್ಟಿಗೆ ರಿಮೇಕ್ ಸಿನಿಮಾಗಳಿಂದ ಬಚಾವಾದಂತೆ! ಆದ್ದರಿಂದ ಸಾಯಿಪ್ರಕಾಶರು ಆದಷ್ಟು ನಿಧಾನವಾಗಿ ಮುಂದುವರಿಯುವುದು ಕನ್ನಡಿಗರಿಗೆ ಒಳ್ಳೆಯದು ಎಂಬುದು ಮಾತ್ರ ಕನ್ನಡಮ್ಮನಾಣೆಗೂ ಸತ್ಯ!

# ರಿಚರ್ಡ್ 'ಪಟ್ಲೇರ್'



ರಿಚರ್ಡ್ ಕ್ಯಾಸ್ಟಲೀನೋ ಎಂಬ ನಿರ್ದೇಶಕ ಸದ್ದಿಲ್ಲದೇ ಮತ್ತೊಂದು ಸಾಹಸ ಮಾಡಿದ್ದಾರೆ. ಇವರ ನಿರ್ದೇಶನದ 'ಬದಿ' ಎಂಬ ತುಳು ಚಿತ್ರ ಮೊನ್ನೆ ಮಂಗಳೂರಿನಲ್ಲಿ ಜ್ಯೋತಿ ಥಿಯೇಟರಿನಲ್ಲಿ ಬಿಡುಗಡೆಯಾಯಿತು. ಈ ಹಿಂದೆ ಇದೇ ಚಿತ್ರಮಂದಿರದಲ್ಲಿ ಅವರ ನಿರ್ದೇಶನದ 'ಬಂಗಾರ್ ಪಟ್ಲೇರ್' ಎಂಬ ತುಳು ಚಿತ್ರ ಶತದಿನೋತ್ಸವ ಕಂಡಿತ್ತು, ಆ ಚಿತ್ರಕ್ಕೆ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿಯೂ ದೊರಕಿತ್ತು.

ರಿಚರ್ಡ್ ಈ ಹಿಂದೆ 'ಸೆಪ್ಟೆಂಬರ್ 8' ಎಂಬ ಚಿತ್ರವನ್ನು ಒಂದೇ ದಿನದಲ್ಲಿ ಚಿತ್ರೀಕರಿಸಿ ಇಡೀ ಚಿತ್ರೋದ್ಯಮವೇ ತನ್ನ ಕಡೆ ನೋಡುವಂತೆ ಮಾಡಿದ್ದರು. ಅದಾದ ಬಳಿಕ 'ಬೊಗ್ಸಾಣೆ' ಎಂಬ ಕೊಂಕಣಿ ಚಿತ್ರವನ್ನೂ ನಿರ್ಮಿಸಿ ಕರ್ನಾಟಕ ಮತ್ತು ಗೋವಾದಲ್ಲಿ ಏಕಕಾಲದಲ್ಲಿ ಬಿಡುಗಡೆ ಮಾಡಿದ್ದರು.


'ಬದಿ'ಗೆ ಮೊನ್ನೆ ರಾಜ್ಯಪ್ರಶಸ್ತಿ ದೊರಕಿತ್ತು, ಈಗ ಜನರ ಪ್ರೋತ್ಸಾಹವೂ ದೊರಕಿದೆ. ಇದರಿಂದ ಸ್ಫೂರ್ತಿಗೊಂಡಿರುವ ರಿಚರ್ಡ್ ಇದೀಗ ಕೊಡವ ಚಿತ್ರವೊಂದನ್ನು ಕೈಗೆತ್ತಿಕೊಳ್ಳಲು ಹೊರಟಿದ್ದಾರೆ. ಕರ್ನಾಟಕದಲ್ಲಿ ಉಪ ಭಾಷೆಯ ಚಿತ್ರಗಳಿಗೆ ಮಾರುಕಟ್ಟೆ ಚಿಕ್ಕದಾಗಿರುವುದರಿಂದ ಇಂತಹ ಚಿತ್ರಗಳ ನಿರ್ಮಾಣ ಕಷ್ಟ. ಆದರೂ ಇಂಥವರ ಉತ್ಸಾಹದಿಂದ ಆಗಾಗ್ಗೆ ತುಳು, ಕೊಡವ, ಕೊಂಕಣಿ ಚಿತ್ರಗಳು ಅಲ್ಲೊಂದು, ಇಲ್ಲೊಂದು ಬರುತ್ತಲೇ ಇವೆ.

# ರಾಕ್ ಎಂಬ ಪಾದರಸ

ಕಳೆದ ಒಂದೂವರೆ ವರ್ಷದಿಂದ ಯಾವ ಚಿತ್ರವನ್ನೂ ಮಾಡದೆ ಸುಮ್ಮನೆ ಕೂತಿದ್ದ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಈಗ ಒಮ್ಮಿಂದೊಮ್ಮೆಗೆ ಧಾಮ್... ಧೂಮ್ ಎಂದು ಚಿತ್ರರಂಗದಲ್ಲಿ ಮೆರೆದಾಡಲು ಪ್ರಾರಂಭಿಸಿದ್ದಾರೆ.

ಟಿ. ಉದಯಶಂಕರ್‌ರವರ ಮಗ ಗುರುದತ್ ನಿರ್ದೇಶಿಸುತ್ತಿರುವ 'ಕಾಮಣ್ಣನ ಮಕ್ಕಳು' ಎಂಬ ಹಾಸ್ಯ ಭರಿತ ಚಿತ್ರದಲ್ಲಿ ರಾಕ್‌ಲೈನ್ ನಟಿಸುತ್ತಿದ್ದಾರೆ ಎಂಬುದು ಹಳೇ ಮಾತು. ಹೊಸ ವಿಷಯವೇನೆಂದರೆ, ಇನ್ನೊಂದೆರಡು ತಿಂಗಳುಗಳಲ್ಲಿ ಅವರ ರಾಕ್‌ಲೈನ್ ಪ್ರೊಡಕ್ಷನ್ ಸಂಸ್ಥೆ ಹಲವಾರು ಚಿತ್ರಗಳ ನಿರ್ಮಾಣಕ್ಕೆ ಕೈಹಾಕಲಿರುವುದು.

ನವೆಂಬರ್ ತಿಂಗಳಿನಲ್ಲಿ ರಾಕ್‌ಲೈನ್ ಪ್ರೊಡಕ್ಷನ್‌ನ ಎರಡು ಅದ್ದೂರಿ ಚಿತ್ರಗಳು ಸೆಟ್ಟೇರಲಿವೆ. ಗಣೇಶ್ ನಟಿಸುತ್ತಿರುವ 'ಮುಂಗಾರು ಮಳೆ ಭಾಗ-2' ಎಂಬ ಸ್ವಮೇಕ್ ಚಿತ್ರವನ್ನು ಕತೆಗಾರ ಪ್ರೀತಮ್ ಗುಬ್ಬಿ ನಿರ್ದೇಶಿಸುತ್ತಿದ್ದಾರೆ. ಅದೇ ಹೊತ್ತಿಗೆ 'ಕಾದಲ್ ಕೊಂಡೇನ್' ಎಂಬ ತಮಿಳು ಚಿತ್ರವನ್ನು ಕನ್ನಡಕ್ಕೆ ರಿಮೇಕ್ ಮಾಡುತ್ತಿದ್ದಾರೆ. ಇದರ ನಾಯಕ 'ದುನಿಯಾ' ಖ್ಯಾತಿಯ ವಿಜಯ್. ಅಲ್ಲಿಗೆ ಚಿತ್ರರಂಗದ ಸದ್ಯದ ಇಬ್ಬರು ಸೂಪರ್ ಸ್ಟಾರ್‌ಗಳು ರಾಕ್‌ಲೈನ್ ಚಿತ್ರಗಳಲ್ಲಿ ನಟಿಸುತ್ತಿದ್ದಾರೆ ಎಂದಾಯಿತು.



ಇವೆರಡು ಚಿತ್ರಗಳು ಮುಗಿಯುವ ಮುನ್ನವೇ ರಾಕ್‌ಲೈನ್ ವೆಂಕಟೇಶ್ ತಮ್ಮ ಫೇವರಿಟ್ ನಿರ್ದೇಶಕ ಎಸ್. ನಾರಾಯಣ್ ಕೈಯಲ್ಲಿ ಇನ್ನೊಂದು ರಿಮೇಕ್ ಚಿತ್ರವನ್ನೂ ರೆಡಿ ಮಾಡಲಿದ್ದಾರೆ. ಇದು ಹಿಂದಿಯಲ್ಲಿ ಸೂಪರ್ ಹಿಟ್ ಆಗಿದ್ದ ಪ್ರಿಯದರ್ಶನ್ ನಿರ್ದೇಶನದ 'ಮಾಲಾ ಮಾಲ್ ವೀಕ್ಲಿ' ಚಿತ್ರದ ಜೆರಾಕ್ಸ್ ಕಾಪಿಯಂತೆ. ಇನ್ನೂ ಕನ್ನಡದಲ್ಲಿ ಹೆಸರಿಡದ ಈ ಚಿತ್ರದಲ್ಲಿ ವಿಷ್ಣುವರ್ಧನ್ ನಟಿಸಲಿದ್ದಾರೆ.

ಈ ಮಧ್ಯೆ ದರ್ಶನ್ ಕಾಲ್‌ಶೀಟನ್ನೂ ಪಡೆದಿರುವ ರಾಕ್‌ಲೈನ್ ಅದನ್ನು ಈಗಲೇ ಮಾಡಬೇಕೋ ಬೇಡವೋ ಎಂಬ ಜಿಜ್ಞಾಸೆಯಲ್ಲಿದ್ದಾರಂತೆ. ಕನ್ನಡದಲ್ಲೇ ಇಷ್ಟೊಂದು ಬಿಜಿಯಾಗಿರುವ ರಾಕ್ ತಮಿಳಿನಲ್ಲೂ ಮತ್ತೊಮ್ಮೆ ತಮ್ಮ ಲಕ್ ನೋಡಲು ಸಜ್ಜಾಗಿದ್ದಾರೆ. ಎರಡು ವರ್ಷಗಳ ಹಿಂದೆ ಅಲ್ಲಿನ ಸೂಪರ್ ಸ್ಟಾರ್ ವಿಕ್ರಂನನ್ನು ಹಾಕಿಕೊಂಡು 'ಮಜಾ' ಎಂಬ ಸಿನಿಮಾ ಮಾಡಿದ್ದ ರಾಕ್‌ಲೈನ್ ಆಗ ಕೈ ಸುಟ್ಟುಕೊಂಡಿದ್ದರು. ಈಗ 'ಆಟೋಗ್ರಾಫ್' ಎಂಬ ಹಿಟ್ ಚಿತ್ರ ನೀಡಿದ್ದ ಚೇರನ್ ನಿರ್ದೇಶನದಲ್ಲಿ ಎರಡನೆ ಯತ್ನ ಮಾಡುತ್ತಿದ್ದಾರೆ.



ಹೀಗೆ ಏಕಕಾಲದಲ್ಲಿ ಎರಡು ಭಾಷೆಗಳಲ್ಲಿ ನಾಲ್ಕಾರು ಚಿತ್ರಗಳನ್ನು ನಿರ್ಮಿಸಲು ಹೊರಟಿರುವ ರಾಕ್ ಇದೆಲ್ಲದರ ನಡುವೆ ಮತ್ತೊಂದು ಮಹತ್ವಾಕಾಂಕ್ಷೆಯ ಯೋಜನೆ ಹಾಕಿಕೊಂಡಿದ್ದಾರೆ. ಅದು ಯೋಗರಾಜ್ ಭಟ್ ನಿರ್ದೇಶಿಸಲಿರುವ, ಪುನೀತ್ ರಾಜ್‌ಕುಮಾರ್ ನಟಿಸಲಿರುವ ಚಿತ್ರ. ಅದು ಕೂಡ ಜನವರಿಯಲ್ಲಿ ಸೆಟ್ಟೇರಲಿದೆ.

ಒಂದೆಡೆ ಇದೆಲ್ಲ ಸಿನಿಮಾ ನಿರ್ಮಾಣಕ್ಕೆ ಸಂಬಂಧಪಟ್ಟ ವಿಷಯವಾದರೆ ಮತ್ತೊಂದೆಡೆ ನಾಲ್ಕು ಮಿನಿ ಥಿಯೇಟರುಗಳನ್ನು ಆರಂಭಿಸುವ ಮೂಲಕ ರಾಕ್‌ಲೈನ್ ಪ್ರದರ್ಶಕರೂ ಆಗಲಿದ್ದಾರೆ. ಪೀಣ್ಯಾದಲ್ಲಿ ಇವರ ಮಾಲೀಕತ್ವದ 'ರಾಕ್‌ಲೈನ್ ಮಾಲ್' ತಲೆಯೆತ್ತಿ ನಿಂತಿದೆ. ಈ ಮಾಲ್‌ನಲ್ಲಿ ನಾಲ್ಕು ಮಿನಿ ಥಿಯೇಟರುಗಳು ಇವೆ. ಇದು ಕನ್ನಡ ರಾಜ್ಯೋತ್ಸವದ ಸಂದರ್ಭವಾದ ನವೆಂಬರ್‌ನಲ್ಲಿ ಉದ್ಘಾಟನೆಯಾಗಲಿದೆ.



ತಮ್ಮ ಹೆಸರಿಗೆ ತಕ್ಕಂತೆ ರಾಕ್‌ಲೈನ್ ಕಲ್ಲುಬಂಡೆಯಂತೆ ನಿಲ್ಲದೆ ನಟನೆ, ನಿರ್ಮಾಣ, ಸ್ಟುಡಿಯೋ, ಥಿಯೇಟರ್... ಹೀಗೆ ಚಿತ್ರರಂಗದ ಹಲವಾರು ವಲಯಗಳಲ್ಲಿ ಪಾದರಸದಂತೆ ಸಂಚರಿಸುತ್ತಿದ್ದಾರೆ. ■

RBP LANKESH, Kannada Weekly Price Rs. 10/-10-10-2007 POSTAL OFFICE OF BASAVANAGUDI RNI No.KARKAN200

## 'ಬಿಂದಾಸ್' ಆಗಿ ಬಂದುಹೋದ ಸುಮನ್ ರಂಗನಾಥ್



ಹಲವು ವಾರಗಳ ಹಿಂದೆ ಈಗ ಮುಂಬೈಯಲ್ಲಿ ನೆಲೆಸಿರುವ ಕನ್ನಡದ ಬೆಡಗಿ ಸುಮನ್ ರಂಗನಾಥ್ 'ಗಜ' ಎಂಬ ಚಿತ್ರದ ಐಟಂ ಸಾಂಗ್‌ನಲ್ಲಿ ಕುಣಿದು ಕುಪ್ಪಳಿಸುತ್ತಾಳೆ ಎಂದೂ, ಆನಂತರ ಆಕೆ ತಕರಾರೆತ್ತಿದ್ದರಿಂದ ಆಕೆ ಬರುತ್ತಿಲ್ಲವೆಂದೂ ಸುದ್ದಿಯಾಗಿತ್ತು.

ಆ ಸುದ್ದಿ ಚಾಲ್ತಿಯಲ್ಲಿದ್ದಾಗಲೇ ಆಕೆಯನ್ನು ಯಾಕೆ ಕನ್ನಡಕ್ಕೆ ಮತ್ತೆ ತರಲಾಗುತ್ತಿದೆ ಎಂದು ಕೆಲ ಗಾಂಧಿನಗರಿಗಳು ಪ್ರಶ್ನಿಸಿದ್ದೂ ಉಂಟು. ಆದಕ್ಕೆ ಕಾರಣ ಆಕೆ ಈಗ ನಟಿಯಾಗಿರದೆ ಬರೀ ಗಾಸಿಪ್ ಮತ್ತು ಪಂಚತಾರಾ ಪಾರ್ಟಿಗಳಲ್ಲಿ ಅಂಗಾಂಗಗಳನ್ನು ಪ್ರದರ್ಶಿಸುತ್ತಾ ಸುದ್ದಿ ಮಾಡಿದ್ದೇ ಆಗಿತ್ತು.

ಆದರೆ ಈಗ ಅದೇ ಸುಮನ್ ಯಾವುದೇ ಸದ್ದಿಲ್ಲದೇ ಬೆಂಗಳೂರಿಗೆ ಬಂದು 'ಬಿಂದಾಸ್' ಎಂಬ ಚಿತ್ರದ ಐಟಂ ಸಾಂಗಿನಲ್ಲಿ ಬಿಂದಾಸಾಗಿ ಕುಣಿದು ಕುಪ್ಪಳಿಸಿ ಮತ್ತೆ ಮುಂಬೈಗೆ ಹಾರಿ ಹೋಗಿದ್ದಾಳೆ ಎಂಬ ಸುದ್ದಿ ಬಂದಿದೆ.

ಐವತ್ತರ ಗಡಿ ದಾಟಿರುವ 'ಹಿರಿಯ' ನಿರ್ದೇಶಕ ಡಿ. ರಾಜೇಂದ್ರ ಬಾಬು 'ಬಿಂದಾಸ್' ಚಿತ್ರವನ್ನು ನಿರ್ದೇಶಿಸುತ್ತಿರುವುದರಿಂದ ಆಕೆಯನ್ನು ಕರೆಸಿದ್ದು ಯಾಕೆ ಎಂದು ಮಾತ್ರ ಯಾರೂ ಈಗ ಪ್ರಶ್ನಿಸುತ್ತಿಲ್ಲ!




## ಉಲ್ಟಾ ಪಲ್ಟಾ ಆದ 'ಅನಾಥರು' ಮತ್ತು 'ಮಿಲನ'

'ಅನಾಥರು' ಮತ್ತು 'ಮಿಲನ' ಚಿತ್ರಗಳು ಒಂದೇ ದಿನ ಬಿಡುಗಡೆಯಾಗಿ ಮೊದಲ ವಾರದಲ್ಲಿ 'ಅನಾಥರು' ತುಂಬಿದ ಗೃಹಗಳನ್ನು ಕಂಡಿದ್ದರೆ 'ಮಿಲನ' ಚಿತ್ರ ಕುಂಟುತ್ತಾ ಸಾಗಿತ್ತು.

ಆದರೆ ಎರಡನೇ ವಾರದಲ್ಲಿ ಪರಿಸ್ಥಿತಿ ಉಲ್ಟಾ ಪಲ್ಟಾ ಆಗಿದೆ. ಉಪ್ಪಿ ಅಭಿಮಾನಿಗಳು ಮಾತ್ರ ನೋಡಿ ಎಂಜಾಯ್ ಮಾಡಬಹುದಾದ ಚಿತ್ರ ಎಂಬ ಮಾತು ಚಾಲ್ತಿಗೆ ಬಂದು, ಶತದಿನೋತ್ಸವ ಗ್ಯಾರೆಂಟಿ ಎಂದು ಆರಂಭದಲ್ಲಿ ಅನಿಸಿಕೊಂಡಿದ್ದ 'ಅನಾಥರು' ಎರಡನೇ ವಾರಕ್ಕೆ ಕುಂಟಲಾರಂಭಿಸಿದೆ.

ಅದೇ ಹೊತ್ತಿಗೆ ಹೆಣ್ಣುಮಕ್ಕಳು ನೋಡಬಹುದಾದ ಚಿತ್ರ ಎಂಬ ಮಾತು ಕೇಳಿಬರುತ್ತಿದ್ದು 'ಮಿಲನ' ಈಗ ಚೇತರಿಸಿಕೊಂಡಿದೆ. ಅಷ್ಟೇ ಅಲ್ಲ, ಮೊದಲು 'ಮಿಲನ' ಚಿತ್ರದ ಹೆಸರೇ ಸರಿ ಇಲ್ಲ ಎಂದಿದ್ದವರು ಈಗ 'ಅನಾಥರು' ಟೈಟಲ್ಲೇ ಸರಿ ಇಲ್ಲ ಎಂದು ವಾದಿಸುತ್ತಿದ್ದಾರೆ! ಕನ್ನಡ ಚಿತ್ರರಂಗದಲ್ಲಿ ಇಂತಹ ಸಿಲ್ಲಿ ವಿಷಯಗಳೂ ಚರ್ಚೆಯಾಗುತ್ತಿರುತ್ತವೆ ಎಂಬುದನ್ನು ತೋರಿಸಲು ಇಲ್ಲಿ ಹೇಳಿದ್ದೇವಷ್ಟೇ!



## ಸಾಯಿಗೆ ಕೈಕೊಟ್ಟ ತಂಗಿ

'ದೇವರು ಕೊಟ್ಟ ತಂಗಿ' ಎಂಬ ಚಿತ್ರದಲ್ಲಿ ಶಿವರಾಜ್ ಕುಮಾರ್ ಮತ್ತು ರಾಧಿಕಾ ಜೊತೆಯಾಗಿ ನಟಿಸುತ್ತಾರೆ ಎಂಬ ಜಾಹೀರಾತು ಪ್ರಕಟಗೊಂಡಿತ್ತು. ಅದನ್ನು ಸಾಯಿಪ್ರಕಾಶ್ ತಮ್ಮ ಸ್ವಂತ ಬ್ಯಾನರ್‌ನಲ್ಲಿ ನಿರ್ಮಿಸಲಿದ್ದಾರೆ ಎಂಬ ಮಾತೂ ಕೇಳಿಬಂದಿತ್ತು. ಆದರೆ ಈಗ ತಂಗಿ ರಾಧಿಕಾ ಕೈ ಕೊಟ್ಟಿರುವುದರಿಂದ ಚಿತ್ರ ಆರಂಭವಾಗುವುದು ವಿಳಂಬ ವಾಗುತ್ತಿದೆ.



'ತವರಿಗೆ ಬಾ ತಂಗಿ' ಚಿತ್ರದ ಮುಖಾಂತರ ರಾಧಿಕಾಳಿಗೆ ತಂಗಿಯ ಇಮೇಜನ್ನು ನೀಡಿದ ಸಾಯಿಪ್ರಕಾಶ್ ಆನಂತರ 'ಅಣ್ಣ-ತಂಗಿ' ಚಿತ್ರದ ಮುಖಾಂತರ ಆಕೆಗೆ ಒಂದು ರೀತಿಯಲ್ಲಿ ಸ್ಟಾರ್ ವ್ಯಾಲ್ಯೂ ತಂದುಕೊಟ್ಟರು. ಆ ತಂಗಿಯ ಇಮೇಜನ್ನೇ ಎನ್‌ಕ್ಯಾಷ್ ಮಾಡಲೆಂದು ಸ್ವಂತ ಚಿತ್ರಕ್ಕೆ ಕೈ ಹಾಕಿದ ಸಾಯಿ ಈಗ ಹೊಸ ತಂಗಿಯ ತಲಾಷ್‌ನಲ್ಲಿದ್ದಾರೆ.


ಈ ಮಧ್ಯೆ ತಾವೇ ಸೃಷ್ಟಿಸಿದ 'ತಂಗಿ'ಯ ಬಗ್ಗೆ ಸಾಯಿಪ್ರಕಾಶ್‌ಗೆ ಬೇಸರವಾಗಿದೆ. ಯಾಕೆಂದರೆ, ರಾಧಿಕಾಳನ್ನು ಭೇಟಿಯಾಗಲು ಅವಳ ಕುಟುಂಬದವರು ಸಾಯಿಪ್ರಕಾಶ್‌ಗೆ ಅವಕಾಶ ಮಾಡಿಕೊಡುತ್ತಿಲ್ಲವಂತೆ. ಅನೇಕ ಬಾರಿ ಅವರು ಪ್ರಯತ್ನಿಸಿದ್ದರೂ ಆಕೆಯ ಸುತ್ತ ಮುತ್ತ ಇರುವ ಜನರಿಂದಾಗಿ 'ತಂಗಿ ದರ್ಶನ' ಸಾಧ್ಯವಾಗಿಲ್ಲವಂತೆ. ಹೀಗಾಗಿ ರಾಧಿಕಾ ಸ್ಥಾನದಲ್ಲಿ ಬೇರೊಬ್ಬ ತಂಗಿಯನ್ನು ಕೂರಿಸುವ ಪ್ರಯತ್ನದಲ್ಲಿದ್ದಾರೆ. 'ತಂಗಿ ನೀಡದ ಸೌಭಾಗ್ಯ' ಇದು ಎನ್ನಬಹುದೇ?!



## ಲೇಖನಿ ಜಾಗಕ್ಕೆ ಡೈಲಾಗ್?

ಕನ್ನಡ ಚಿತ್ರರಂಗದಲ್ಲಿ 'ಗಣೇಶ್' ಎಂಬ ಹೆಸರಿನ ಹಾವಳಿ ಮುಂದುವರೆದಿದೆ. ಈ ಹೆಸರನ್ನು ಹೊಂದಿರುವ ಹಲವು ಚಿತ್ರಗಳು ಸೆಟ್ಟೇರುತ್ತಿರುವಾಗಲೇ ವಕ್ರತುಂಡನ ಇತರೆ ಹೆಸರುಗಳನ್ನು ಹೊಂದಿರುವ ಇಬ್ಬರು ಸಿನಿಮಾ ಪತ್ರಕರ್ತರು ಚಿತ್ರರಂಗಕ್ಕೆ ನಟರಾಗಿ ಕಾಲಿಡುತ್ತಿದ್ದಾರೆ. ಹೀಗೆ ಮುಖಕ್ಕೆ ಬಣ್ಣ ಹಚ್ಚಿ ಅರಂಗೇಟ್ರಂ ಮಾಡಲಿರುವವರು ಗಣೇಶ್ ಕಾಸರಗೋಡು ಮತ್ತು 'ರೂಪತಾರಾ' ಪತ್ರಿಕೆಯ ಬಿ. ಗಣಪತಿ. ಇವರು ನಟಿಸುತ್ತಿರುವ ಚಿತ್ರದ ಹೆಸರು 'ಗಂಗಾ ಕಾವೇರಿ'. ಹಿಮಾಲಯದ ತಪ್ಪಲಿನಲ್ಲಿ ಹತ್ತು ದಿನಗಳ ಕಾಲ ಚಿತ್ರದ ಮುಹೂರ್ತದ ಸಮೇತ ಶೂಟಿಂಗ್ ನಡೆಯಲಿದೆ. ಈ ಚಿತ್ರವನ್ನು 'ಅಂಬೇಡ್ಕರ್' ಎಂಬ ಚಿತ್ರವನ್ನು ನಿರ್ದೇಶಿಸಿದ್ದ ವಿಷ್ಣುಕಾಂತ್ ನಿರ್ದೇಶಿಸುತ್ತಿದ್ದಾರೆ.

ಅಂದಹಾಗೆ ಲೇಖನಿಗಿಂತ ಡೈಲಾಗ್ ಪ್ರಬಲ ಎಂದು ಇವರಿಬ್ಬರ ಆಗಮನದಿಂದ ಹೇಳಬಹುದೇ?!





PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar